ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ

# ವನವಾಣಿ

KCO Brindavana is certified 501(3) (c) charity organization and promotes Kannada & Karnataka culture in New Jersey, USA www.brindavana.org

## ೧೨ನೇ ವಾರ್ಷಿಕೋತ್ಸವ








“ಬೆಚ್ಚ ಬಿಡು, ನೆಚ್ಚ ನೆಡು ಕೆಚ್ಚೆದೆಯ ಗುಡಿಯಲ್ಲಿ;/ ಸೆರೆಯ ಹರಿ, ಅರಿಯನಿರಿ, ಹುಟ್ಟಳಿಸು ಹುಡಿಯಲ್ಲಿ!”

– ಕುವೆಂಪು

ಕವಿ ನುಡಿ

## American Goldfinch – ಅಮೇರಿಕಾದ ಗೋಲ್ಡ್ ಫಿಂಚ್



ನಮ್ಮ ನ್ಯೂಜೆರ್ಸಿಯ 'state bird' ಈ ಹೊಂಬಣ್ಣದ ಹಾಡುಹಕ್ಕಿ. ಈ ಪುಟ್ಟ ಹಕ್ಕಿ ವರ್ಷಕ್ಕೆರಡು ಬರಿ ತನ್ನ ಹಳೆಯ ರೆಕ್ಕೆಗಳನ್ನು ಕೊಡವಿಕೊಂಡು ಹೊಸ ಬಟ್ಟೆ ತೊಡುತ್ತದೆ. ಚಿನ್ನವನ್ನೇ ಉಡುಪಾಗಿ ತೊಟ್ಟಂತಿರುವ ಈ ಪುಟ್ಟ ಪಕ್ಷಿಗಳು ಚಳಿಗಾಲದಲ್ಲಿ ಬಹುವಾಗಿ ಕಾಣಸಿಗುತ್ತವೆ. ಬಂಗಾರದ ಮೈಬಣ್ಣ, ಕಪ್ಪು–ಬಿಳಿ ಮಿಶ್ರಿತ ಪುಕ್ಕಗಳನ್ನು ಹೊತ್ತ ಈ ಹಕ್ಕಿಗಳು ಪಕ್ಕ ಸಸ್ಯಹಾರಿಗಳು. ಕೆಲವೊಮ್ಮೆ ಹಿಮರಾಶಿಯಿಂದ ತಪ್ಪಿಸಿಕೊಳ್ಳಲು ಈ ಹಕ್ಕಿಗಳು ತೀವ್ರ ಚಳಿಗಾಲದಲ್ಲಿ ದಕ್ಷಿಣಮುಖಿಯಾಗಿ ಸಂಚರಿಸುವುದೂ ಉಂಟು. ಇವು ಗುಂಪಿನಲ್ಲಿ ಹಾರುವಾಗ ಆಗಸದಲ್ಲಿ ಸುವರ್ಣ ಮೋಡವೊಂದು ಚಲಿಸಿದಂತೆ ಕಾಣುವುದು ಸುಳ್ಳಲ್ಲ.

ಕಣ್ಣು ಕುಕ್ಕುವ ಬಣ್ಣ, ಶಂಖದಂತ ಚೂಪಾದ ಕೊಕ್ಕು, ಮೊನಚಾದ ಬಾಲ– ಇಂಥ ಗುರುತುಗಳಿಂದ ಈ ಹಕ್ಕಿಗಳನ್ನು ಸುಲಭವಾಗಿ ಕಂಡುಹಿಡಿಯಬಹುದು. ಮುಖ್ಯವಾಗಿ ಸೂರ್ಯಕಾಂತಿ ಹೂವಿನ ಬೀಜಗಳನ್ನು ತಿಂದು ಹೊಟ್ಟೆ ಹೊರೆದುಕೊಳ್ಳುವ ಇವು ಆಗಸದಲ್ಲಿ ಹಾರುವಾಗಲೂ ಕೂಗಿ ಜಗತ್ತಿನ ಆಕರ್ಷಣೆಯನ್ನು ತಮ್ಮೆಡೆಗೆ ಸೆಳೆದುಕೊಳ್ಳುತ್ತವೆ. ಸಾಧಾರಣವಾಗಿ ಈ ಹಕ್ಕಿಗಳ ಆಯುಷ್ಯ ಸುಮಾರು ಹತ್ತು ವರ್ಷಗಳು. ಮುಖ್ಯವಾಗಿ ಈ ಹಕ್ಕಿಗಳ ಬಣ್ಣ ತಿಳಿ ಹಳದಿಯಿಂದ ದಟ್ಟ ಹೊಂಬಣ್ಣಕ್ಕೆ ತಿರುಗುವಾಗ ವಸಂತಋತುವಿನ ಆಗಮನವನ್ನು ಸೂಚಿಸುವಂತಿರುತ್ತದೆ.

## Indian Roller – ಕನ್ನಡದ ನೀಲಕಂಠ



ಮೂಲತಃ ಏಷ್ಯಾ ಖಂಡದ ವಾಸಿ ಈ ಇಂಡಿಯನ್ ರೋಲರ್, ಕರ್ನಾಟಕದ 'ಸ್ಟೇಟ್ ಬರ್ಡ್' ಕೂಡ ಹೌದು.

ಆಗಸದಲ್ಲಿ ಏರೋಬಿಕ್ಸ್ ಮಾಡುವ ಮೂಲತಃ ಏಷ್ಯಾ ಖಂಡದ ವಾಸಿ ಈ ಇಂಡಿಯನ್ ರೋಲರ್. ಆಗಸದಲ್ಲಿ ಏರೋಬಿಕ್ಸ್ ಮಾಡುವ ರೀತಿಯಲ್ಲಿ ತಿರುತಿರುಗಿ ಹಾರಿ ನೋಡುಗರ ಮನಸೂರೆಗೊಳ್ಳುವ ಕಾರಣಕ್ಕಾಗಿ ಈ ಹಕ್ಕಿಗೆ 'ರೋಲರ್' ಎಂಬ ಹೆಸರು ಬಂದಿದೆ. ಕಂದು– ನೀಲಿ– ಹಸಿರು– ಬಿಳಿ ಬಣ್ಣಗಳ ಮಿಶ್ರಣವೇ ಈ ಪಕ್ಷಿಗಳಿಗೊಂದು ಆಕರ್ಷಣೆಯನ್ನು ತಂದಿದೆ. ಅಲ್ಲದೇ ನೇರಳೆ– ಗಾಢ ನೀಲಿ– ತಿಳಿನೀಲಿಗಳ ಚಿತ್ತಾರವೇ ಈ ಹಕ್ಕಿಗಳ ರೆಕ್ಕೆ– ಮೈಬಣ್ಣವಾಗಿದೆ. ತೆರೆದ ಹುಲ್ಲುಗಾವಲಿನಲ್ಲಿ, ರಸ್ತೆ ಪಕ್ಕದ ರೆಂಬೆ–ಕೊಂಬೆಗಳ ಮೇಲೆ ಯಥೇಚ್ಛವಾಗಿ ಕಾಣಸಿಗುವ ಈ ಹಕ್ಕಿಯನ್ನು ಕರ್ನಾಟಕ ರಾಜ್ಯ ತಮ್ಮ 'ಸ್ಟೇಟ್ ಬರ್ಡ್' ಅಂತ ಘೋಷಿಸಿಕೊಂಡಿವೆ.

ನೆಲದ ಮೇಲೆ ಸಿಗುವ ಹುಳಗಳನ್ನೂ, ಮಿಡತೆಗಳನ್ನೂ ಆಹಾರವಾಗಿ ಸೇವಿಸುವ ಇವು ದಕ್ಷಿಣ ಭಾರತದಲ್ಲಿ ಹೇರಳವಾಗಿ ಕಂಡುಬರುತ್ತವೆ. ನಾನಾ ಕಾರಣಗಳಿಂದ ಉತ್ತರ ಭಾರತದಲ್ಲಿ ಇವುಗಳ ಸಂಖ್ಯೆ ಕ್ರಮೇಣವಾಗಿ ನಶಿಸುತ್ತಿದೆ. ಬೆಂಕಿಯನ್ನು ಕಂಡರೆ ಇವು ಮೋಡಿಗೊಳಗಾದಂತೆ ಆಕರ್ಷಣೆಗೊಳಗಾಗುತ್ತವೆ. ಕೆಲವೊಮ್ಮೆ ರಾತ್ರಿಯ ರಸ್ತೆದೀಪದ ಬೆಳಕಿನಲ್ಲಿಯೂ ಇವು ಅಹಾರಕ್ಕಾಗಿ ಬೇಟೆಯಾಡುವುದುಂಟು. ಅದೇ ಕಾರಣಕ್ಕಾಗಿ ರಸ್ತೆಯ ಮೇಲೆ ಓಡಾಡುವ ವಾಹನಗಳಿಗೆ ಬಲಿಯಾಗುವುದೂ ಉಂಟು. ಕೆಲವೊಮ್ಮೆ ಕಾಗೆಯ ರೀತಿಯೇ ಕೂಗುವ ಇವು ಋತುಗಳಿಗೆ ಅನುಗುಣವಾಗಿ ಬೇರೆಬೇರೆ ರೀತಿಯಲ್ಲಿ ದನಿ ತೆಗೆಯುತ್ತವೆ. ಮರಕುಟಿಗ ಹಕ್ಕಿ ಕೊರೆದು ಹೋದ ಮರಗಳ ಕೊಂಬೆಯಲ್ಲಿ ಗೂಡು ಕಟ್ಟಿಕೊಂಡು ಮೊಟ್ಟೆ ಇಟ್ಟು ಗಂಡು– ಹೆಣ್ಣುಗಳೆರಡೂ ಕಾವು ಕೊಟ್ಟು ಮರಿ ಮಾಡುತ್ತವೆ. ಸರಿಸುಮಾರು ಒಂದು ತಿಂಗಳ ನಂತರ ಆ ಮರಿಗಳು ಗೂಡು ಬಿಟ್ಟು ಹಾರಿಯೂ ಹೋಗುತ್ತವೆ. ನೀಲಿ ಆಗಸದಲ್ಲಿ ಏರೋಬಿಕ್ಸ್ ಮಾಡುವ ಈ ನೀಲಿ ಹಕ್ಕಿಯ ವಿವಿಧ ಭಂಗಿಗಳ ಕಾಣುವುದೇ ಒಂದು ಚೆಂದ, ಮನಕೆ ಆನಂದ.




# ಬೃಂದಾವನ ಸಂಕೇತ ಗೀತೆ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೇ
ಮುನ್ನಡೆಯ ಕನ್ನಡದ ದಾರಿ ದೀವಿಗೆ ನೀನೆ

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ
ಕಾಮಕ್ರೋಧವನಳಿಸಿ ಕಾಪಾಡು ತಾಯೇ
ಒಂದಾದ ದೇಶದಲಿ ಹೊಂದಿ ಬಾಳದ ಸುತರ
ಹೊಸಬೆಸುಗೆಯಲಿ ಬಿಗಿದು ಒಂದು ಗೂಡಿಸೆ ತಾಯೇ

ಯಾವೆಣ್ಣೆಯಾದರೂ ಬೆಳಗುವುದೇ ಗುರಿಯೆಂಬ
ತತ್ತ್ವವನು ನೀನೆತ್ತಿ ತೋರುಬಾ ತಾಯೇ
ಎದೆಯಾಂತರಾಳದಲಿ ಪುಟಿವ ಕಾರಂಜಿಯಲಿ
ಒಂದಾಗಿ ಕೂಗಲಿ ಕನ್ನಡಾ ಕನ್ನಡಾ...

**– ಜಿ.ವಿ.ಅಯ್ಯರ್**









## ಪರಿವಿಡಿ

ಸಂಪಾದಕೀಯ 4
ಸಂದೇಶಗಳು 7
ಮಿಲನ ತಂಡದ ಕಾರ್ಯ ಚಟುವಟಿಕೆಗಳು 9
ಲೇಖನಗಳು 27
ಚಿತ್ರ ಬೃಂದಾವನ 63
ಪ್ರಾಯೋಜಕರು 81

# ಸಂಪಾದಕೀಯ

ನ್ಯೂ ಜೆರ್ಸಿ ಕನ್ನಡ ಪ್ರೇಮಿಗಳೊಂದಿಗೆ ಎರಡು ಮಾತು...

ತಮಗೆಲ್ಲ ಬೃಂದಾವನ ಮಿಲನ ತಂಡದ ಪ್ರೀತಿಪೂರ್ವಕ ವಂದನೆಗಳು.

ಬೃಂದಾವನ ಕನ್ನಡ ಸಾಂಸ್ಕೃತಿಕ ಸಂಸ್ಥೆಯ 12ನೇ ವಾರ್ಷಿಕೋತ್ಸವದ ಸಂಚಿಕೆ "ವನವಾಣಿ"ಯನ್ನು ಮಿಲನ ತಂಡದ ಪರವಾಗಿ ನಿಮ್ಮ ಮುಂದಿಡಲು ಅತ್ಯಂತ ಹರ್ಷವೆನಿಸುತ್ತಿದೆ.

ಎರಡು ವರ್ಷ ಎಷ್ಟು ಬೇಗ ಉರುಳಿದವು. 2014ರ ಮಿಲನ ತಂಡದ ಉದ್ಘಾಟನಾ ಸಮಾರಂಭ, ಬ್ರಿಜ್‌ವಾಟರ್ ವೆಂಕಟೇಶ್ವರ ದೇವಸ್ಥಾನದ ಸಭಾಂಗಣದಲ್ಲಿ, ಮೊನ್ನೆ ಮೊನ್ನೆ ನಡೆದಂತಿದೆ. ಕಾಲ ಚಕ್ರ ಉರುಳುವ ವೇಗ ಒಂದು ಕ್ಷಣ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದರೂ, ಅದೇ ಸಮಯದಲ್ಲಿ, ಸಮಾನ ಮನಸ್ಕರ ಒಂದು ತಂಡ, ಮನಸ್ಸಿಟ್ಟು ಮಾಡುವ ಸಾಧನೆ ಹೆಮ್ಮೆಯೆನಿಸುತ್ತದೆ. ನಿಮ್ಮ ಬೃಂದಾವನ ಸಂಸ್ಥೆಯ ಕಳೆದ ಎರಡು ವರ್ಷಗಳ ಸಾಧನೆಯ ಪಕ್ಷಿ ನೋಟ ಮತ್ತು ಹೊರನಾಡ ಕನ್ನಡಿಗರ ಅನಿಸಿಕೆಗಳ ಸಂಕಲನ – ಈ ವನವಾಣಿ 2016ರ ವಿಶೇಷ ಸಂಚಿಕೆ.

ಈ ವನವಾಣಿಯ ಮುಖ ಪುಟದಲ್ಲಿರುವ ನ್ಯೂ ಜೆರ್ಸಿ ರಾಜ್ಯ ಪಕ್ಷಿ "ಅಮೇರಿಕದ ಬಂಗಾರದ ಗುಬ್ಬಿ", ನಮ್ಮೂರ "ಕನ್ನಡದ ಗುಬ್ಬಿ"ಗೆ ಹತ್ತಿರದ ಸಂಬಂಧಿ. ಈ ಬಂಗಾರದ ಗುಬ್ಬಿ, ಶಕ್ತಿ ಹಾಗೂ ಪ್ರೀತಿಗಳ ಸಂಕೇತ. ನಮ್ಮ ನ್ಯೂ ಜೆರ್ಸಿ ಕನ್ನಡಿಗರನ್ನು ಹೋಲಿಸಲು ಇದಕ್ಕಿಂತ ಉತ್ತಮ ಪ್ರತಿಮೆ ಬೇಕೇ? ಈ ಕವಚದ ಒಳಬದಿಗೆ ನಮ್ಮ ಕರ್ನಾಟಕದ ರಾಜ್ಯ ಪಕ್ಷಿ "ಕನ್ನಡದ ನೀಲಕಂಠನ" ಚಿತ್ರವಿದೆ. ಈ ಸುಂದರ ಗುಬ್ಬಿ, ನಮ್ಮ ಕನ್ನಡಿಗರ ವಿಶೇಷ ಪ್ರತಿಭೆ ಮತ್ತು ಸೌಂದರ್ಯಕ್ಕೆ ಸಾಕ್ಷಿ. ಕಳೆದ ಎರಡು ವರ್ಷದ ನ್ಯೂ ಜೆರ್ಸಿಯ ಈ ಕನ್ನಡ ಸೌಂದರ್ಯವನ್ನು ಹಿಡಿದಿಡುವ ಸಣ್ಣ ಪ್ರಯತ್ನವೇ ಈ ವನವಾಣಿಯ ವಿಶೇಷಾಂಕ.

ಬೃಂದಾವನ ಮಿಲನ ತಂಡ, ಎರಡು ವರ್ಷಗಳಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ತಮಗಾಗಿ ನೆಡಿಸಿಕೊಟ್ಟಿದೆ. ಈ ಎಲ್ಲ ಕಾರ್ಯಕ್ರಮಗಳ ಪಕ್ಷಿ ನೋಟದೊಂದಿಗೆ ಅವುಗಳನ್ನು ವಿಶೇಷವಾಗಿ ಚಿತ್ರಗಳಲ್ಲಿ ಸೆರೆಹಿಡಿದಿದ್ದೇವೆ. ಬೃಂದಾವನ ಕನ್ನಡ ಶಾಲೆ, ಯುವ ಬೃಂದಾವನ, ಬೃಂದಾವನ ಸಮಾಜ ಸೇವೆ, ಸಾಹಿತ್ಯ ಬೃಂದಾವನದ ವಿವರಗಳು ಇಲ್ಲಿವೆ.

ನಮ್ಮ ಹಲವಾರು ಕನ್ನಡ ಸ್ನೇಹಿತರು ವನವಾಣಿಗಾಗಿ ವಿಶೇಷ ಲೇಖನಗಳನ್ನು ಬರೆದು ಕೊಟ್ಟಿದ್ದಾರೆ. ಅವರಿಗೆಲ್ಲ ನಾವು ಅತ್ಯಂತ ಆಭಾರಿ. ಈ ಲೇಖನಗಳು, ಅನಿವಾಸಿ ಕನ್ನಡಿಗರ ಬರವಣಿಗೆಯ ಕಿರು ಪರಿಚಯ ಮಾಡುವುದರೊಂದಿಗೆ ಮುಂದೊಂದು ದಿನ ಕನ್ನಡ ಸಾಹಿತ್ಯಕ್ಕೆ ಇವರೆಲ್ಲ ಉತ್ತಮ ಕೊಡುಗೆ ನೀಡುವ ಭರವಸೆ ಮೂಡಿಸುತ್ತದೆ. “ಕಾವ್ಯ ಕಡಮೆ”ಯವರಂತಹ ಪ್ರಶಸ್ತಿ ವಿಜೇತ ಬರಹಗಾರ್ತಿ ನಮ್ಮೊಂದಿಗಿರುವುದು ನಮ್ಮ ಹೆಮ್ಮೆಗೆ ಮತ್ತೊಂದು ಗರಿ.

ನಮ್ಮ ಬೃಂದಾವನ, ನ್ಯೂ ಜೆರ್ಸಿ ಕನ್ನಡಿಗರ ಒಟ್ಟಾರೆ ಸಂಘಟನೆಯಾದರೂ, ಕರ್ನಾಟಕದಲ್ಲಿರುವಂತೆ, ಇಲ್ಲಿಯೂ ಹಲವಾರು ಕನ್ನಡಿಗರ ಸಂಸ್ಥೆಗಳು ತಮ್ಮ ವಿಶೇಷತೆ ಉಳಿಸಿಕೊಂಡು ಬಂದಿವೆ. ಸಾಹಿತ್ಯ ಪ್ರೇಮಿಗಳ ಗುಂಪು ಒಂದಾದರೆ, ಮತ್ತೆ ಕೆಲವು ತಮ್ಮ ಧರ್ಮಗಳನ್ನು ಕನ್ನಡದೊಂದಿಗೆ ಜೊತೆಗೂಡಿಸಿವೆ. ಹಲವು ಕನ್ನಡ ಸಹೋದರ ಭಾಷೆಗಳ ಸಂಘಟನೆಗಳೊಂದಿಗೆ, ನಮ್ಮ ಸಂಗೀತ ಮತ್ತು ನೃತ್ಯ ಗುರುಗಳು, ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿದ್ದಾರೆ. ಇವರೆಲ್ಲರ ಶ್ರಮವನ್ನು ಸೆರೆಹಿಡಿಯುವ ಸಣ್ಣ ಪ್ರಯತ್ನ, ಈ ಸಂಚಿಕೆಯಲ್ಲಿರುವ – ನ್ಯೂ ಜೆರ್ಸಿಯಲ್ಲಿ ಕನ್ನಡದ ಡಿಂಡಿಮ.

ನಮಗೆಲ್ಲ ಕನ್ನಡ ಸಾಹಿತ್ಯದ ಬಗ್ಗೆ ಸಾಕಷ್ಟು ಅಭಿಮಾನವಿದ್ದರೂ ಅವುಗಳನ್ನ ಓದುವ ವ್ಯವಧಾನವಿಲ್ಲದಿರಬಹುದು. ಈ ವನವಾಣಿಯ ಪ್ರತಿ ಪುಟದಲ್ಲಿ ಒಂದು "ಕವಿ ನುಡಿ" ಯನ್ನು ಅಳವಡಿಸಿದ್ದೇವೆ. ಇಲ್ಲಿರುವ ಹೆಸರಾಂತ ಕನ್ನಡ ಕವಿ ಬರಹಗಳ, ಆಯ್ದ ಭಾಗಗಳ ಮೇಲೆ ಕಣ್ಣಾಡಿಸಿದಾಗ, ನಿಮಗೆ ಆ ಕೃತಿಗಳನ್ನು ಮತ್ತೆ ಓದಬೇಕೆನಿಸಿದರೆ ನಮ್ಮ ಶ್ರಮ ಸಾರ್ಥಕವಾದೀತು.





ನಿಮ್ಮ ಈ ವನವಾಣಿ ಇಷ್ಟು ಸುಂದರವಾಗಿ ಮೂಡಿಬರಲು ಹತ್ತಕ್ಕೂ ಹೆಚ್ಚು ಕನ್ನಡಪ್ರೇಮಿಗಳ ಸಂಪಾದಕ ಮಂಡಳಿ ಮನಸ್ಪೂರ್ವಕವಾಗಿ ಶ್ರಮಿಸಿದ್ದಾರೆ. ಇವರೆಲ್ಲರ ಶ್ರಮ ಶ್ಲಾಘನೀಯ. ಬೃಂದಾವನ ಸದಸ್ಯರಾಗಿದ್ದು, ಈಗ ದೂರದ ಮಿನ್ನಿಸೋಟದಲ್ಲಿದ್ದರೂ, ಈ ಸಂಚಿಕೆಗಾಗಿ ಹಗಲಿರುಳು ಶ್ರಮಿಸಿದ ಪ್ರಶಾಂತ್ ಜೋಶಿಯವರಿಗೆ ನಮ್ಮ ವಿಶೇಷ ಕೃತಜ್ಞತೆಗಳು. ಈ ಸಂಚಿಕೆಯನ್ನು ಸುಂದರವಾಗಿ ಡಿಸೈನ್ ಮಾಡಿಕೊಟ್ಟ ಸುರೇಶ್ ಕುಮಾರ್ ಮತ್ತು ಮುದ್ರಿಸಿ ಕೊಟ್ಟ ಜ್ವಾಲಾಮುಖಿ ಮುದ್ರಣಾಲಯದವರಿಗೆ ನಾವು ಅತ್ಯಂತ ಆಭಾರಿ.

ಈ ಸಂಚಿಕೆಯನ್ನು ಹೊರತರಲು ಅವಕಾಶ ಮಾಡಿಕೊಟ್ಟ ಬೃಂದಾವನ ಮಿಲನ ತಂಡಕ್ಕೆ ಸಂಪಾದಕ ಮಂಡಳಿಯ ಹೃತ್ಪೂರ್ವಕ ನಮನ. ವನವಾಣಿ, ಇಂದು ನಿಮ್ಮ ಕೈ ಸೇರಲು ಮುಖ್ಯ ಕಾರಣೀಕರ್ತರಾದ ನಮ್ಮ ಪ್ರಾಯೋಜಕರು ಮತ್ತು ಸಹೃದಯಿ ಓದುಗರಾದ ತಮಗೆಲ್ಲ, ನಮ್ಮ ಹೃದಯ ಪೂರ್ವಕ ವಂದನೆಗಳು

ಈ ವಿಶೇಷ ವನವಾಣಿ ಸಂಚಿಕೆ ನಿಮಗಾಗಿ.. ಓದಿ, ನೋಡಿ ಆನಂದಿಸಿ. ತಮಗೆಲ್ಲ ಮುಂಬರುವ ವರ್ಷಗಳು, ಕನ್ನಡಮ್ಮನ ಕೃಪೆಯಿಂದ ಸಂತಸ ತರಲಿ.

**ಧನ್ಯವಾದಗಳು,**
**ಡಾ. ಅಶೋಕ್ ಕಟ್ಟಿಮನಿ**
**ಸಂಪಾದಕ ವರ್ಗದ ಪರವಾಗಿ...**

**ಸಂಪಾದಕ ವರ್ಗ**


ಡಾ. ಅಶೋಕ್ ಕಟ್ಟಿಮನಿ


ಪ್ರಶಾಂತ್ ಜೋಶಿ


ಕಾವ್ಯ ಕಡಮೆ


ದಾಶರಥಿ ಭಟ್ಟು


ಭಾಸ್ಕರ್ ತೈಲಗೇರಿ



ರಾಘವೇಂದ್ರ ಕುಂದಲಗುರ್ಕಿ


ಪ್ರಶಾಂತ್ ಮುರುಗೇಂದ್ರಪ್ಪ


ಸತ್ಯ ಪ್ರಸಾದ್


ವಿದ್ಯಾ ಕಲ್ಲೂರ್

# ಅಧ್ಯಕ್ಷರ ನುಡಿ



ನಮಸ್ಕಾರ,

ನ್ಯೂ ಜೆರ್ಸಿ ಮತ್ತು ವಿಶ್ವದ ಎಲ್ಲಾ ಕನ್ನಡಿಗರಿಗೆ ಶುಭಾಶಯಗಳು!

ಬೃಂದಾವನದ ಕೈಂಕರ್ಯ ಹೊತ್ತು ಎರಡು ವರುಷ ಅವಧಿ ಪೂರ್ಣವಾಗುತ್ತಿದೆ, ಈ ಎರಡು ವರುಷ ನ್ಯೂ ಜೆರ್ಸಿ ಕನ್ನಡ ವಾತಾವರಣಕ್ಕೆ ಹೊಸ ಉತ್ಸಾಹ ತುಂಬಿದೆ ಎನ್ನಬಹುದು. ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲದೆ, ಹಿತದೃಷ್ಟಿಯ ಹೊಸ ಚಟುವಟಿಕೆ ಹಮ್ಮಿ, ಚಾಲ್ತಿ ನೀಡಿ, ಅಕ್ಕರೆಯಿಂದ ಪೋಷಿಸಿದ್ದೇವೆ. ಇವುಗಳೇ ಯುವ ಬೃಂದಾವನ, ಸಾಹಿತ್ಯ ಬೃಂದಾವನ, ಬೃಂದಾವನ ವಾಣಿ, ಬೃಂದಾವನ ಅಕ್ಷರ ಭಂಡಾರ, ಬೃಂದಾವನ ಕನ್ನಡ ಕಲಿಸೋಣ – ಕನ್ನಡ ಶಾಲೆ. ಈ ಬೃಂದಾವನ ಹೊಸ ಮುಕುಟ ಮಣಿಗಳು ನ್ಯೂ ಜೆರ್ಸಿ ಕನ್ನಡ ಮತ್ತು ಕನ್ನಡಿಗರ ಮನಸ್ಸನ್ನು ಗೆದ್ದಿದೆ.

ಬೃಂದಾವನದ ಕಳೆದ 2 ವರುಷದ ನನಗೆ ಹೆಮ್ಮೆ ಎನಿಸುವ ಕೆಲುವು ಘಟ್ಟಗಳು!

ನವೆಂಬರ್ 7, 2015 ರಂದು ಸೌತ್ ಬ್ರುನ್ಸ್ವಿಕ್ ನಲ್ಲಿ  ಶುರುವಾದ ಬೃಂದಾವನ ಕನ್ನಡ ಶಾಲೆ, ಈಗ ದೊಡ್ಡದಾಗಿ ಬೆಳೆದಿದೆ! ಸೌತ್ ಬ್ರುನ್ಸ್ವಿಕ್ ಅಲ್ಲದೆ, ಈಸ್ಟ್ ವಿಂಡ್ಸರ್ ಲೈಬ್ರರಿ ಮತ್ತು ಎಡಿಸನ್ ಸ್ಟೆಲ್ಟನ್ ಸಮುದಾಯ ಭವನದಲ್ಲಿ 125 ಕ್ಕೂ ಹೆಚ್ಚು ಕನ್ನಡದ ಕಂದಮ್ಮಗಳು ಸುಲಭ ಕನ್ನಡ ಕಲಿಕಾ ವಿಧಾನ (ಸಕವಿ) ದಲ್ಲಿ ಕನ್ನಡ ಕಲಿಯುತ್ತಿದ್ದಾರೆ!

ಬೃಂದಾವನ ಗಣೇಶ ಹಬ್ಬದಲ್ಲಿ ಯಶಸ್ವಿಯಾಗಿ ಎರಡು ಸಾಹಿತ್ಯ ಬೃಂದಾವನ ನಡೆಸಿ ನ್ಯೂ ಜೆರ್ಸಿಯ ಸಾಹಿತ್ಯ ರಸಿಕರಿಗೆ ರಸ ದೌತಣ ಬಡಿಸಿದ ನಮ್ಮ ಕವಿಗಳಿಗೆ ನಮೋ ನಮಃ. ಕನ್ನಡ ಪುಸ್ತಕಗಳ ಒಂದು ದೊಡ್ಡ ಭಂಡಾರವೇ – ಬೃಂದಾವನ ಅಕ್ಷರ ಭಂಡಾರ, ಈಗ 2 ವರುಷದ ಹರಯ – ಕನ್ನಡ ಪುಸ್ತಕಗಳ ಕೈ ಕೈ ವರ್ಗಾವಣೆ ಹೆಚ್ಚಾಗಿದೆ , ಕನ್ನಡ ಸಾಹಿತ್ಯದ ಚರ್ಚೆ ಬೃಂದಾವನದ ಸಾಮಾಜಿಕ ಜಾಲ ತಾಣಗಳಲ್ಲಿ ಗಹನವಾಗಿ ನಡೆದಿದೆ.

ನವೆಂಬರ್ 1, 2015 ಆರಂಭವಾದ "ಬೃಂದಾವನ ವಾಣಿ" ಈ–ಪತ್ರಿಕೆಯು ನ್ಯೂ ಜೆರ್ಸಿ ಅಲ್ಲದೆ ವಿಶ್ವದ ಎಲ್ಲೆಡೆ ಅಭಿಮಾನಿ ವರ್ಗ ಪಡೆದಿದೆ. ಈ ನವೆಂಬರ್ 1 2016 ಮಿಲನ ತಂಡದ ಕೊನೆಯ ಬೃಂದಾವನ ವಾಣಿ ಹೌದು. ಸೆಪ್ಟೆಂಬರ್ 4 ರಿಂದ 6, 2015 ರಾಲೆ, ನಾರ್ತ್ ಕರೋಲಿನಾದಲ್ಲಿ ನಡೆದ 3ನೇ ನಾವಿಕ – ವಿಶ್ವ ಕನ್ನಡ ಸಮ್ಮೇಲನಕ್ಕೆ ಬೃಂದಾವನದಿಂದ 75 ಜನರ ದಂಡು ಹೋಗಿ ಕನ್ನಡದ ಹಬ್ಬದಲ್ಲಿ ಹಲವಾರು ಕಾರ್ಯಕ್ರಮಗಳನ್ನ ಕೊಟ್ಟು , ಪಾಲ್ಗೊಂಡು ಪ್ರಣಯ ರಾಜ ಶ್ರೀನಾಥ್ ಸಂಭ್ರಮದಲ್ಲಿ ಭಾಗವಹಿಸಿ ಸಂತೋಷ ಪಟ್ಟ ಸಮಯ ಅಮೋಘ.

ಸೆಪ್ಟೆಂಬರ್ 2, 3 ಮತ್ತು 4, 2016 ರಂದು ಅಟ್ಲಾಂಟಿಕ್ ಸಿಟಿ, ನ್ಯೂ ಜೆರ್ಸಿ ಯಲ್ಲಿ ನಡೆದ 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನಕ್ಕೆ , 4000 ಕ್ಕೂ ಹೆಚ್ಚು ಕನ್ನಡ ಬಾಂಧವರ ಜೊತೆಗೂಡಿ ವಿಜೃಂಭಣೆ ಯಿಂದ ಕನ್ನಡದ ತಾಯಿ ಭುವನೇಶ್ವರಿಯನ್ನು ಆರಾಧಿಸಿದೆವು. 350ಕ್ಕೂ ಹೆಚ್ಚು ಬೃಂದಾವನ ಸದಸ್ಯರು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ "ರೈತ ನಿನಗೆ ನಮೋ ನಮಃ" ಕನ್ನಡದ ರೈತನಿಗೆ ಒಂದು ನಮನ, ಬೃಂದಾವನ ಕನ್ನಡ ಶಾಲೆಯಿಂದ ರೂಪಕ 'ಜ್ಞಾನ ಪೀಠ ವೈಭವ', ದಶಕದ ಹಾಡಿಗೆ ನಾಟ್ಯದ ಮಿಲನ ಅದ್ದೂರಿ ನೃತ್ಯ ರೂಪಕ, ಅಕ್ಕಾ ಮೆರವಣಿಗೆ ಹೀಗೆ ಅನೇಕ ಯಶಸ್ವೀ ಕಾರ್ಯಕ್ರಮಗಳನ್ನ ನೀಡಿದೆವು. ಬೃಂದಾವನದ ಸದಸ್ಯರು ಅತಿ ಹೆಚ್ಚು ಸಂಖ್ಯೆಯಲ್ಲಿ, ಹಲವಾರು ಜವಾಬ್ದಾರಿ ಹೊತ್ತು ಅಮೋಘವಾಗಿ ನಿರ್ವಹಿಸಿದರು. ಒಂದು ಮಾತಿನಲ್ಲಿ ಹೇಳ ಬೇಕೆಂದರೆ 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನಕ್ಕೆ 'ಬೆನ್ನೆಲುಬಾಗಿ'ದ್ದರು.

ಬೃಂದಾವನದ ಅಧ್ಯಕ್ಷನಾಗಿ 2 ವರುಷ ಮುಗಿಯುತ್ತಾ ಬಂದಿದೆ, ಎರಡು ವರುಷ ನ್ಯೂ ಜೆರ್ಸಿ ಕನ್ನಡ ಮತ್ತು ಕನ್ನಡಿಗರ ಸೇವೆ ಮಾಡಲು ಅವಕಾಶ ಮಾಡಿ ಕೊಟ್ಟು ಕೈ ಜೋಡಿಸಿದ ಮಿಲನ ತಂಡ, ವಾಣಿ ತಂಡ, ಬೃಂದಾವನ ಟ್ರಸ್ಟೀ, ಬೃಂದಾವನ ಕನ್ನಡ ಶಾಲೆ ತಂಡಗಳಿಗೆ ನಾನು ಚಿರ ಋಣಿ. ಇಷ್ಟೆಲ್ಲಾ ಮಾಡಲು ಕೈ ಜೋಡಿಸಿದ ನನ್ನ ಸಂಸಾರ – ಪತ್ನಿ ಸಂಧ್ಯಾ ಮಲ್ಲಿಕ್, ಮಕ್ಕಳು ಅನಘ ಪ್ರಸಾದ್ ಮತ್ತು ಅದಿತಿ ಪ್ರಸಾದ್, ಇದಲ್ಲದೆ ಹಲವಾರು ಜನರ ಬೆಂಬಲ, ಹಿರಿಯರ ಆಶೀರ್ವಾದ ಮತ್ತು ಹಿತೈಷಿಗಳ ಹಿತ ಮತ್ತು ಪ್ರೋತ್ಸಾಹದ ನುಡಿಗಳು ಈ ಎರೆಡು ವರ್ಷಗಳ ಸುಂದರ ಅನುಭವಕ್ಕೆ ಕಾರಣವಾಗಿದೆ.  ಬೃಂದಾವನ 'ಸ್ಫೂರ್ತಿ' ತಂಡದಲ್ಲಿ ಮೊದಲ ಬಾರಿ ಊಟದ ವ್ಯವಸ್ಥೆ, ಎರೆಡನೆ ಬಾರಿ ಬೃಂದಾವನ 'ಸಂಭ್ರಮ' ತಂಡದಲ್ಲಿ ಸೆಕ್ರೆಟರಿಯಾಗಿ ಮೂರನೇ ಬಾರಿ ಬೃಂದಾವನ 'ಮಿಲನ' ತಂಡದಲ್ಲಿ ಅಧ್ಯಕ್ಷನಾಗಿ, ಮುಂದಕ್ಕೆ ಟ್ರಸ್ಟೀ ಯಾಗಿ, ನಿಮ್ಮೆಲ್ಲರ ಸಂಗಡ ನಗು ನಗುತ್ತಾ ಬೃಂದಾವನದ ನಂಟು ಹೀಗೆ ಇರಲಿ ಎಂದು ಆಶಿಸುತ್ತೇನೆ.

ಹೊಸದಾಗಿ ಮೂಡಿಬರುವ ತಂಡವು ನಾವು ಮಾಡಿದ ಎಲ್ಲಾ ಕಾರ್ಯಗಳನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂಬ ಭರವಸೆ ನನಗಿದೆ.

**ಮಲ್ಲಿಕ್ ಪ್ರಸಾದ್**
ಅಧ್ಯಕ್ಷರು – ಬೃಂದಾವನ । 2015–16





# ಬೃಂದಾವನ ವಿಶ್ವಸ್ತ ಮಂಡಳಿ ಸದಸ್ಯರ ಸಂದೇಶಗಳು



## ಬೆನ್ ಕಾಂತರಾಜು

ಕಳೆದ ಎರಡು ವರ್ಷಗಳಲ್ಲಿ ಮಿಲನ ತಂಡ ಮಾಡಿದ ಸಾಧನೆ ಶ್ಲಾಘನೀಯ.ಅದಕ್ಕಾಗಿ ನನ್ನ ಹಾರ್ದಿಕ ಅಭಿನಂದನೆಗಳು. ಈ 12 ನೇ ವಾರ್ಷಿಕ ಸಮಾರಂಭದಲ್ಲಿ, ಸ್ಮರಣ ಸಂಚಿಕೆ ತಂಡ ಅತ್ಯಂತ ಶ್ರಮವಹಿಸಿ ಮಿಲನ ತಂಡದ ಎಲ್ಲ ಕಾರ್ಯ ಚಟುವಟಿಕೆಗಳನ್ನ ಸಂಕಲಿಸಿದ್ದಾರೆ, ಅವರ ಕೊಡುಗೆ ಪ್ರಶಂಸನೀಯ.

## ಡಾ. ರಾಮ್ ಬೆಂಗಳೂರ್



ಮಿಲನ ತಂಡ ಕಳೆದ ಎರಡು ವರ್ಷಗಳಲ್ಲಿ ಮಾಡಿದ ಸಾಧನೆ ಅಪಾರ. ಕನ್ನಡಮಕ್ಕಳ ಶಾಲೆ, ಯುವ ಬೃಂದಾವನ, ಸಾಹಿತ್ಯ ಬೃಂದಾವನ ಹೀಗೆ ಹಲವಾರು ಕಾರ್ಯಕ್ರಮಗಳಿಂದ ನ್ಯೂ ಜೆರ್ಸಿ ಯಲ್ಲಿರುವ ಕನ್ನಡಿಗರನ್ನೆಲ್ಲ ಒಂದಾಗಿಸಿದ್ದಾರೆ. ಈ ಕನ್ನಡದ ಕೈಂಕರ್ಯ ಹೀಗೆ ಮುಂದುವರಿಯಲಿ ಎಂದು ಹಾರೈಸುತ್ತೇನೆ



## ಉಷಾ ಪ್ರಸನ್ನ ಕುಮಾರ್

ಬೃಂದಾವನದ ಮಿಲನ ತಂಡ, ಈ ಎರಡು ವರುಷ ಅಮೋಘವಾದ ಕಾರ್ಯಗಳನ್ನು ಮಾಡಿರುವುದು ಹೆಮ್ಮೆಯ ವಿಷಯ. ಮಕ್ಕಳಿಗೆ ಕನ್ನಡ ಕಲಿಯಲು ಉತ್ತೇಜಿಸಿ, ಪ್ರೋತ್ಸಾಹಿಸಿದ್ದರಿದ ಇಂದು ನೂರಕ್ಕೂ ಹೆಚ್ಚು ಮಕ್ಕಳು ಸಂಭ್ರಮದಿಂದ ಕನ್ನಡ ಕಲಿಯಲು ಕಾತರರಾಗಿರುವರು. ಮಕ್ಕಳಿಂದ ಮಕ್ಕಳಿಗಾಗಿ ಮಕ್ಕಳಿಗೋಸ್ಕರ ಎಂಬ ನಮ್ಮ ಸಂಘದ ಗುರಿಯನ್ನು ಮಿಲನ ತಂಡ ಅಕ್ಷರ ಸಹ ಪಾಲಿಸಿರುವುದು ಹೆಮ್ಮೆಯ ವಿಷಯ. ಹೊಸ ತಂಡಕ್ಕೆ ಮಾದರಿಯಾಗಲಿ ಎಂದು ಆಶಿಸುತ್ತೇನೆ.

## ಸಂತೋಷ್ ಕುಮಾರ್ ಕಡ್ಲೆಬೇಳೆ



ಕಳೆದ ಎರಡು ವರುಷದಿಂದ ವಿವಿಧ ಕಾರ್ಯಕ್ರಮಗಳನ್ನು ನೀಡಿ, ಕನ್ನಡ ಶಾಲೆ,ಸಾಹಿತ್ಯ, ಯುವ ಬೃಂದಾವನ ಮುಂತಾದ ಮಹತ್ತರ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಬೃಂದಾವನ ಕನ್ನಡ ಸಂಘವನ್ನು ಇನ್ನಷ್ಟು ಎತ್ತರಕ್ಕೆ ತರಲು ಶ್ರಮಿಸಿದ ಎಲ್ಲಾ "ಮಿಲನ" ತಂಡದ ಸದ್ಯಸ್ಯರಿಗೆ ಅಭಿನಂದನೆಗಳು ಮತ್ತು ಶುಭಾಶಯಗಳು.

## ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಮೆಚ್ಚುಗೆಯ ನುಡಿ

ಡಾ. ಕೆ. ಮುರಳೀಧರ
ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ದೂರವಾಣಿ : ಕಛೇರಿ : 22286773
22033239
ಕೊಠಡಿ ಸಂಖ್ಯೆ: 263, ಎರಡನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001

ಸಂಖ್ಯೆ:ಕಅಪ್ರಾ/ಕಾಶಿ./ 340/೨೦೧೩–೧೪

ದಿನಾಂಕ ೦೮–೦೮–೨೦೧೩

ಗೆ,
**ಶ್ರೀ ಮಲ್ಲಿಕ್ ಪ್ರಸಾದ್,**
ಅಧ್ಯಕ್ಷರು,
ಕೆ.ಸಿ.ಪಿ. ಬೃಂದಾವನ,
**ನ್ಯೂ ಜರ್ಸಿ.**

ಮಾನ್ಯರೆ,

**ವಿಷಯ:** ಅಮೇರಿಕಾ ದೇಶದಲ್ಲಿ ಕನ್ನಡ ಸಂಸ್ಕೃತಿಯನ್ನು ಬೆಳೆಸಲು ತಾವು ನಡೆಸಿರುವ ಪ್ರಯತ್ನದ ಕುರಿತಂತೆ.

**ಉಲ್ಲೇಖ:** ನಿಮ್ಮ ಇ–ಮೇಲ್ ದಿನಾಂಕ ೦೫–೦೮–೨೦೧೩.

*** *** ***

ಸಾಗರೋತ್ತರ ಖಂಡದಲ್ಲಿಯೂ ಕನ್ನಡ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ತಮ್ಮ ಪ್ರಯತ್ನ ಅತ್ಯಂತ ಸ್ವಾಗತಾರ್ಹ ಹಾಗೂ ನಿಮ್ಮ ಈ ಬದ್ಧತೆಯನ್ನು ಪ್ರಾಧಿಕಾರ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಾಲತಾಣದಲ್ಲಿ (www.kannada-praadhikaara.gov.in ) ಕನ್ನಡ ಕಲಿಕೆಗೆ ಸಂಬಂಧಿಸಿದ ಹಲವಾರು ಪಠ್ಯಗಳು ಲಭ್ಯವಿದ್ದು ಅದನ್ನು ತಾವು ತಮ್ಮ ಅಗತ್ಯತೆಗನುಗುಣವಾಗಿ ಬಳಸಿಕೊಳ್ಳಬಹುದಾಗಿದೆ. ಆಸಕ್ತಿಯಿಂದ ಕನ್ನಡ ಕಲಿತವರಿಗೆ ಪ್ರಾಧಿಕಾರದ ವತಿಯಿಂದ ಕನ್ನಡ ಕಲಿ ಪ್ರಮಾಣ ಪತ್ರವನ್ನು ಸಹ ನೀಡಲಾಗುತ್ತಿದ್ದು, ತಮಗೆ ಅವಶ್ಯವಿದ್ದಲ್ಲಿ ಇಂತಹ ಪ್ರಮಾಣ ಪತ್ರಗಳನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡಲಾಗುವುದು ಎಂಬ ಅಂಶವನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ತಮ್ಮ ನಂಬುಗೆಯ

ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ







# ಮಿಲನ ತಂಡದ ಕಾರ್ಯ ಚಟುವಟಿಕೆಗಳು

# ಬೃಂದಾವನ ಮಿಲನ ತಂಡ

## EXECUTIVE COMMITTEE - 2015-16

### BOARD OF TRUSTEES


Dr. Ram Bangalore


Shri. Ben Kantharaju


Smt. Usha Prasanna Kumar


Shri. Santhosh Kumar


Shri. Mallik Prasad

### EXECUTIVE COMMITTEE


Shri. Mallik Prasad
President


Shri. Basavaraju Shivanna
Vice President


Dr. Ashok Kattimani
Secretary


Shri. Kiran Agrahara
Treasurer


Shri. Sridhara Suryanarayana
Jt. Treasurer





# ಬೃಂದಾವನ ಮಿಲನ ತಂಡ

## EXECUTIVE COMMITTEE - 2015-16

### DIRECTORS & HONORARY DIRECTORS


Smt. Sujaya Rao


Dr. Srisai Gowda


Shri. Girish Hongal


Smt. Vidya Kallur


Smt. Roopa Bhatt


Shri. Suresh Gadigi


Shri. Sathya Prasad


Shri. Bala Kalavala


Shri. Tirumalesh Kowdley


Shri. Mahesh Rangaswamy

### TEAM LEADS


Shri. Srinivasa Bhattar
Spirituality


Shri. Dasharathi Gattu
Brindavana Akshara Bhandara


Shri. Suhas Kumar
Yuva Brindavana


Kum. Amulya Kattimani
Yuva Brindavana

# ಬೃಂದಾವನ ಮಿಲನ ತಂಡದ ಎರಡು ವರ್ಷಗಳ ಪಕ್ಷಿನೋಟ

ಮಲ್ಲಿಕ್ ಪ್ರಸಾದ್



2004ರಲ್ಲಿ ಪ್ರಾರಂಭಗೊಂಡ ನ್ಯೂ ಜೆರ್ಸಿಯ ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ ಬೃಂದಾವನವನ್ನು, ಇಲ್ಲಿಯವರೆಗೆ ಐದು ಕಾರ್ಯಕಾರಿ ಸಮಿತಿಯವರು ತಮ್ಮ ಪರಿಶ್ರಮದ ಹಾಲನ್ನೆರೆದು ಬೆಳೆಸಿದರು. 6ನೇ ಅಕ್ಕ ಸಮ್ಮೇಳನ ಹಾಗು ದಶಮಾನೋತ್ಸವ ಸಮಾರಂಭಗಳನ್ನು ಅದ್ದೂರಿಯಾಗಿ ನಡೆಸಿ, ಕರ್ನಾಟಕದ 200ಕ್ಕೂ ಹೆಚ್ಚು ಕಲಾವಿದರನ್ನು ಕರೆಸಿ, ಸ್ಥಳೀಯ ಕನ್ನಡ ಪ್ರತಿಭೆಗಳನ್ನು ಪ್ರೋತ್ಸಾಹಿಸಿದರು. ಬೃಂದಾವನ ಈಗ ಈಶಾನ್ಯ ಅಮೇರಿಕದ ಒಂದು ಹೆಮ್ಮೆಯ ಲಾಭ ರಹಿತ ಚಾರಿಟಬಲ್ ಕನ್ನಡ ಕೂಟವಾಗಿ ಬೆಳೆದು ನಿಂತಿದೆ. 2015 ರಲ್ಲಿ ಶ್ರೀ ಮಲ್ಲಿಕ್ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಬೃಂದಾವನದ ಕಾರ್ಯಕಾರಿ ಸಮಿತಿ "ಮಿಲನ" ತಂಡವು, ಸಂಘದ ಕಾರ್ಯ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತು ಅಂದಿನಿಂದ ಇಂದಿನವರೆಗೆ ಕನ್ನಡಮ್ಮನ ಚರಣಾರವಿಂದಕ್ಕೆ ನೀಡಿರುವ ಕೊಡುಗೆಗಳು ಅಪಾರ!

## ಬೃಂದಾವನ ಕನ್ನಡ ಶಾಲೆ

ಬೃಂದಾವನ ಮಿಲನ ತಂಡದ ಮಹತ್ತರವಾದ ಸಾಧನೆ – ಬೃಂದಾವನ ಕನ್ನಡ ಶಾಲೆ. ಮಲ್ಲಿಕ್ ಪ್ರಸಾದ್ ಹಾಗೂ ಅಶೋಕ್ ಕಟ್ಟಿಮನಿಯವರ ನೇತೃತ್ವದಲ್ಲಿ, ನವೆಂಬರ್ 7, 2015 ರಂದು ಸೌತ್ ಬ್ರನ್ಸ್‌ವಿಕ್ನಲ್ಲಿ ಶುರುವಾದ ಬೃಂದಾವನ ಕನ್ನಡ ಶಾಲೆ, ಈಗ ದೊಡ್ಡ ಗಿಡವಾಗಿದೆ! ಈಗ 125 ಕ್ಕೂ ಹೆಚ್ಚು ಕನ್ನಡದ ಕಂದಮ್ಮಗಳು ಮೂರು ಕನ್ನಡ ಶಾಲೆಗಳಲ್ಲಿ (ಸೆಂಟ್ರಲ್ ಜೆರ್ಸಿಯ ಸೌತ್ ಬ್ರನ್ಸ್‌ವಿಕ್, ಎಡಿಸನ್ ಹಾಗೂ ಈಸ್ಟ್ ವಿಂಡ್ಸರ್) ಬಹು ಉತ್ಸಾಹದಿಂದ ಪ್ರತಿ ಶನಿವಾರ ಕನ್ನಡ ಕಲಿಯುತ್ತಿದ್ದಾರೆ. ಇದಕ್ಕೆ ಬೆನ್ನೆಲುಬಾದಂತಹ ಸುಮಾರು 30 ಜನ ಸ್ವಯಂ ಸೇವಕರ ನಿಷ್ಠೆ ಹಾಗೂ ಪರಿಶ್ರಮ, ಇದರ ಯಶಸ್ಸಿಗೆ ಕಾರಣ. ಕರ್ನಾಟಕದಲ್ಲೇ ಕನ್ನಡ ಮಾಧ್ಯಮದ ಶಾಲೆಗಳಿಗೆ ಕಳುಹಿಸಲು ಹಿಂಜರಿಯುವ ಪೋಷಕರಿರುವಂತಹ ಇಂದಿನ ಕಾಲದಲ್ಲಿ, ಪಾಶ್ಚಾತ್ಯ ದೇಶದಲ್ಲೂ ತಮ್ಮ ಮಕ್ಕಳು ಕನ್ನಡವನ್ನು ಕಲೀಬೇಕು ಅನ್ನೋ ಕನ್ನಡಾಭಿಮಾನವನ್ನು ಹೊತ್ತು ಮಕ್ಕಳನ್ನು ಕನ್ನಡ ಕಲಿಯಲು ಪ್ರೋತ್ಸಾಹಿಸುತ್ತಿರುವ ಪೋಷಕರ ಉತ್ಸಾಹ ನಿಜಕ್ಕೂ ಶ್ಲಾಘನೀಯ.





## ಬೃಂದಾವನ ಚಾರಿಟಿ ಮತ್ತು ಸಮಾಜ ಸೇವೆ

ದಾನ ಮನೆಯಿಂದಲೇ ಆರಂಭವಾಗುತ್ತದೆ, ಬೃಂದಾವನದಲ್ಲಿ ನಾವು ಒಂದು ಕುಟುಂಬವಾಗಿ ಸಮುದಾಯಕ್ಕೆ ಮರಳಿ ಸೇವೆ ಮಾಡುವ ನಿಟ್ಟಿನಲ್ಲಿ ನಮ್ಮ ದತ್ತು ಪಡೆದ ದೇಶ ಅಥವಾ ತಾಯ್ನಾಡಿಗಾಗಿ ಪುಟ್ಟ ಹೆಜ್ಜೆಗಳನ್ನು ಇಟ್ಟಿದ್ದೇವೆ. ಇದರ ಸಂಕ್ಷಿಪ್ತ ವರದಿ ಇದೇ ವಿಭಾಗದಲ್ಲಿ ಮುಂದಿನ ಪುಟಗಳಲ್ಲಿ ಓದಬಹುದು.

## ಯುವ ಬೃಂದಾವನ

ನ್ಯೂ ಜೆರ್ಸಿ ಯುವ ಕನ್ನಡಿಗರಲ್ಲಿ ಕನ್ನಡ ಜಾಗೃತಿ ಮೂಡಿಸಿ, ಕನ್ನಡವನ್ನು ಉಳಿಸಿ ಕನ್ನಡತನವನ್ನ ಬೆಳೆಸಬೇಕೆಂಬ ಉದ್ದೇಶದಿಂದ ಹುಟ್ಟಿದಂತಹ ಮತ್ತೊಂದು ಪುಟ್ಟ ಸಸಿ 'ಯುವ ಬೃಂದಾವನ'. ಯುವ ಬೃಂದಾವನದ ಯುವ ಸ್ವಯಂ ಸೇವಕರು, ಯುವ ಕಾರ್ಯಕರ್ತರು, ಹಲವಾರು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಹಲವಾರು ಯೋಜನೆಗಳನ್ನು ಹಮ್ಮಿಕೊಂಡು, ಹಣ ಸಂಗ್ರಹಿಸಿ, ಅದನ್ನು ಅಮೇರಿಕವಲ್ಲದೆ ಕರ್ನಾಟಕದ ಬಡ ಮಕ್ಕಳ ಏಳ್ಗೆಗಾಗಿ ವಿನಿಯೋಗಿಸುವ ಮೂಲಕ ತಮ್ಮ ಕಾಳಜಿಯನ್ನು ತೋರುತ್ತಿರುವುದು ಹೆಮ್ಮೆಯ ವಿಷಯವಾಗಿದೆ




## ಬೃಂದಾವನ ಅಕ್ಷರ ಭಂಡಾರ




ಕನ್ನಡ ಪುಸ್ತಕಗಳ ಒಂದು ದೊಡ್ಡ ಭಂಡಾರವೇ – ಬೃಂದಾವನ ಅಕ್ಷರ ಭಂಡಾರ, ಈಗ 2 ವರ್ಷದ ಹರೆಯ – ಕನ್ನಡ ಪುಸ್ತಕಗಳ ಕೈ ಕೈ ವರ್ಗಾವಣೆ ಹೆಚ್ಚಾಗಿದೆ. ಕನ್ನಡ ಸಾಹಿತ್ಯದ ಚರ್ಚೆ ಬೃಂದಾವನದ ಸಾಮಾಜಿಕ ಜಾಲತಾಣಗಳಲ್ಲಿ ಗಹನವಾಗಿ ನಡೆದಿದೆ. ಬೃಂದಾವನ ಅಕ್ಷರ ಭಂಡಾರ ಕಾರ್ಯನಿರ್ವಹಣೆಯಲ್ಲಿ, 3000 ಕ್ಕೂ ಹೆಚ್ಚು ಕನ್ನಡ ಪುಸ್ತಕಗಳಿವೆ. ಹೆಚ್ಚು ಹೆಚ್ಚು ಕನ್ನಡಿಗರು ಕನ್ನಡ ಪುಸ್ತಕಗಳನ್ನು ಓದಿ, ವಿಮರ್ಶಿಸಿ, ವಿಚಾರ ವಿನಿಮಯ ಮಾಡಬೇಕೆಂಬುದೇ ಈ ಪುಸ್ತಕ ಭಂಡಾರದ ಪ್ರಮುಖ ಉದ್ದೇಶ.


## ಸಾಹಿತ್ಯ ಬೃಂದಾವನ




ಕವಿ ವಾಣಿಯನ್ನು ಕೇಳಲು ಬೃಂದಾವನ ಗಣೇಶ ಹಬ್ಬದ "ಸಾಹಿತ್ಯ ಬೃಂದಾವನ"ಕ್ಕೆ ಬರಬೇಕು! ಎರಡು ಸಾಹಿತ್ಯ ಬೃಂದಾವನ ನಡೆಸಿ ನ್ಯೂ ಜೆರ್ಸಿಯ ಸಾಹಿತ್ಯ ರಸಿಕರಿಗೆ ರಸದೌತಣ ಬಡಿಸಿದ ನಮ್ಮ ಕವಿಗಳಿಗೆ ನಮೋ ನಮಃ. ಸಾಹಿತ್ಯ ಬೃಂದಾವನದಿಂದ ಸಾಹಿತ್ಯಿಕ ಚಟುವಟಿಕೆಗಳು ಚುರುಕುಗೊಂಡವು. ಚರ್ಚೆ, ಚಿಂತನೆ, ಸಂವಾದಗಳು ನಡೆಯತೊಡಗಿದವು. ಕನ್ನಡದ ಸಾಹಿತಿಗಳನ್ನು ಬೃಂದಾವನಕ್ಕೆ ಆಹ್ವಾನಿಸಿ ಕನ್ನಡ ಸಾಹಿತ್ಯದ ಬಗ್ಗೆ ವಿಚಾರ ವಿನಿಮಯ ಮತ್ತು ಸಂವಾದಗಳನ್ನು ನಡೆಸುವುದಕ್ಕೆ ಒಂದು ವೇದಿಕೆ ಬೃಂದಾವನ ಗಣೇಶ ಹಬ್ಬದ 'ಸಾಹಿತ್ಯ ಬೃಂದಾವನ'. ಇದರಿಂದಾಗಿ ಹಲವಾರು ಸ್ಥಳೀಯ ಪ್ರತಿಭೆಗಳು ಹೊರ ಬಂದವು. ಸದಸ್ಯರು ಕತೆ, ಕವನ ರಚಿಸಿ ತಮ್ಮ ಪ್ರತಿಭೆಯನ್ನು ಎಲ್ಲರೆದರು ಪ್ರದರ್ಶಿಸುವ ಅವಕಾಶವನ್ನು ಕಲ್ಪಿಸಲಾಯಿತು.

## ಬೃಂದಾವನ ವಾಣಿ

ಸಾಹಿತ್ಯ ಬೃಂದಾವನದ ಮುಂದುವರಿದ ಭಾಗವಾಗಿ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಟ್ಟು, ಅದರ ಜೊತೆಗೆ ಇತರ ಪ್ರಕಾರಗಳನ್ನು ಒಳಗೊಂಡ ಒಂದು ಸಮಗ್ರ ಸಂಚಿಕೆಯನ್ನು ಹೊರತರುವ ಯೋಚನೆ ಬಂದಾಗ ಮೊಳಕೆಯೊಡೆದದ್ದು ನಮ್ಮೆಲರ ಹೆಮ್ಮೆಯ "ಬೃಂದಾವನ ವಾಣಿ" ದ್ವೈಮಾಸಿಕ ಪತ್ರಿಕೆ. ಬೃಂದಾವನದ ಸರ್ವ ಸದಸ್ಯರ ಬರಹಗಳನ್ನು ಹಂಚಿಕೊಳ್ಳಲು ಇದೊಂದು ವೇದಿಕೆ – ನಮ್ಮೆಲ್ಲರ ಅಚ್ಚು ಮೆಚ್ಚಿನ ಈ–ಪತ್ರಿಕೆ 'ಬೃಂದಾವನ ವಾಣಿ'. ಕತೆ, ಕವನ, ಪುಟ್ಟ ಮಕ್ಕಳ ಚಿತ್ರಕಲೆ, ರಂಗೋಲಿ, ಪಾಕ ವಿಧಾನ; ಹೀಗೆ ಹಲವಾರು ಲೇಖನಗಳನ್ನೊಳಗೊಂಡ ನಮ್ಮೀ ಬೃಂದಾವನ ವಾಣಿಯು, ಕೇವಲ ನ್ಯೂ ಜೆರ್ಸಿಯಲ್ಲಷ್ಟೇ ಅಲ್ಲದೇ, ಹೊರ ದೇಶಗಳಲ್ಲಿ ನೆಲಸಿರುವ ಕನ್ನಡಿಗರಿಗೂ ಅಚ್ಚುಮೆಚ್ಚಿನ ಪತ್ರಿಕೆಯಾಗಿದೆ. ನವೆಂಬರ್ 1 2015 ರಂದು ಶುರುವಾದ "ಬೃಂದಾವನ ವಾಣಿ" ಈ–ಪತ್ರಿಕೆ ಯಾಗಿ ಮೂಡಿ ವಿಶ್ವದ ಎಲ್ಲೆಡೆ ಅಭಿಮಾನಿ ವರ್ಗ ಪಡೆದಿದೆ. ಈ ನವೆಂಬರ್ 1 2016 ಮಿಲನ ತಂಡದ ಕೊನೆಯ ಬೃಂದಾವನ ವಾಣಿಯೂ ಹೌದು. brindavana.org ಅಂತರ್ಜಾಲ ತಾಣದಲ್ಲಿ ಇದನ್ನು ಓದಬಹುದು.




## ಬೃಂದಾವನದಲ್ಲಿ ಕನ್ನಡ ಚಲನ ಚಿತ್ರಗಳ ಭರಾಟೆ!



ಬೃಂದಾವನ ಕನ್ನಡ ಚಿತ್ರರಂಗದ ತುಂಬಾ ದೊಡ್ಡ 'ಫ್ಯಾನ್' ಎಂದು ಹೇಳಲೇಬೇಕು. ಸ್ಯಾಂಡಲ್‌ವುಡ್ ಸ್ಟಾರ್‌ಗಳಿಗೂ ನಮ್ಮ ಮೇಲೆ ಪ್ರೀತಿ. 'ರಂಗಿ ತರಂಗ' 50 ದಿನಗಳ ಸಮಾರಂಭ ನಿರ್ದೇಶಕ ಅನೂಪ್ ಭಂಡಾರಿ, ನಾಯಕ ನಿರೂಪ್ ಭಂಡಾರಿ ಜೊತೆ ನೂರಾರು ಬೃಂದಾವನದ ಫ್ಯಾನ್ ಗಳು ಸೇರಿ ಬಹಳ ವಿಜೃಂಭಣೆಯಿಂದ ಸಂಭ್ರಮಿಸಿದರು. "ಉಪ್ಪಿ 2" ಬಿಡುಗಡೆಯ ಸಮಾರಂಭ ನಡೆಸಿ ನಮ್ಮ ಮೆಚ್ಚಿನ ಉಪ್ಪಿ ಜೊತೆಗೂಡಿ ತುಂಬಾ ಮಜಾ ಪಾರ್ಟಿ ನಡೆಯಿತು. ಪವನ್ ಕುಮಾರ್ 'ಯೂ–ಟರ್ನ್' ಚಿತ್ರದ ವರ್ಲ್ಡ್ ಪ್ರೀಮಿಯರ್ ಷೋ'ಗೆ ನ್ಯೂಯಾರ್ಕಿನಲ್ಲಿ ತುಂಬಾ ಪ್ರೋತ್ಸಾಹ ತೋರಿದರು. ಹತ್ತಾರು ಕನ್ನಡ ಚಿತ್ರಗಳನ್ನ ಸಾವಿರಾರು ಜನ ನೋಡಿ ಆನಂದಿಸಿದರು. ಸ್ಯಾಂಡಲ್ ವುಡ್ ಗೆ ಅಮೇರಿಕದಲ್ಲಿ ದೊಡ್ಡ ಮಾರ್ಕೆಟ್ ಇದೆ ಎಂದು ತೋರಿಸಿ ಕೊಟ್ಟೆವು. ಕನ್ನಡ ಚಿತ್ರರಂಗದ ಸಾಧನೆಗಳನ್ನು ಹೊರನಾಡ ಕನ್ನಡಿಗರಿಗೆ ತಲುಪಿಸುವ ಪ್ರಯತ್ನವಾಗಿ ಈ ಭಾರಿಯ ಅಕ್ಕ ಕನ್ನಡ ಸಮ್ಮೇಳನದಲ್ಲಿ ಮೊದಲನೇ "ಕನ್ನಡ ಚಲನ ಚಿತ್ರ ಹಬ್ಬ" ಎಂಬ ಕಾರ್ಯಕ್ರಮ ಆಯೋಜಿಸಿ ಆಯ್ದ 10 ಕನ್ನಡ ಚಿತ್ರಗಳನ್ನು ಸಮ್ಮೇಳನದ ಸಮಯದಲ್ಲಿ ಪ್ರದರ್ಶಿಸಲಾಯಿತು.

## ಬೃಂದಾವನ ಕಾರ್ಯವೈಖರಿ ಕ್ರಮಬದ್ಧತೆಯ ಶಿಖರಕ್ಕೆ

ಬೃಂದಾವನದ ಪ್ರತಿಯೊಂದು ವ್ಯವಹಾರವನ್ನು 'ಈ–ರೂಪಾಂತರಗೊಳಿಸಿ' (ಆಟೋಮೇಷನ್) ನಿರ್ವಹಣೆಗಳನ್ನು ಮಿಂಚಂಚೆಯ ಮೂಲಕ ನಡೆಯುವಂತೆ ಕ್ರಮಬದ್ಧ ರಚನೆಯನ್ನು ಮಿಲನ ತಂಡ ನಿರ್ವಹಿಸಿದೆ, ಜಾಗರೂಕತೆ ಮೂಡಿಸಲು ಮುಖ ಚಿತ್ರ ಪುಸ್ತಕ, ಟ್ವಿಟ್ಟರ್ ಪಕ್ಷಿ, ಮಾರ್ಕೆಟಿಂಗ್ ಕ್ಯಾಂಪೈನ್, ಸೋಷಿಯಲ್ ಮೀಡಿಯಾದಂತಹ ನೂತನ ಮಾಧ್ಯಮಗಳ ಸದುಪಯೋಗದಿಂದ ಹೆಚ್ಚು ಜನರಿಗೆ ಮಾಹಿತಿ ತಲುಪಿಸಿ ನ್ಯೂಜೆರ್ಸಿಯಲ್ಲಿ ಕನ್ನಡಿಗರ ಒಂದು ದೊಡ್ಡ ದಂಡನ್ನು ಕಟ್ಟಿರುವುದು ಇನ್ನೊಂದು ಸಾಧನೆ. ಇತ್ತೀಚಿನ ದಿನಗಳಲ್ಲಿ ಬೃಂದಾವನದ ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಗಮಿಸಿ, ಹೊಸ ಅಲೆಗಳನ್ನೆಬ್ಬಿಸಿ, ಭಾಷಾಭಿಮಾನವನ್ನು ತೋರುತ್ತಿರುವುದು ಸಂತಸದ ವಿಷಯ. ಹೀಗೆ ಹಂತ ಹಂತವಾಗಿ ಮೇಲೇರುತ್ತಿದೆ ನಮ್ಮೀ ಬೃಂದಾವನ.





## ೨೦೧೫ ನಾವಿಕ – ವಿಶ್ವ ಕನ್ನಡ ಸಮ್ಮೇಳನ

ಸೆಪ್ಟೆಂಬರ್ 4 ರಿಂದ 6, 2015 ರಾಲೇ, ನಾರ್ತ್ ಕರೋಲಿನಾದಲ್ಲಿ ನಡೆದ 3ನೇ ನಾವಿಕ – ವಿಶ್ವ ಕನ್ನಡ ಸಮ್ಮೇಳನಕ್ಕೆ ಬೃಂದಾವನದಿಂದ 75 ಜನರ ಸಮೇತವಾಗಿ ಹೋಗಿ ಕನ್ನಡದ ಹಬ್ಬದಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡೆವು. ಪ್ರಣಯರಾಜ ಶ್ರೀನಾಥ್ ಜೊತೆ ಸಂಭ್ರಮದಲ್ಲಿ ಭಾಗವಹಿಸಿ ಸಂತೋಷ ಪಟ್ಟ ಸಮಯ ಅಮೋಘ!



## ೨೦೧೬ ಅಕ್ಕ – ವಿಶ್ವ ಕನ್ನಡ ಸಮ್ಮೇಳನ

ಸೆಪ್ಟೆಂಬರ್ 2, 3 ಮತ್ತು 4, 2016 ರಂದು ಅಟ್ಲಾಂಟಿಕ್ ಸಿಟಿ, ನ್ಯೂ ಜೆರ್ಸಿಯಲ್ಲಿ ನಡೆದ 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನಕ್ಕೆ, 4000 ಕ್ಕೂ ಹೆಚ್ಚು ಕನ್ನಡ ಬಾಂಧವರ ಜೊತೆಗೂಡಿ ವಿಜೃಂಭಣೆಯಿಂದ ಕನ್ನಡದ ತಾಯಿ ಭುವನೇಶ್ವರಿಯನ್ನು ಆರಾಧಿಸಿದೆವು. 350ಕ್ಕೂ ಹೆಚ್ಚು ಬೃಂದಾವನದ ಸದಸ್ಯರು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. "ರೈತ ನಿನಗೆ ನಮೋ ನಮಃ" ಕನ್ನಡದ ರೈತನಿಗೆ ಒಂದು ನಮನ, ಬೃಂದಾವನ ಕನ್ನಡ ಶಾಲೆಯಿಂದ ರೂಪಕ ಜ್ಞಾನ ಪೀಠ ವೈಭವ, ದಶಕದ ಹಾಡಿಗೆ ನಾಟ್ಯದ ಮಿಲನ – ಅದ್ದೂರಿ ನೃತ್ಯ ರೂಪಕ, ಅಕ್ಕಾ ಮೆರವಣಿಗೆ ಹೀಗೆ ಅನೇಕ ಯಶಸ್ವೀ ಕಾರ್ಯಕ್ರಮಗಳನ್ನ ನೀಡಿದೆವು. ಬೃಂದಾವನದ ಸದಸ್ಯರು ಅತಿ ಹೆಚ್ಚು ಸಂಖ್ಯೆಗಳಲ್ಲಿ ಹಲವಾರು ಜವಾಬ್ದಾರಿ ಹೊತ್ತು ಅಮೋಘವಾಗಿ ನಿರ್ವಹಿಸಿದರು. ಒಂದು ಮಾತಿನಲ್ಲಿ ಹೇಳಬೇಕೆಂದರೆ 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನಕ್ಕೆ ಬೆನ್ನೆಲುಬಾಗಿದ್ದರು.



# ಸಾಂಸ್ಕೃತಿಕ ಮಿಲನ

ಸುಜಯ ರಾವ್



ಎಲ್ಲಾ ಕನ್ನಡ ಬಂಧುಗಳಿಗೂ ಹೃತ್ಪೂರ್ವಕ ನಮನಗಳು.

ಬೃಂದಾವನ ಪುಟ್ಟ ಸಸಿಯಾಗಿ ಹುಟ್ಟಿದಂದಿನಿಂದಲೂ, ಅದರ ಆಟ, ಪಾಠ, ಕಲೆ, ಸಂಸ್ಕೃತಿ ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿ ಆನಂದಿಸಿ, ಬಹಳಷ್ಟು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಆ ಸಸಿ ಇಂದು ಹದಿ ಹರೆಯಕೆ ಕಾಲಿಡುವ ಸಂದರ್ಭದಲ್ಲಿ, ಸಂಸ್ಥೆಯ ಭಾಗವಾಗಿ ನನ್ನ ಅಳಿಲು ಸೇವೆಯನ್ನು ಸಲ್ಲಿಸುವ ಅವಕಾಶ ದೊರಕಿರುವುದು ಬಹಳ ಸಂತಸದ ವಿಷಯ.

ಎಲೆ ಮರೆಯ ಕಾಯಿಯಂತಿರುವ ಸ್ಥಳೀಯ ಪ್ರತಿಭೆಗಳನ್ನು ಹುಡುಕಿ ಹೊರತೆಗೆದು, ಅವರ ಪ್ರತಿಭಾ ಪ್ರದರ್ಶನಕ್ಕೆ ಒಂದು ಉತ್ತಮ ವೇದಿಕೆಯನ್ನು ಕಲ್ಪಿಸಿಕೊಟ್ಟು, ಎಲ್ಲ ಕಾರ್ಯಕ್ರಮಗಳಲ್ಲೂ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಕನ್ನಡಾಭಿಮಾನವನ್ನು ಮೆರೆಯುವ ಅವಕಾಶ ಕಲ್ಪಿಸಿಕೊಡಬೇಕೆಂಬುದೇ ಮಿಲನ ತಂಡದ ಮುಖ್ಯ ಉದ್ದೇಶ.

ಮಿಲನ ತಂಡದೊಡನೆ ನನ್ನ ಸಾಂಸ್ಕೃತಿಕ ಪಯಣ ಅತ್ಯದ್ಭುತ ಅನುಭವ.

2014 ನವೆಂಬರ್ ನಲ್ಲಿ ನಡೆದ ಬೃಂದಾವನ ದಶಮಾನೋತ್ಸವದ ನಂತರ, ಮಿಲನ ತಂಡವು ಸಂಘದ ಕಾರ್ಯ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತು ಬೃಂದಾವನದಲ್ಲಿ ತನ್ನ ಪಯಣವನ್ನು ಪ್ರಾರಂಭಿಸಿತು. ಅಂದಿನಿಂದ ಇಂದಿನವರೆಗೆ, ಕನ್ನಡಮ್ಮನ ಚರಣಾರವಿಂದಕ್ಕೆ ಮಿಲನ ತಂಡವು ನೀಡಿರುವ ಕೊಡುಗೆಗಳು ಅಪಾರ.

ಕಾರ್ಯ ನಿರ್ವಹಣೆಯ ಹೊಣೆಗಾರಿಕೆ ಹೊತ್ತ ಪ್ರಾರಂಭದಲ್ಲಿ, ನಗೆ ಹಬ್ಬವನ್ನು ಬ್ರಿಡ್ಜ್‌ವಾಟರ್ ಬಾಲಾಜಿ ಮಂದಿರದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಹಾಗೂ ನಮ್ಮೆಲ್ಲರ ಮನ ರಂಜಿಸಲು ರಿಚರ್ಡ್ ಲೂಯಿಸ್‌ರವರು ಹಾಗೂ ಕಿರ್ಲೋಸ್ಕರ್ ಸತ್ಯ ಅವರು ಆಗಮಿಸಿದ್ದರು. ಜನ ಕಿಕ್ಕಿರಿದು ತುಂಬಿದ್ದರು.

2015 ಮೇ ತಿಂಗಳಲ್ಲಿ ನಡೆದ ವಸಂತೋತ್ಸವದ ಶುಭ ಸಂದರ್ಭದಲ್ಲಿ, ಶ್ರೀ ಕೃಷ್ಣ ಪ್ರಸಾದ್‌ರವರ ಹರಿದಾಸ ಸ್ಮರಣೆ, ನಂದಿನಿ ರಾವ್‌ರವರ ಭಾವಗೀತೆ, ಬೃಂದಾವನ ಸದಸ್ಯರ ವೈವಿಧ್ಯಮಯ ನೃತ್ಯ, ನಾಟಕಗಳು ಕಾರ್ಯಕ್ರಮಕ್ಕೆ ಹೊಸ ಕಳೆ ಕಟ್ಟಿತ್ತು.

2015 ಜೂನ್ ತಿಂಗಳಲ್ಲಿ, ಕರ್ನಾಟಕದ ಪ್ರತಿಷ್ಠಿತ ರಂಗ ತಂಡ ಕಲಾಗಂಗೋತ್ರಿ, ಸುಮಾರು 35 ವರ್ಷಗಳ ಹಿಂದೆ ಪ್ರದರ್ಶಿಸಿದ ಜನಪ್ರಿಯ ನಾಟಕ 'ಮುಖ್ಯಮಂತ್ರಿ ನಾಟಕ'ವನ್ನು ಪ್ರದರ್ಶಿಸಲು ನ್ಯೂಜೆರ್ಸಿಗೆ ಆಗಮಿಸಿದ್ದರು. ಮುಖ್ಯ ಮಂತ್ರಿ ಚಂದ್ರುರವರು ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವ ಈ ನಾಟಕದಲ್ಲಿ, ಬೃಂದಾವನದ ಕೆಲವು ಸ್ಥಳೀಯ ಕಲಾವಿದರು ಭಾಗವಹಿಸಿ ಜನಗಳ ಮೆಚ್ಚುಗೆಗೆ ಪಾತ್ರವಾದದ್ದು ಹೆಮ್ಮೆಯ ವಿಷಯ.

2015, ಸೆಪ್ಟೆಂಬರ್ ತಿಂಗಳು, ಬೃಂದಾವನದ ಆಶ್ರಯದಲ್ಲಿ ನಡೆದ ಗಣೇಶೋತ್ಸವದಲ್ಲಿ, 'ಸಾಹಿತ್ಯ ಬೃಂದಾವನ'ದ ಉದ್ಘಾಟನೆ ಬಹಳ ವಿಜೃಂಭಣೆಯಿಂದ ನೆರವೇರಿತು. ಇದರಿಂದಾಗಿ ಹಲವಾರು ಸ್ಥಳೀಯ ಪ್ರತಿಭೆಗಳು ಹೊರ ಬಂದವು. ಸದಸ್ಯರು ಕತೆ, ಕವನಗಳನ್ನು ರಚಿಸುವುದರಿಂದ ಮೂಲಕ, ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶವನ್ನು ಕಲ್ಪಿಸಲಾಯಿತು.

ಸಾಹಿತ್ಯ ಬೃಂದಾವನದ ಅಮೋಘ ಕಾರ್ಯಕ್ರಮಗಳ ಜೊತೆಗೆ, ಅತ್ಯದ್ಭುತವಾದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಕಿಕ್ಕಿರಿದು ತುಂಬಿದ್ದ ಜನರನ್ನು ಮೋಡಿ ಮಾಡಿತ್ತು. ಸುಮಾರು 250ಕ್ಕೂ ಹೆಚ್ಚು ಕನ್ನಡ ಬಾಂಧವರು ಒಟ್ಟಾಗಿ ಸೇರಿ, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದು ಬಹಳ ಹೆಮ್ಮೆಯ ವಿಷಯ. ರಸವತ್ತಾದ ಕಡುಬಿನ ಭೋಜನದ ನಂತರ ಗಣೇಶ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮಗಳು ಹೊತ್ತು ಮುಳುಗುವವರೆಗೆ, ಒಂದಾದ ಮೇಲೆ ಒಂದರಂತೆ ಜನರ ಮನ ರಂಜಿಸಿದವು. ಶುಭಾ ಧನಂಜಯರವರ ವಿವಿಧ ಶೈಲಿಯ ನಾಟ್ಯ ಪ್ರದರ್ಶನ ಹಾಗು ಪೇರಿಣಿಯಂತೂ ನಯನಗಳಿಗೆ ಹಬ್ಬವನ್ನು ನೀಡಿತ್ತು. ಬೃಂದಾವನ ಸ್ಥಳೀಯ ಕಲಾವಿದರು ನಡೆಸಿಕೊಟ್ಟ ಪರ್ವತ ವಾಣಿಯವರ ವಾರ್ಷಿಕೋತ್ಸವ ನಾಟಕ ಹಾಗೂ ಕೆಲವು ಹಳೆಯ ಹಾಡುಗಳಿಗೆ ಮಾಡಿದ ನೃತ್ಯ, ಕಾರ್ಯಕ್ರಮಕ್ಕೆ ವಿಶೇಷ ಕಳೆ ತಂದಿತ್ತು. ಪ್ರಖ್ಯಾತ ಗಾಯಕಿ ರತ್ನಮಾಲ ಪ್ರಕಾಶ್‌ರವರ ಸುಗಮ ಸಂಗೀತ ಅಂದಿನ ಪ್ರಮುಖ ಆಕರ್ಷಣೆಯಾಗಿತ್ತು, ಹಾಗೂ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದಿತ್ತು. ಬೃಂದಾವನ ಕೂಟದ ಸದಸ್ಯರಿಗೆ ರತ್ನಮಾಲ ಪ್ರಕಾಶ್ ಅವರೊಂದಿಗೆ ವೇದಿಕೆಯ ಮೇಲೆ ಹಾಡುವ ವಿಶೇಷ ಅವಕಾಶವನ್ನೂ ಕಲ್ಪಿಸಲಾಗಿತ್ತು.







2015 ಕನ್ನಡ ರಾಜ್ಯೋತ್ಸವ/ಮಕ್ಕಳೋತ್ಸವ ಡಿಸೆಂಬರ್ 6 ರಂದು ಬಾಲಾಜಿ ಮಂದಿರ, ಬ್ರಿಡ್ಜ್‌ವಾಟರ್‌ನಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸುಮಾರು 300ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಕ್ಕಳೋತ್ಸವ ವಿಶೇಷ ಕಾರ್ಯಕ್ರಮವಾದ್ದರಿಂದ ಮಕ್ಕಳಿ ಗಾಗಿ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸುಮಾರು 80ಕ್ಕೂ ಹೆಚ್ಚು ಮಕ್ಕಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು, ಕಾರ್ಯಕ್ರಮಕ್ಕೆ ಹೊಸ ಮೆರಗನ್ನು ನೀಡಿತ್ತು. ಮೊಟ್ಟ ಮೊದಲ ಬಾರಿಗೆ ಮಕ್ಕಳಿಗಾಗಿ, ಕನ್ನಡ ವರ್ಣಮಾಲೆ ಕಂಠಪಾಟ ಹಾಗೂ ಲಿಖಿತ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಪ್ರಾರ್ಥನೆ ಹಾಗೂ ಕಾವ್ಯವಾಚನದೊಂದಿಗೆ ಪ್ರಾರಂಭವಾದ ಕಾರ್ಯಕ್ರಮಗಳು ಅದ್ಭುತವಾಗಿ ಮೂಡಿ ಬಂತು. ಕನ್ನಡ ಕಲಿ ಮಕ್ಕಳಿಂದ ಸಂಕೇತ ಗೀತೆ ಹಾಗೂ ರಾಷ್ಟ್ರಗೀತೆ, ಪುಟ್ಟ ಪುಟ್ಟ ಮಕ್ಕಳಿಂದ ಕಾರ್ಯಕ್ರಮದ ನಿರೂಪಣೆ ಹಾಗೂ ವಿವಿಧ ವೇಷ ಭೂಷಣ ಸೊಗಸಾಗಿತ್ತು. ಅಂದಿನ ನಿರೂಪಣಾ ವಿಷಯವಾಗಿ 'ಕರ್ನಾಟಕದ ನದಿ' ಗಳನ್ನು ಆಯ್ಕೆ ಮಾಡಲಾಗಿತ್ತು. ಗಾನ ಬೃಂದಾವನ ತಂಡದವರಿಂದ ಸಾಮೂಹಿಕ ಗೀತೆಗಳು, ಒಗ್ಗಟ್ಟಿನ ಬಲ ಮಕ್ಕಳ ನಾಟಕ, ಕಾವೇರಿ ತೀರದಲ್ಲಿ ಸಾಮೂಹಿಕ ನೃತ್ಯ, ಮಕ್ಕಳ ವಾದ್ಯ ಗಾಯನ ಹೀಗೆ ಹಲವಾರು ಕಾರ್ಯಕ್ರಮಗಳು ಪ್ರೇಕ್ಷಕರ ಮನ ಸೆಳೆದಿತ್ತು. ಕೊನೆಯದಾಗಿ 'ನೂಪುರ ಧ್ವನಿ' ಪ್ರಸ್ತುತ ಪಡಿಸಿದ 'ಕರ್ನಾಟಕ ವೈಭವ'ವಂತೂ ನಯನಗಳಿಗೆ ಹಬ್ಬವನ್ನು ನೀಡಿತ್ತು. ಹಚ್ಚೇವು ಕನ್ನಡದ ದೀಪ, ಪುಷ್ಪಾಂಜಲಿ, ಕೋಲಾಟ, ಕಂಸಾಳೆ, ಕೀಲು ಕುದುರೆ, ಮೈಸೂರು ದಸರಾ ಮೆರವಣಿಗೆಯಂತೂ ಬಣ್ಣಿಸಲಸಾಧ್ಯ. ಈ ಕಾರ್ಯಕ್ರಮದಲ್ಲಿ, ಯುವ ಬೃಂದಾವನದ 8 ಮಕ್ಕಳಿಗೆ ಭಾಗವಹಿಸುವ ಅವಕಾಶ ಒದಗಿ ಬಂದಿದ್ದು ಹೆಮ್ಮೆಯ ವಿಚಾರ.

2016, ಏಪ್ರಿಲ್‌ನಲ್ಲಿ ನಡೆದ ವಸಂತೋತ್ಸವದಲ್ಲಿ ಶ್ರೀ ಶ್ರೀನಿವಾಸ್ ಭಟ್ಟರ್ ಅವರ ಪಂಚಾಂಗ ಶ್ರವಣ ಹಾಗೂ ಸರ್ವರಿಗೂ ಬೇವು ಬೆಲ್ಲ ವಿತರಿಸುವ ಮೂಲಕ ಪ್ರಾರಂಭವಾಯಿತು. ಸದಸ್ಯರ ಹಲವಾರು ಮನೋರಂಜನಾ ಕಾರ್ಯಕ್ರಮಗಳು ಮನಸೂರೆಗೊಂಡವು. ಕರ್ನಾಟಕದಿಂದ ಆಗಮಿಸಿದ್ದ ಸ್ವರಾಮೃತ ತಂಡದವರು, ಅವರ ಗಾನಾಮೃತದಿಂದ ಜನರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಈ ಶುಭ ಸಂದರ್ಭದಲ್ಲಿ ಸಂಘಕ್ಕಾಗಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ ಅನೇಕ ಸ್ವಯಂ ಸೇವಕರನ್ನು ವೇದಿಕೆಯ ಮೇಲೆ ಆಹ್ವಾನಿಸಿ ಪ್ರಶಂಸಿಸಲಾಯಿತು.

ಇತ್ತೀಚೆಗಷ್ಟೇ ನಡೆದ ಅಕ್ಕ ಸಮ್ಮೇಳನದಲ್ಲಿ ಸುಮಾರು 100ಕ್ಕೂ ಹೆಚ್ಚು ಬೃಂದಾವನ ಸದಸ್ಯರು ಒಟ್ಟಿಗೆ ಸೇರಿ, ನೃತ್ಯ, ನಾಟಕಗಳ ಅಭ್ಯಾಸ ನಡೆಸಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, 'ರೈತ ನಿನಗೆ ನಮೋ ನಮಃ' ಹಾಗೂ 'ಜ್ಞಾನ ಪೀಠ ವೈಭವ' ದಂತಹ ಅಮೋಘ ಕಾರ್ಯಕ್ರಮಗಳನ್ನು ಪ್ರದರ್ಶಿಸಿ ಜನಗಳ ಪ್ರಶಂಸೆಗೆ ಪಾತ್ರರಾದುದು ನಿಜಕ್ಕೂ ಶ್ಲಾಘನೀಯ.

ಇದಲ್ಲದೇ, ಇತ್ತೀಚಿನ ದಿನಗಳಲ್ಲಿ ಬೃಂದಾವನದ ಪ್ರತಿಯೊಂದು ಕಾರ್ಯಕ್ರಮಗಳಲ್ಲೂ, ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಬೃಂದಾವನದ ಇತಿಹಾಸದಲ್ಲಿ ಹೊಸ ಅಲೆಗಳನ್ನೇ ಎಬ್ಬಿಸಿ, ಭಾಷಾಭಿಮಾನವನ್ನು ತೋರುತ್ತಿರುವುದು ಸಂತಸದ ವಿಷಯ.

ನನ್ನ ಈ 2 ವರ್ಷಗಳ ಪಯಣದಲ್ಲಿ ನನ್ನ ಜೊತೆಗೂಡಿ, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ತಮ್ಮ ಸಹಾಯ ಹಸ್ತವನ್ನು ನೀಡಿ, ಸಹಕರಿಸಿದ ಎಲ್ಲರಿಗೂ ನನ್ನ ಅನಂತಾನಂತ ಧನ್ಯವಾದಗಳು. ಹೀಗೆ ಹಂತ ಹಂತವಾಗಿ ಮೇಲೇರುತ್ತಿರುವ ನಮ್ಮೀ ಬೃಂದಾವನ, ಉತ್ತುಂಗಕ್ಕೇರಿ ವಿಜಯ ಪತಾಕೆಯನ್ನು ಹಾರಿಸಲೆಂದು ಆಶಿಸುತ್ತೇನೆ.

# ಬೃಂದಾವನ ಸಮಾಜ ಸೇವೆ

ರೂಪ ಭಟ್
2015



ಮಹೇಶ್ ರಂಗಸ್ವಾಮಿ
2016



ದಾನವೆಂಬುದು ಮೊದಲು ನಮ್ಮ ಮನೆಯಿಂದ ಆರಂಭಿಸಬೇಕು, ಹಾಗಾಗಿ ನಮ್ಮ ನ್ಯೂ ಜೆರ್ಸಿಯ ಕನ್ನಡ ಕೌರಾದ ಬೃಂದಾವನದ ಅಡಿಯಲ್ಲಿ ಮಿಲನ ತಂಡ ನಾನಾ ಸ್ವಯಂ ಸೇವಾ ಸಂಸ್ಥೆಗಳಿಗೆ ಹಣ ಹಾಗು ವಸ್ತ್ರಗಳ ಸಹಾಯ ಒದಗಿಸಬೇಕೆಂದು ತೀರ್ಮಾನಿಸಿ, ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಈ ನಿಟ್ಟಿನಲ್ಲಿ ನಮ್ಮನ್ನು ಪ್ರೋತ್ಸಾಹಿಸಿ, ಬೆಂಬಲ ನೀಡಿ, ಉದಾರ ಮನಸಿನಿಂದ ದಾನ ಮಾಡಿದ ಎಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

## ಮಿಲನ ತಂಡದ ೨೦೧೫/೨೦೧೬ ನೇ ಸಾಲಿನ ಸಮಾಜ ಸೇವೆಯ ಒಂದು ಸಂಕ್ಷಿಪ್ತ ವರದಿ

ಚಳಿಯಲ್ಲಿ ಕೋಟ್ ಇಲ್ಲದವರಿಗೆ ಗೊತ್ತು ಕೋಟಿನ ಮಹತ್ವ. ಅಮೇರಿಕದಲ್ಲೂ ಸಾವಿರಾರು ಮಂದಿ ಚಳಿಗಾಲದಲ್ಲಿ ಕೋಟ್ ಇಲ್ಲದೆ ಕಷ್ಟಪಡುವರು. ಈ ಸಲುವಾಗಿ ಫೆಬ್ರವರಿ 15, 2015 ರಂದು ಬೃಂದಾವನದ ನಗೆ ಹಬ್ಬದಂದು ಕೋಟ್ ಡ್ರೈವ್ ಹಮ್ಮಿಕೊಂಡಿತ್ತು. ಅಂದು ನಮ್ಮ ವಿಶಾಲ ಹೃದಯದ ಕನ್ನಡಿಗರು ತಮ್ಮ ಹಳೆಯ (ಒಳ್ಳೆಯ ಸ್ಥಿತಿಯಲ್ಲಿದ್ದ) ಕೋಟ್‌ಗಳನ್ನು ದಾನ ಮಾಡಿದರು. ಈ ಕಾರ್ಯಕ್ರಮದಲ್ಲಿ ಸಂಗ್ರಹಿಸಲ್ಪಟ್ಟ ಕೋಟ್ ಗಳನ್ನು ನ್ಯೂ ಜೆರ್ಸಿಯ ಕ್ಲಿಂಟನ್ ನಗರದ "ವಿಯೆಟ್ನಾಂ ವೆಟರನ್" ಸ್ವಯಂ ಸೇವಾಸಂಸ್ಥೆಗೆ ಕೊಡಲಾಯಿತು.

ಏಪ್ರಿಲ್ 19, 2015ರಂದು ಬೃಂದಾವನ ವಸಂತೋತ್ಸವ ಕಾರ್ಯಕ್ರಮದಲ್ಲಿ ನೆರೆದಿದ್ದ ಕನ್ನಡಿಗರ ಸಹಾಯದಿಂದ "ದಿ ಆರ್ಕ್ ಆಫ್ ಮಿಡ್ಲ್ ಸೆಕ್ಸ್" ವಿಶೇಷ ಅಗತ್ಯವಿರುವ (ಸ್ಪೆಷಲ್ ನೀಡ್ಸ್) ಮಕ್ಕಳಿಗೆ ನೆರವನ್ನು ನೀಡುವ ಸ್ವಯಂ ಸೇವಾಸಂಸ್ಥೆಗೆ ಧನ ಸಹಾಯ ಮಾಡಲಾಯಿತು.

ಏಪ್ರಿಲ್ 25, 2015ರಂದು ನೇಪಾಳದಲ್ಲಿ ಭೀಕರ ಭೂಕಂಪ ಸಂಭವಿಸಿತು. ಸಾವಿರಾರು ಜನರು ಪ್ರಾಣ ಕಳೆದುಕೊಂಡರು, ಗಾಯಗೊಂಡವರು ಮತ್ತು ಮನೆ ಕಳೆದುಕೊಂಡವರ ಲೆಕ್ಕವಿಲ್ಲ. ಈ ಸಂದರ್ಭದಲ್ಲಿ ಬೃಂದಾವನ ತನ್ನ ಸಹಾಯ ಹಸ್ತ ನೀಡಿತು. ಮೇ 9, 2015ರಂದು ಬೃಂದಾವನ "ಹೆಲ್ಪ್ ಅಸ್ ಹೆಲ್ಪ್ ನೇಪಾಳ" ಎಂಬ ಕಾರ್ಯಕ್ರಮದಡಿಯಲ್ಲಿ ಹಲವರು ಕನ್ನಡ ಸಂಘಟನೆಗಳೊಂದಿಗೆ ಸೇರಿ ಸುಮಾರು 12 ಸಂಗ್ರಹ ಸ್ಥಾನಗಳನ್ನು ಯೋಜಿಸಿ, ನೇಪಾಳ ಭೂಕಂಪದಿಂದ ನೊಂದ ಸಂತ್ರಸ್ತರಿಗಾಗಿ ವಿವಿಧ ವಸ್ತುಗಳನ್ನು ಸಂಗ್ರಹಿಸಿ "ಆಷ್ಯ ಫೌಂಡೇಶನ್" ಸಹಾಯದಿಂದ ವಿಮಾನದಲ್ಲಿ ನೇಪಾಳಕ್ಕೆ ಕಳುಹಿಸಲಾಯಿತು.

ಚಿಕ್ಕ ಮಕ್ಕಳು ಕ್ಯಾನ್ಸರ್ ನಿಂದ ನರಳುವುದು ನೋಡಿದರೆ ಹೃದಯ ಚುರ್ ಎನ್ನುತ್ತದೆ. "Live For The Moment - Children's Leukemia and Lymphoma Foundation" ಕನ್ನಡದ ಮಕ್ಕಳೇ ಆರಂಭಿಸಿರುವ ಒಂದು ಸ್ವಯಂಸೇವಾ ಸಂಸ್ಥೆ. ಮೇ 15, 2015 ರಂದು ಯುವ ಬೃಂದಾವನ ತಂಡ ಮತ್ತು "ಲಿವ್ ಫಾರ್ ದಿ ಮೊಮೆಂಟ್" ಸಂಸ್ಥೆಯಿಂದ ಕುಮಾರಿ ಸ್ವಾತಿ ಪ್ರಸಾದ್ ನಿರೂಪಿಸಿ, ನಡೆಸಿಕೊಟ್ಟ "ಮಾಯಾ" ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ನೆರೆದ 150ಕ್ಕೂ ಹೆಚ್ಚು ಮಂದಿಯ ನೆರವಿನಿಂದ "ಲ್ಯೂಕೇಮಿಯಾ ಹಾಗು ಲಿಂಫೋಮಾ" ದಿಂದ ಬಳಲಿದ ಮಕ್ಕಳಿಗೆ ಧನ ಸಹಾಯ ಮಾಡಲಾಯಿತು.

ಜೂನ್ 7, 2015ರಂದು ಬೃಂದಾವನ ಹಮ್ಮಿಕೊಂಡಿದ್ದ "ಮುಖ್ಯ ಮಂತ್ರಿ" ನಾಟಕದಂದು ನೆರೆದಿದ್ದ ಸಭಿಕರ ಸಹಾಯದಿಂದ ಹಾಗು ಶ್ರೀ ಮತ್ತು ಶ್ರೀಮತಿ ಧ್ರುವ ದಂಪತಿಗಳ ಉದಾರ ಕಾಣಿಕೆಯಿಂದ ಮತ್ತೊಮ್ಮೆ "ನೇಪಾಳ ಭೂಕಂಪದಿಂದ ನೊಂದವರಿಗೆ" ಧನ ಸಹಾಯ ಮಾಡಲಾಯಿತು.

ಆಗಸ್ಟ್ 1, 2015ರಂದು ನಡೆದ ಬೃಂದಾವನ ವನವಿಹಾರದಲ್ಲಿ 5 ಕಿ.ಮಿ. ಓಟವನ್ನು ಏರ್ಪಡಿಸಿತ್ತು. ಈ ಓಟದಲ್ಲಿ ಭಾಗವಹಿಸಿದವರಿಂದ ಸಂಗ್ರಹಿಸಿದ ಹಣವನ್ನು ಬೆಂಗಳೂರಿನ ಕೊಳೆಗೇರಿ ಬಡ ವಿದ್ಯಾರ್ಥಿಗಳಿಗೆ ನೆರವು ನೀಡುತ್ತಿರುವ ಡಾಕ್ಟರ್ ಜಯರಾಂ ನೇತೃತ್ವದ ಸ್ವಯಂ ಸೇವಾಸಂಸ್ಥೆಗೆ ಹಣ ಸಹಾಯ ಮಾಡಲಾಯಿತು.

ಸೆಪ್ಟೆಂಬರ್ 19, 2015ರಂದು ನಡೆದ ಗಣೇಶ ಹಬ್ಬದಂದು ಆಗಮಿಸಿದ ಬಂಧು ಮಿತ್ರರ ಸಹಾಯದಿಂದ ಬೆಂಗಳೂರಿನ "ಸಿಂಚನ ಫೌಂಡೇಶನ್" ರವರು ನಡೆಸುತ್ತಿರುವ "ವಿಶೇಷ (ಸ್ಪೆಷಲ್) ಅಗತ್ಯವಿರುವ ಸಾಮಾನ್ಯ ನಾಗರೀಕರಿಗೆ" ಧನ ಸಹಾಯ ಮಾಡಲಾಯಿತು.

ಕೇವಲ ಧನ ಸಹಾಯದಿಂದ ಸಮಾಜ ಸೇವೆ ಆಗುವುದಿಲ್ಲ. ಕೆಲವೊಮ್ಮೆ ತಮ್ಮ ಅಮೂಲ್ಯವಾದ ಸಮಯವನ್ನು ಸಮಾಜ ಸೇವೆಗೆ ಮೀಸಲಿಡಬೇಕು. ಯುವ ಬೃಂದಾವನದ ಸದಸ್ಯರು ಸೆಪ್ಟೆಂಬರ್ 28, 2015ರಂದು ತಿಂಡಿ ಮತ್ತು ಹಣ್ಣುಗಳನ್ನು "ಓಜನಮ್ ಮೆನ್ಸ್ ಹಾಗು ಫ್ಯಾಮಿಲಿ ಶೆಲ್ಟರ್" ಗಳಲ್ಲಿರುವವರಿಗೆ ವಿತರಣೆ ಮಾಡಿ ಮಾದರಿಯಾದರು. ಹೀಗೆ, ಯುವ ಬೃಂದಾವನದ, ಯುವ ಸ್ವಯಂ ಸೇವಕರು, ಯುವ ಕಾರ್ಯಕರ್ತರು, ಹಲವಾರು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಹಲವಾರು ಯೋಜನೆಗಳನ್ನು ಹಮ್ಮಿಕೊಂಡು, ಹಣ ಸಂಗ್ರಹಿಸಿ, ಅದನ್ನು ಕರ್ನಾಟಕದಲ್ಲಿ ಬಡ ಮಕ್ಕಳ ಏಳ್ಗೆಗಾಗಿ ವಿನಿಯೋಗಿಸುವ ಮೂಲಕ ತಮ್ಮ ಔದಾರ್ಯತೆಯನ್ನು ತೋರುತ್ತಿರುವುದು ಹೆಮ್ಮೆಯ ವಿಷಯವಾಗಿದೆ.




ಚೆನ್ನೈನಲ್ಲಿ ಧಾರಾಕಾರವಾಗಿ ಸುರಿದ ಮಳೆ ಮತ್ತು ಅದರಿಂದಾದ ನೆರೆಹಾವಳಿ ಇಂದಿಗೂ ಜನರಲ್ಲಿ ಮೈ ಚಳಿ ಹುಟ್ಟಿಸುತ್ತದೆ.. ಫೇಸ್ಬುಕ್ ಮತ್ತು ಯುಟ್ಯೂಬ್ ನಲ್ಲಿ ಪ್ರವಾಹ ದೃಶ್ಯಗಳನ್ನು ನೋಡಿ ಹೃದಯ ಮಿಡಿದಿದ್ದವು. ಬೃಂದಾವನ ಎಂದಿನಂತೆ ಸಹಾಯ ಮಾಡಲು ಮುಂದಾಯಿತು. ಡಿಸೆಂಬರ್ 6, 2015ರಂದು ನಡೆದ ಕನ್ನಡ ರಾಜ್ಯೋತ್ಸವದಂದು ನೆರೆದ ಬಂಧು ಮಿತ್ರರಿಂದ ನಾನಾ ರೀತಿಯ ಬಟ್ಟೆ, ವಸ್ತ್ರಗಳನ್ನು ಸಂಗ್ರಹಿಸಿ "ಚೆನ್ನೈ ರಿಲೀಫ್ ಫಂಡ್" ಗೆ ಸಹಾಯ ಮಾಡಲಾಯಿತು.

ಏಪ್ರಿಲ್ 9, 2016ರಂದು ವಸಂತೋತ್ಸವದಲ್ಲಿ ನೆರೆದಿದ್ದ ಕನ್ನಡಿಗರ ಸಹಾಯದಿಂದ "ಆಶ್ರಯ" ಸ್ವಯಂಸೇವಾ ಸಂಸ್ಥೆಗೆ ಹಣ ಸಹಾಯ ಮಾಡಲಾಯಿತು. ಆಶ್ರಯ "ಅರಿವಿನ ಅರಮನೆ" ಯೆಂಬ ಕಾರ್ಯಕ್ರಮದಡಿಯಲ್ಲಿ, ಕರ್ನಾಟಕದ ಗ್ರಾಮೀಣ ಸಮುದಾಯಗಳಲ್ಲಿ ಭೌತಿಕವಾಗಿ ಹಿಂದುಳಿದವರಿಗೆ ಶಿಕ್ಷಣ ಮತ್ತು ವೃತ್ತಿಪರ ತರಭೇತಿಗಳಲ್ಲಿ ನೆರವು ನೀಡುತ್ತಾ ಬಂದಿದೆ.

ಕಳೆದ ವರ್ಷದಂತೆ ಈ ವರ್ಷವೂ ಬೃಂದಾವನ ವನವಿಹಾರವನ್ನು ಆಯೋಜಿಸಿತ್ತು. ಜುಲೈ 9, 2016ರಂದು ನಡೆದ ಈ ವನವಿಹಾರದಲ್ಲಿ 5 ಹಾಗು 10 ಕಿ.ಮಿ ಓಟದಲ್ಲಿ ಭಾಗವಹಿಸಿದವರಿಂದ ಸಂಗ್ರಹಿಸಿದ ಹಣವನ್ನು "ಪೂರ್ಣ ಸುಧಾ ಕ್ಯಾನ್ಸರ್ ಫೌಂಡೇಶನ್" ಗೆ ವಿತರಣೆ ಮಾಡಲಾಯಿತು.

ನಾವು ಪ್ರತಿದಿನ ತಿನ್ನೋ ಊಟದ ಮೇಲೆ ರೈತನ ಹೆಸರಿದೆ. ನಾವು ತಿನ್ನುವ ಪ್ರತಿ ಅಕ್ಕಿ ಕಾಳಲ್ಲೂ ರೈತನ ಪರಿಶ್ರಮವಿದೆ. ಮಳೆ ಇಲ್ಲದೆ ಬೆಳೆ ಇಲ್ಲ... ಬೆಳೆ ಇಲ್ಲದೆ ದುಡಿಮೆ ಇಲ್ಲ... ದುಡಿಮೆ ಇಲ್ಲದೆ ರೈತನ ಜೀವನವೇ ಇಲ್ಲ... ನೀರಿಗೆ ಬವಣೆ ಇರುವ ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ ಎಷ್ಟೋ ರೈತರು ಆತ್ಮಹತ್ಯೆ ಮಾಡಿಕೊಳ್ಳುತಿದ್ದಾರೆ.

ಸೆಪ್ಟೆಂಬರ್ 12, 2016ರ ಗಣೇಶೋತ್ಸವದ ಶುಭ ಸಂದರ್ಭದಲ್ಲಿ "ರೈತ ನಿನಗೆ ನಮೋನಮಃ" ಎಂಬ ವಿಶೇಷ ನೃತ್ಯರೂಪಕವನ್ನು ಬೃಂದಾವನದ ಸ್ಥಳೀಯ ಕಲಾವಿದರು ಪ್ರಸ್ತುತ ಪಡಿಸಿದರು. ಸಾಹಿತ್ಯ ಬೃಂದಾವನದಡಿಯಲ್ಲಿ "ಹಸಿರು ಹೊನ್ನು" ಎಂಬ ವಿಷಯದ ಬಗ್ಗೆ ಹೆಸರಾಂತ ಸಾಹಿತಿಗಳು, ವಾಗ್ಮಿಗಳು ಮಾತನಾಡಿದರು. ಅಂದು ನಡೆದ ಕಾರ್ಯಕ್ರಮಗಳಲ್ಲಿ ಹಲವಾರು ರೈತರ ಬಗ್ಗೆ ಇತ್ತು. ಹಾಗಾಗಿ ಸಮಾಜ ಸೇವೆ ಕೂಡ ರೈತರ ಪರ ಇರಲಿ ಎಂಬ ಆಶಯ ಎಲ್ಲರಲ್ಲಿತ್ತು. ರೈತ ನಮ್ಮ ಅನ್ನದಾತ. ಅವನ ಕಷ್ಟಕ್ಕೆ ಸ್ಪಂದಿಸಿವುದು ನಮ್ಮೆಲ್ಲರ ಕರ್ತವ್ಯ. ಮಳೆ ಬಾರದೆ, ಬೆಳೆ ಸಿಗದೆ, ಸಾಲ ಸೋಲ ಮಾಡಿ ಹಲವಾರು ರೈತರು ಸಂಕಷ್ಟದಿಂದ ನೊಂದಿದ್ದಾರೆ ಮತ್ತೆ ಕೆಲವರು ಆತ್ಮಹತ್ಯೆಗೂ ಮೊರೆ ಹೋಗಿದ್ದಾರೆ. ಕರ್ನಾಟಕದಲ್ಲಿ, ಸಂಕಷ್ಟದಲ್ಲಿರುವ ಕೆಲ ರೈತರನ್ನು ಗುರುತಿಸಿ ಸಹಾಯ ಮಾಡುವ ಆಶಯ ನಮ್ಮದು. ಈ ಉದ್ದೇಶದಿಂದ ಹಣವನ್ನು ಸಂಗ್ರಹಿಸಲಾಯಿತು.

ಡಿಸೆಂಬರ್ 3ರಂದು ನಡೆಯುವ ಮಕ್ಕಳ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವದಂದು ಸಂಗ್ರಹಿಸುವ ಹಣವನ್ನು ಜೊತೆಗೂಡಿಸಿ ಕರ್ನಾಟಕದ ರೈತರ ಉದ್ಧಾರಕ್ಕಾಗಿ ವಿನಿಯೋಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.●

# Milana Thanda Introduces "Yuva Brindavana!"

Suhas Kumar



Amulya Kattimani



Kannada Cultural Organization – Brindavana was established, in 2004, and ever since, the organization has created:

- A stage for local performers, young and seasoned alike, while also attracting the greatest talents of Karnataka
- Opportunities for locals to contribute to their societies in both India and America
- Relationships amongst families and friends with the interest of keeping alive the beautiful, humble, and accepting culture of Karnataka.

Brindavana and all of the teams that nurtured this young organization took the initiative to create all of this, consistently, for 12 years, primarily so that the Youth of our culture can do the same for the next generation of Kannada-Americans.

The kids who performed in the first Makkala Dinacharane in 2004 were slowly growing older in an American society as Kannadigas. This meant that these children had to keep up with their stellar academics while simultaneously maintaining the language, music, dance, and religions of Karnataka. So after their 7 hours of school, these kids would go to sangeetha class, bharatanatyam class, mrudangam class, or religious activities. By the time they became teenage students, they started partaking in other activities to propel themselves into a top college or a financially sound career in the future. Through their heavy involvement in these activities, their social circles became more diverse and more time consuming.

Soon enough, these other activities started taking priority and slowly, these kids started becoming too busy to come out to a Brindavana event. At an age where these youths had to participate in 10 other activities simultaneously, it became difficult to force them to partake in yet another performance and they started losing interest in what Brindavana had to offer.

This phenomenon was noticed and touched upon during Maitri Thanda's time and Brindavana took the next step forward with the first ever Annual Youth Conference at the end of Sambhrama Thanda's 2 years. These efforts proved valuable as they were the first two bricks laid to create Milana Thanda's "Yuva Brindavana," an official brand of Brindavana, dedicated to maintain the interest and intrigue of the young adults of the Kannada community.

Under the new brand, the first concept through Yuva Brindavana was a "Youth Hour," an hour during each main event dedicated to providing exposure useful for the development of the youth. During Vasanthotsava, the first event by the new Thanda, the first "Youth Hour" was conducted by an established entrepreneur named Satyajit Naik. He engaged the curiosity of the youth from 8 years of age to adults, speaking to how each of the youth's ideas should be taken seriously and initiated from a young age if they wanted to become successful entrepreneurs.

Following the first successful concept, Yuva Brindavana extended its helping hand towards Live for the Moment, an organization created








by a Brindavana Youth member, Swathi Prasad, geared towards raising money for underprivileged families engaged in the difficult and expensive battle against pediatric leukemia and lymphoma. In its first ever Annual event, the organization was able to raise $3,250 towards St. Peter's Children's Hospital's fight against leukemia and lymphoma. This momentum steamrolled right into the "Youth Hour" during Hamsalekha Night carried out by Ms. Rohini Nellore. She introduced the concept of learning and improving oneself by dedicating time and energy towards navigating physical positions and mental penance through yoga. This, a popular form of personal development, was practiced and taught to the 25 members of the Yuva Brindavana community.

After a fun summer with the Brindavana Annual Picnic, 6 families set out on an adventure to North Carolina where 11 members of the Yuva Brindavana team performed the song bearing Brindavana's namesake for an audience at NAVIKA.

With no time to rest between the labor day weekend of NAVIKA and Ganeshotsava, Yuva Brindavana prepared for 3 stellar academics, coming out of Harvard, MIT, and George Washington University, to educate the youth on the tricks and tips for tackling high school, SAT's, college applications, and college itself. This Youth Hour extended well past 1 hour with the staggering questions from the 30+ youth and their parents present during the interactive session.

Finally, the year was coming to an end, and one more extravaganza was left before the final Brindavana event celebrating the Kannada Rajyotsava and Children's Day. The Annual Youth Conference started off at iPlay America where 4 medical professionals, Lakshmi Prasad (Holistic Medicine Professional), Shakuntala Chandra (Neonatologist), Sneha Kumar (Pharmacist), and Nandini Prasad (Physical Therapist) explored the different fields of medicine with the youth. Following the informative session, the youth enjoyed their time in the arcade park till it was time to prepare over 500 brown lunch bags to be distributed by the Yuva Brindavana members the next day at the streets of New Brunswick and to family shelters.

Year two of Milana Thanda was underway and this was a big year, with AKKA 2016 being hosted locally at Atlantic City, NJ. With that in mind, however, Brindavana still upheld its attraction by hosting several events leading up to AKKA 2016. Rutgers Day, the first event, started off at Amulya's, Yuva Brindavana's co-lead's, apartment where the same brown lunch bags were prepared to again distribute to New Brunswick, but this time, instead of 5 members of the Yuva Brindavana team distributing, nearly 15 members congregated to make the distribution experience a grand success. Following the distribution, the youth made their way to Busch Campus at Rutgers to experience Rutgers Day, an event hosted by the different organizations and majors at Rutgers to spread awareness. At this point, it had become evident that the Yuva Brindavana interest started branching out further as more dispersed members of the community started looking forward to the events hosted by the Brindavana and Yuva Brindavana flagships.

The impending interest accumulated nearly 30 members to witness the musical genius of Anil Salem, a young Kannada composer creating



musical marvels with his DIY sound system encompassing a guitar, a drum, and noise fluctuation technology. The youth members nearly missed their performance entranced with his ensemble.

Because Anil Salem was so spectacular, he was asked to showcase more of his talent to kick off the second half of the 2nd Annual Benefit Gala held by Live for the Moment. This event showcased the musical talents of the Indian Youth in the North East region in a heart wrenching musical taking the audience on a journey of a recently diagnosed leukemia patient. Swathi Prasad, and her team created a beautiful production with songs, dances and drama to raise $8,500 towards both St. Peter's and Robert Wood Johnson's fights against pediatric leukemia and lymphoma.





had started. From the 11 youth members from the year before, nearly 20 teenagers and 60 youth altogether partook in 6 large performances comprising of over 30 dances, drama, and song sequences altogether. This took the entire team nearly 2 days per week for the entire 2 months of summer vacation to learn proficiently and to execute profoundly at AKKA 2016! This was the most staggering number of youth participating solely from Brindavana at such a major Kannada event and the passion each and every youth member channeled to deliver their best performances was unforgettable.

After the two final Milana Thanda events, Ganeshotsava and Rajyotsava, the Yuva Brindavana members have one final event, the Annual Youth Conference, to look forward to till the next team raises the Yuva Brindavana stronghold to greater heights and wider reaches!




# ಬೃಂದಾವನ ಕನ್ನಡ ಶಾಲೆ

ಮಲ್ಲಿಕ್ ಪ್ರಸಾದ್



ನವೆಂಬರ್ 7, 2015 ರಂದು ಸೌತ್ ಬ್ರನ್ಸ್‌ವಿಕ್ನಲ್ಲಿ ಶುರುವಾದ ಬೃಂದಾವನ ಕನ್ನಡ ಶಾಲೆ ಈಗ ಒಂದು ವರ್ಷದ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ನ್ಯೂ ಜೆರ್ಸಿಯಲ್ಲಿ ನೆಟ್ಟ ಕನ್ನಡದ ಸಸಿ ಒಂದು ವರ್ಷದ ದೊಡ್ಡ ಗಿಡವಾಗಿದೆ. ಕಡಲಾಚೆ ಅಮೇರಿಕ ದೇಶದಲ್ಲಿ ನಮ್ಮ ಮಕ್ಕಳೊಂದಿಗೆ ಕನ್ನಡದ ಕಂಪು ಹರಿಸಬೇಕೆಂಬ ಇಚ್ಛೆಯಿಂದ ಶುರುವಾಯಿತು ಮಲ್ಲಿಕ್ ಪ್ರಸಾದ್ ಮತ್ತು ಅಶೋಕ್ ಕಟ್ಟಿಮನಿ ಅವರು ಕಟ್ಟಿದ ಒಂದು ಸಣ್ಣ ಕನಸು – "ಬೃಂದಾವನ ಕನ್ನಡ ಕಲಿಸೋಣ". ನಮ್ಮ ಕನ್ನಡದ ಕಂದಮ್ಮಗಳಿಗೆ ಕನ್ನಡ ಸರಿಯಾಗಿ ಮಾತನಾಡಲು, ಓದಲು, ಬರೆಯಲು ತಯಾರು ಮಾಡಬೇಕೆಂಬ ಉದ್ದೇಶದಿಂದ ಪ್ರಾರಂಭವಾಯಿತು ಈ ಕನಸು. ಮಕ್ಕಳಿಗೆ ಸರಿಯಾಗಿ ಕನ್ನಡ ಮಾತನಾಡಲು ಕಲಿಸುವುದು ನಮ್ಮ ಮೊದಲ ಗುರಿ. ಕನ್ನಡದಲ್ಲಿ ಮಾತನಾಡಿದರೆ – ಕನ್ನಡ ಓದಲು ಬರೆಯಲು ಸುಗಮವಾಗುತ್ತದೆ. ಈ ನೀತಿ ಆಧರಿಸಿ ಕ್ಯಾಲಿಫೋರ್ನಿಯಾದ ಶಿವಾ ಗೌಡೆರ್ ಅವರ ಪಠ್ಯಪುಸ್ತಕ ಕ್ರಮಗಳನ್ನು ಅಳವಡಿಸಿಕೊಂಡು ನಮ್ಮ ಸುಲಭ ಕನ್ನಡ ಕಲಿಕಾ ವಿಧಾನ (ಸಕವಿ) ಜನನವಾಯಿತು. ನ್ಯೂ ಜೆರ್ಸಿಯಲ್ಲಿ ಹಲವಾರು ಕಡೆ ಕನ್ನಡ ಶಾಲೆ ತೆರೆದು ಕನ್ನಡ ಕಲಿಯಬೇಕೆಂಬ ಬಯಕೆ ಇರುವ ಎಲ್ಲಾ ಮಕ್ಕಳಿಗೂ, ಪೋಷಕರಿಗೂ ಒಂದು ಅವಕಾಶ ಮಾಡಿಕೊಡಬೇಕೆಂಬುದು ನಮ್ಮ ಉದ್ದೇಶ.

ಈ ಒಂದು ದೊಡ್ಡ ಆಶಯದ ಕರೆಗೆ ಓಗೊಟ್ಟಿದ್ದು ಒಂದು ದೊಡ್ಡ ಉತ್ಸಾಹಿ ಸ್ವಯಂ ಸೇವಕರ ಗುಂಪು. ಅವರ ಉತ್ಸಾಹ ಮತ್ತು ಸಹಕಾರವನ್ನು ನೋಡಿ ನಮ್ಮ ಕನಸು ನನಸಾಗುವುದರಲ್ಲಿ ಸಂದೇಹವೇ ಇಲ್ಲ ಎಂದೆನಿಸಿತು. ಸ್ವಯಂ ಸೇವಕರ ಜೊತೆ ದೀರ್ಘ ಸಮಾಲೋಚನೆ ನಡೆಸಿ ಪಠ್ಯ ಕ್ರಮ ಮತ್ತು ಕಲಿಸುವ ವಿಧಾನಗಳನ್ನು ಪರಿಪೂರ್ಣವಾಗಿ ವಿಶ್ಲೇಷಿಸಿ, ಪಠ್ಯ ಕ್ರಮದ ಬಗ್ಗೆ ತಯಾರಿ ನಡೆಸಿದೆವು ಮತ್ತು ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಬೃಂದಾವನದಿಂದ ನೀಡಲು ನಿರ್ಧರಿಸಿದೆವು.

ನಮ್ಮ "ಬೃಂದಾವನ ಕನ್ನಡ ಕಲಿಸೋಣ – ಕನ್ನಡ ಶಾಲೆ", ಪೋಷಕರು ಮತ್ತು ಸ್ವಯಂ ಸೇವಕರ ಪ್ರೋತ್ಸಾಹದಿಂದ, ಮೂರು ಶಾಖೆಗಳನ್ನು ಹೊಂದಿವೆ. ಸೌತ್ ಬ್ರನ್ಸ್ವಿಕ್, ಈಸ್ಟ್ ವಿಂಡ್ಸರ್ ಮತ್ತು ಎಡಿಸನ್ ನಗರಗಳಲ್ಲಿ ಆರಂಭಗೊಂಡಿದೆ. ಅಷ್ಟೇ ಅಲ್ಲದೆ 125 ಕ್ಕೂ ಹೆಚ್ಚು ಕನ್ನಡದ ಕಂದಮ್ಮಗಳು ಸುಲಭ ಕನ್ನಡ ಕಲಿಕಾ ವಿಧಾನ (ಸಕವಿ) ದಲ್ಲಿ ಕನ್ನಡ ಕಲಿತು ನಲಿದು ಮಾತಾಡುತ್ತಾರೆ! ಹೆಚ್ಚು ಮಕ್ಕಳು ಕನ್ನಡ ಭಾಷೆಯನ್ನು ಅತ್ಯಂತ ಉತ್ಸಾಹದಿಂದ ಕಲಿಯುತ್ತಿದ್ದಾರೆ ಎಂದು ನಿಮ್ಮೆಲ್ಲರ ಜೊತೆ ಹಂಚಿಕೊಳ್ಳಲು ನಮಗೆ ಅತೀವ ಸಂತಸವಾಗಿದೆ.

**ಬೃಂದಾವನ ಕನ್ನಡ ಕಲಿಸೋಣ ಶಾಲೆಗಳ ಇಂದಿನ ಪಕ್ಷಿ ನೋಟ ಹೀಗಿದೆ,**

**ಸೌತ್ ಬ್ರನ್ಸ್ವಿಕ್ ಶಾಲೆ :** ನವೆಂಬರ್ 7, 2015 ರಂದು ಮುನಿಸಿಪಲ್ ಕಾಂಪ್ಲೆಕ್ಸ್ ಸಭಾಂಗಣದಲ್ಲಿ ಮೊದಲ ಕನ್ನಡ ಶಾಲೆ ಪ್ರಾರಂಭವಾಯಿತು, 45 ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ.

**ಈಸ್ಟ್ ವಿಂಡ್ಸರ್ ಶಾಲೆ :** ಜನವರಿ 9, 2016 ರಂದು ಈಸ್ಟ್ ವಿಂಡ್ಸರ್ ಪಬ್ಲಿಕ್ ಲೈಬ್ರರಿಯಲ್ಲಿ ಎರಡನೆ ಕನ್ನಡ ಶಾಲೆ ಆರಂಭಗೊಂಡಿತು, ಈಗ 24 ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ.

**ಎಡಿಸನ್ ಶಾಲೆ :** ಏಪ್ರಿಲ್ 2, 2016 ರಂದು ಸ್ಟೆಲ್ಟನ್ ಕಮ್ಯೂನಿಟಿ ಸೆಂಟರ್, ಎಡಿಸನ್ ರೈಲ್ವೆ ಸ್ಟೇಷನ್ ಸಮೀಪದಲ್ಲಿ ಶುರುವಾಯಿತು, ಈಗ 31 ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ.






ಬೃಂದಾವನ ವಸಂತೋತ್ಸವದಂದು ಕನ್ನಡ ಶಾಲೆ ಮಕ್ಕಳು ಅನೇಕ ವೈವಿಧ್ಯ ಕನ್ನಡ ಕಾರ್ಯಕ್ರಮಗಳನ್ನು ಉತ್ಸಾಹದಿಂದ ನೀಡಿ ನಮ್ಮ ಮನರಂಜಿಸಿದರು. ಬೃಂದಾವನ ವಾಣಿ ಈ–ಪತ್ರಿಕೆಯಲ್ಲಿ ತಮ್ಮ ಚೊಚ್ಚಲ ಕನ್ನಡ ಬರವಣಿಗೆಯನ್ನು ಕೊಡುಗೆ ನೀಡಿದರು. ಮಕ್ಕಳ ಕನ್ನಡ ಕಲಿಯುವ ಉತ್ಸಾಹ ನೋಡಿದಾಗ ಸಾರ್ಥಕ ಭಾವ ಮೂಡುತ್ತದೆ. ಪೋಷಕರು ಮತ್ತು ಸ್ವಯಂ ಸೇವಕರ ಪ್ರೋತ್ಸಾಹದಿಂದ ಬೃಂದಾವನ ಮಿಲನ ತಂಡ 125 ಕ್ಕೂ ಹೆಚ್ಚು ಮಕ್ಕಳಿಗೆ ಕನ್ನಡ ಕಲಿಸುವ ಘಟ್ಟ ಮುಟ್ಟಿದ ಈ ಸುಸಂದರ್ಭದಲ್ಲಿ, ವಸಂತೋತ್ಸವದಂದು ಮೂರೂ ಶಾಲೆಯ ಸ್ವಯಂ ಸೇವಕರನ್ನು ಗೌರವಿಸಿದೆವು. 11ನೇ ತರಗತಿಯಲ್ಲಿ ಓದುತ್ತಿರವ ಅನನ್ಯ ಗಿರೀಶ್ ಈಸ್ಟ್ ವಿಂಡ್ಸರ್ ಶಾಲೆಯಲ್ಲಿ ಕನ್ನಡ ಕಲಿಸುತ್ತಿರುವ ನಮ್ಮ ಅತ್ಯಂತ ಕಿರಿಯ ಶಾಲಾ ಶಿಕ್ಷಕಿ ಎಂದು ಘೋಷಿಸಿದಾಗ ಸಭಾಂಗಣದಲ್ಲಿ ಚಪ್ಪಾಳೆಯ ಸುರಿಮಳೆಯಾಯಿತು.

ಸೆಪ್ಟೆಂಬರ್ 2, 3 ಮತ್ತು 4, 2016 ರಂದು ಅಟ್ಲಾಂಟಿಕ್ ಸಿಟಿ, ನ್ಯೂ ಜೆರ್ಸಿಯಲ್ಲಿ ನಡೆದ 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನಕ್ಕೆ 'ಉಮಾ ಕಾರಂತ್' ಮತ್ತು 'ಅರ್ಚನಾ ಆಚಾರ್ಯ' ಇವರ ನೇತೃತ್ವದಲ್ಲಿ ನಮ್ಮ ಕನ್ನಡ ಶಾಲೆಯ 45 ಮಕ್ಕಳು ಸುಂದರವಾದ ಜ್ಞಾನ ಪೀಠ ವೈಭವ ರೂಪಕವನ್ನು ಪ್ರಸ್ತುತ ಪಡಿಸಿದರು. 'ಅಕ್ಕ'ದಲ್ಲಿ ನಡೆದ ಮೊದಲ ಅಕ್ಕ ಕನ್ನಡ ಚಲನ ಚಿತ್ರ ಹಬ್ಬದ ಅಂಗವಾಗಿ ನಡೆದ "ಕನ್ನಡ ಮಾತಾಡಿ" ಕಿರು ಚಿತ್ರ ಸ್ಪರ್ಧೆಯಲ್ಲಿ ಎರಡು ಕಿರು ಚಿತ್ರಗಳು ನಮ್ಮ ಎಡಿಸನ್ ಹಾಗು ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ವತಿಯಿಂದ ಬಂದಿದ್ದು ಬಹು ದೊಡ್ಡ ಹೆಜ್ಜೆ. ಇನ್ನೂ ಹೆಚ್ಚು ಶಾಲೆ ತೆರೆಯಬೇಕೆಂಬ ಹಂಬಲ, ಉತ್ಸಾಹ ನಮ್ಮ ಶಾಲೆಯ ಸ್ವಯಂ ಸೇವಕರುಗಿದೆ. ಅವರ ಉತ್ಸಾಹಕ್ಕೆ ಬೃಂದಾವನ ಚಿರಋಣಿ.●
















# ಬೃಂದಾವನ ಕನ್ನಡ ಶಾಲೆಗೆ ಸಿದ್ಧತೆ...











## ಲೇಖನಗಳು

# ಸ್ವರ್ಗವೆಂಬ ಯಕ್ಷಪ್ರಶ್ನೆ

**ಉಮಾ ಮೂರ್ತಿ**



ಅದೊಂದು ಸಂಜೆ ಮಾಂಟೆಸ್ಸರಿಯಲ್ಲಿ ಓದುತ್ತಿದ್ದ ಮಗಳನ್ನು ಮನೆಗೆ ಕರೆದುಕೊಂಡು ಬರುತ್ತಿದ್ದೆ. ಹಿಂದಿನ ಸೀಟಿನಿಂದ ಪ್ರಶ್ನೆಯೊಂದು ಬಂತು. "ಅಮ್ಮ, ಸ್ವರ್ಗ ಹೇಗಿರುತ್ತೆ?"

ಅಯ್ಯೋ ದೇವರೆ! ಇದೇನು ಇದ್ದಕ್ಕಿದ್ದಂತೆ ಸ್ವರ್ಗದ ವಿಚಾರ ಬಂತು? ಸತ್ಯವನ್ನೇ ಹೇಳಿದೆ. ನಾನಿನ್ನೂ ಸ್ವರ್ಗಕ್ಕೆ ಹೋಗಿಲ್ಲವೆಂದು. ಕೂಡಲೇ, "ನಿನ್ನ ಅಪ್ಪ, ಅಂದರೆ ಅಜ್ಜ ಹೇಳಿಲ್ವೆ ಸ್ವರ್ಗದ ಬಗ್ಗೆ?" ಎಂದು ಕೇಳಿದಳು. ಅವಳ ಪ್ರಕಾರ ಇಬ್ಬರೇ ಸ್ವರ್ಗ ಸೇರಿದವರು. ಒಂದು ಕುಂದಾಪುರದ ಅಜ್ಜ, ಇನ್ನೊಬ್ಬರು "Lion King" ನ ಮುಫಾಸ. ಅಜ್ಜ ಯಾವತ್ತೂ ಏನೂ ಹೇಳಿಲ್ಲವೆಂದೆ. "ಅಮ್ಮ, ಮೆಸೇಜ್ ಕಳುಹಿಸಿ ನೋಡು" ಎಂದು ಸಲಹೆ ಕೊಟ್ಟಳು. ಮೇಲೆ ನಗುತ್ತಿದ್ದರೂ, ಮನಸ್ಸು ಸ್ವರ್ಗದ ಹಿಂದೆ ಸುತ್ತತೊಡಗಿತು.

ಚಿಕ್ಕವಳಿದ್ದಾಗ ಸ್ವರ್ಗ, ನರಕಗಳ ಬಗ್ಗೆ ಕುತೂಹಲ ಜಾಸ್ತಿ. ಹಿರಿಯರು ಸ್ವರ್ಗಕ್ಕಿಂತ ನರಕದ ಬಗ್ಗೆ ಜಾಸ್ತಿ ವಿವರಿಸುತ್ತಿದ್ದರು. ಸುಳ್ಳು ಹೇಳಿದರೆ, ತಪ್ಪು ಮಾಡಿದರೆ ನರಕ ದರ್ಶನ ಖಾತರಿ. ಯಮನ ಬಂಟ ಚಿತ್ರಗುಪ್ತ ಎಲ್ಲಾ ಲೆಕ್ಕಗಳನ್ನು ಬರೆದಿಡುವನಂತೆ. ತಪ್ಪಿಗೆ ಅನುಗುಣವಾಗಿ ಕುದಿಯುವ ನೀರು, ಮುಳ್ಳಿನ ಹಾಸಿಗೆ, ಬೆಂಕಿಯ ಬಿಸಿ, ಚಾಟಿಯ ಹೊಡೆತದ ಶಿಕ್ಷೆ ನೀಡಲಾಗುತ್ತಂತೆ. ಸ್ವರ್ಗದಲ್ಲಿ ಎಲ್ಲವೂ ಹಿತ, ನೋವೇ ಇಲ್ಲದ ಪ್ರಪಂಚ. ಒಟ್ಟಾರೆ ಸ್ವರ್ಗದ ಆಸೆಗಾಗಿ ನಮ್ಮನ್ನು ಒಳ್ಳೆಯ ಕೆಲಸ ಮಾಡಲು ಉತ್ತೇಜಿಸುತ್ತಿದ್ದರು. ಉದಯವಾಣಿ ಕರಾವಳಿಯ ಜನಪ್ರಿಯ ದಿನಪತ್ರಿಕೆ. ಒಳಗಿನ ಒಂದು ಪುಟ ಬರೇ ಶ್ರದ್ಧಾಂಜಲಿಗೆ ಮೀಸಲು. ನನ್ನ ತಂದೆಯವರಿಗೆ ಈ ಪುಟವನ್ನು ಓದುವ ಹವ್ಯಾಸ. ಯಾರಾದರೂ ಗೊತ್ತಿರುವವರು ಇದ್ದಾರೆಯೇ ಎಂದು ಅರಿಯಲು. ನನಗೆ ಎಲ್ಲರ ವಯಸ್ಸನ್ನು ಲೆಕ್ಕ ಹಾಕುವ ಅಭ್ಯಾಸ. ಆಗ ಒಂದು ವಿಷಯದ ಅರಿವಾಯಿತು. ಕೆಲವರು ಸ್ವರ್ಗವಾಸಿಗಳಾಗುತ್ತಿದ್ದರೆ, ಇನ್ನು ಕೆಲವರು ವೈಕುಂಠ ಸೇರುತ್ತಿದ್ದರು. ಮತ್ತೆ ಕೆಲವರು ಕೈಲಾಸ ಸೇರುತ್ತಿದ್ದರೆ, ಆಗೊಮ್ಮೆ ಈಗೊಮ್ಮೆ ಕೆಲವು ಬ್ರಹ್ಮಲೋಕ ಸೇರಿದ ಜ್ಞಾನಿಗಳೂ ಅಲ್ಲಲ್ಲಿ ಕಾಣಿಸುತ್ತಿದ್ದರು. ಸತ್ತವರು ಮಾತ್ರ ಸ್ವರ್ಗ ಸೇರುವರು ಎಂಬ ತರ್ಕಕ್ಕೆ ನಾನೂ ಬಂದೆ.

ಅದು ರೇಡಿಯೋ ಕಾಲ. ಶಾಲೆಯಿಂದ ಮಧ್ಯಾಹ್ನ ಊಟಕ್ಕೆ ಬಂದಾಗ ಆಕಾಶವಾಣಿ ಮಂಗಳೂರು ಬಿತ್ತರಿಸುತ್ತಿದ್ದ ವೃಂದಗಾನ ಬೇಕು ಬೇಡವೆಂದರೂ ಕಿವಿಗೆ ಬೀಳುತ್ತಿತ್ತು. Inside Out ಮೂವಿ ಸ್ಮರಣ ಕೋಣೆಯಂತೆ, ನನ್ನ ಸ್ಮರಣ ಕೋಣೆಯಿಂದ ಹೊರಬಂದಿದ್ದು ವೃಂದಗಾನ "ಸಗ್ಗದ ಬಾಗಿಲು ಎಲ್ಲಿಹುದಣ್ಣ? ನುಗ್ಗಿದೆ ಎಲ್ಲಿಯೂ ಸಿಗಲಿಲ್ಲಣ್ಣ" ಎಂದು ಕವಿ ಆರಂಭಿಸಿ, ಕೊನೆಯಲ್ಲಿ "ಹಕ್ಕಿಯು ಉಲಿಯಲು, ಹೂವು ಅರಳಲು, ತಾಯಿಯು ಕಂದನ ಮುದ್ದಿಸಿ ನಲಿಯಲು ಸಗ್ಗದ ಬಾಗಿಲು ತೆಗೆಯುವುದು" ಎಂದು ಬಣ್ಣಿಸುತ್ತಾರೆ. ಯಾಕೋ ಏನೋ ಈ ವೃಂದಗಾನ ಮನಸ್ಸಿನಲ್ಲಿ ಅಚ್ಚೊತ್ತಿತ್ತು. ವಾಲ್ಮೀಕಿ ರಾಮಾಯಣದ ಕೊನೆಯಲ್ಲಿ ಶ್ರೀ ರಾಮ ಲಕ್ಷ್ಮಣನಿಗೆ "ಚಿನ್ನದ ಲಂಕೆ ನನಗೇನು ಅನ್ನಿಸುವುದಿಲ್ಲ. ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ. ತಾಯಿ, ತಾಯ್ನಾಡು ಸ್ವರ್ಗಕ್ಕಿಂತ ಶ್ರೇಷ್ಠ" ಎಂದು ಉಲ್ಲೇಖಿಸಿದ್ದು ಕಂಡುಬರುತ್ತದೆ. ಭಾರತ ಬಿಟ್ಟು ಬಂದು ಅಮೇರಿಕಾದ ಪ್ರಜೆಯಾದಾಗ ಸ್ವರ್ಗದ ಮೇಲಿನ ವ್ಯಾಖ್ಯಾನದ ಆಳ ಅರಿವಾಗತೊಡಗಿತು.

ಸ್ವರ್ಗವೆಂದಾಗ ನೆನಪಾಗುವುದು ಜನಪ್ರಿಯ ಚಿತ್ರಗೀತೆ "ಇಲ್ಲೇ ಸ್ವರ್ಗ ಇಲ್ಲೇ ನರಕ ಮೇಲೇನಿಲ್ಲ ಸುಳ್ಳು". ಶಾಲಾದಿನಗಳಲ್ಲಿ ಇದು ನಮಗೆ ಗೋಳಿನ ಹಾಡು ಅಂತೆನಿಸಿದರೆ ಜೀವನದ ಹಲವು ಮಜಲುಗಳನ್ನು ದಾಟಿದ ಹಿರಿಯರು ಎಷ್ಟು ಅರ್ಥಗರ್ಭಿತವಾಗಿದೆ ಎಂದು ತಲೆದೂಗುತ್ತಿದ್ದರು. ದೊಡ್ಡವಳಾಗುತ್ತಾ ಹತ್ತು ಹಲವು ಸಿಹಿ ಕಹಿ ಅನುಭವಗಳನಂತರ ನಾನೂ ಈ ಹಾಡಿಗೆ ತಲೆದೂಗಲಾರಂಭಿಸಿದೆ.

"ಒಳ್ಳೆಯದನ್ನು ಮಾಡುತ್ತಾ, ಜೊತೆಯಲ್ಲಿರುವವರನ್ನು ಹೇಗಿದ್ದಾರೋ ಹಾಗೆಯೇ ಸ್ವೀಕರಿಸುತ್ತಾ, ಬೇರೆಯವರ ಸಂತೋಷದಲ್ಲಿ ಭಾಗಿಯಾಗುವ ಸ್ವಭಾವವನ್ನು ಬೆಳೆಸಿಕೊಂಡು ಬಾಳುವುದೆ ಸ್ವರ್ಗ. ತಪ್ಪು ಮಾಡಿದ ನಂತರ ತಪ್ಪಿತಸ್ಥ ಭಾವನೆಯಿಂದ ನರಳುವುದೇ ನರಕ" ಎಂದು ಐದು ವರ್ಷದ ಮಗುವಿಗೆ ಹೇಳುವುದಾದರೂ ಹೇಗೆ ? ಸಾವಿನ ನಂತರ ಸ್ವರ್ಗ ಎಂದು ಹೇಳುವ ಮನಸ್ಸಿಲ್ಲ, ನರಕದ ಚಿತ್ರ ಬಿಡಿಸಿ ಋಣಾತ್ಮಕ ಸಂದೇಶ ನೀಡಲಾರೆ.

ಉತ್ತಮ ಕೆಲಸಗಳಿಂದ ಒಳ್ಳೆಯ ಪರಿಸರ ಸೃಷ್ಟಿಯೇ ಸ್ವರ್ಗ ಎಂದು ಚಿಕ್ಕದಾಗಿ ಹೇಳೋಣವೆಂದು, "ಮಗಳೆ ಸ್ವರ್ಗ ಎಂದರೆ.." ಎಂದು ಶುರು ಮಾಡಿದಾಗ, ಮಗಳು ನನ್ನ ವಿವರಣೆ ಅರ್ಧಕ್ಕೆ ತುಂಡರಿಸಿ, "ಅಮ್ಮ, ಚಿಂತೆ ಬೇಡ. ಸ್ವರ್ಗ ಅಂದರೆ ನಿನಗೆ ಗೊತ್ತಿಲ್ಲಾ ಅಂತ ಕಾಣುತ್ತೆ. ಒಂದು ಉಪಾಯ, just google ಮಾಡು" ಅಂದಳು. ಮಗಳಿಗೆ ಹತ್ತು ವರ್ಷವಾದರೂ, ನಾನು ಇನ್ನೂ ಜೀವನ ಎಂಬ ಅಂತರ್ಜಾಲದಲ್ಲಿ ಸ್ವರ್ಗದ ವ್ಯಾಖ್ಯಾನವನ್ನು google ಮಾಡುತ್ತಲೇ ಇದ್ದೇನೆ.●





# ಸಂಕ್ರಾಂತಿಯ ನೆನಪು... ಸಕ್ಕರೆ ಅಚ್ಚು!

**ಆಶಾ ಮೇಲ್ಕೋಟೆ**



ನಾನಾಗ ಪ್ರಾಯಶ: ಐದು ಅಥವಾ ಆರನೆಯ ತರಗತಿಯಲ್ಲಿದ್ದೆ... ಹತ್ತು, ಹನ್ನೊಂದರ ವಯಸ್ಸು. ಸಂಕ್ರಾಂತಿಗೆ 5–6 ದಿನಗಳಿದ್ದವು ... ಹೀಗೇ ಮನೆಯ ಮುಂದೆ ಗೆಳತಿ ಗಾಯತ್ರಿಯೊಂದಿಗೆ ಕುಂಟೆಬಿಲ್ಲೆ ಆಡುತ್ತಿದ್ದೆ. 'ಟರ್ರ್' ಎಂದು ಆಟೋ ಬಂದು ನಿಂತಿತು. ಆಟೋದಿಂದ ನನ್ನ ಅಣ್ಣ (ನಮ್ಮ ತಂದೆಯವರು) ಇಳಿದರು. ಅವರ ಹಿಂದೆಯೇ ಸುಮಾರು ನನ್ನಷ್ಟೇ ಎತ್ತರವಿದ್ದ ಬಾಳೆಗೊನೆಯೊಂದು ಇಳಿಯಿತು. ಆಟೋದವನಿಗೆ ದುಡ್ಡು ಕೊಟ್ಟು, ಬಾಳೆಗೊನೆ ಹೊತ್ತು ಅಣ್ಣ ದಿಗ್ವಿಜಯ ಮಾಡಿ ಬಂದವರಂತೆ ಮನೆಯೆಡೆಗೆ ನಡೆದರು. ಬಚ್ಚ ಎಸೆದು, ಆಟ ಬಿಟ್ಟಲ್ಲೇ ಬಿಟ್ಟು, ಅವರ ಹಿಂದೆ ನಾನೂ ನಡೆದೆ. ಬಾಗಿಲು ತೆರೆದು, ಬಾಳೆಗೊನೆಯನ್ನು ನೋಡಿದ ಅಮ್ಮ ಮೂರ್ಛೆ ಹೋಗುವುದೊಂದು ಬಾಕಿ!!!

"ಏನೂಂದ್ರೆ ಇದು?". "ಕಾಣಿಸ್ತಾ ಇಲ್ವೇ! ಬಾಳೆಗೊನೆ". ತುಟಿಯ ಮೇಲೆ ತುಂಟ ಕಿರುನಗೆ. ಅಣ್ಣನ ಕಣ್ಣುಗಳು ಮಿಂಚುತ್ತಿದ್ದವು! ಬಾಳೆಗೊನೆ! ಒಳ್ಳೆ ಭೂತಕ್ಕೆ ಎಡೆ ಹಾಕೋ ಹಾಗಿದೆ! ಅಮ್ಮನ ಕಣ್ಣಿಂದ ಗಂಗೆ, ಯಮುನೆಯರು ಇಳಿಯುವುದರಲ್ಲಿದ್ದರು! Firstclass ಆಗಿದೆ. ಸಂಕ್ರಾಂತಿ ಹೊತ್ತಿಗೆ correct ಆಗಿ ಹಣ್ಣಾಗುತ್ತೆ! ಬಾಳೆಗೊನೆ ನಮ್ಮನೆ ಉಗ್ರಾಣದ ಮೂಲೆಯಲ್ಲಿ ಉಪಸ್ಥಿತಗೊಂಡಿತು.

ಪ್ರತೀ ಸಂಕ್ರಾಂತಿಯಂದು ಅಣ್ಣ ಸಾಧಾರಣವಾಗಿ ಗೊನೆಯನ್ನೇ ತರುತ್ತಿದ್ದರು. ಎರಡು ಬೀದಿಯ ತುಂಬಾ ನಾವು ನಾಲ್ವರು ಮಕ್ಕಳ ಸ್ನೇಹಿತರ ಮನೆಗಳೂ ಸೇರಿದಂತೆ, ಅಮ್ಮ, ಅಣ್ಣನ ಸ್ನೇಹಿತರ, ಅಲ್ಲದೆ ಅಮ್ಮನ ಸಮಾಜದ ಗೆಳತಿಯರ ಮನೆಗಳು. ನೆಂಟರು, ಅಣ್ಣನ ಆಫೀಸ್ ಗೆಳೆಯರು. ಚಿಪ್ಪುಗಳು ಸಾಲುತ್ತಿರಲಿಲ್ಲ. ಅಮ್ಮನ ವಿವೇಚನೆಗೆ ಬಿಟ್ಟರೆ, ನಂಜನಗೂಡಿನ ರಸಬಾಳೆ ಗೊನೆಯೇ ಮನೆಗೆ ಬರುತ್ತಿದ್ದುದು. ಅಣ್ಣ, ಪಚ್ಚಬಾಳೆ, ಆದರೆ ಹಬ್ಬಕ್ಕೆ ಸರಿಯಾಗಿ ಹದವಾಗಿ ಬಣ್ಣ ಬರುವಂತೆಯೇ ಆರಿಸಿ ತರುತ್ತಿದ್ದರು. ಅಣ್ಣಾನೂ ಸಾಕಷ್ಟು ಜಾಣನೇ!

ಹೀಗಿರಲಾಗಿ, ಈ ಬಾರಿ, ಈ ಅದ್ಭುತವಾದ ಗೊನೆ ಬಂದಂದಿನಿಂದ ಶುರುವಾಯ್ತು, ಅಮ್ಮನ ಪಿರಿಪಿರಿ. ಅಮ್ಮನಿಗೋ ಅಡುಗೆಮನೆಯಿಂದ ಹೋಗ್ತಾ, ಬರ್ತಾ ದಿನಕ್ಕಿಪ್ಪತ್ತು ಸಾರಿ ಕಣ್ಣಿಗೆ ಅದೇ ಬೀಳ್ತಿತ್ತು ಬೇರೆ! ಅಣ್ಣ ಇಲ್ಲದಾಗ, ನಮ್ಮ ಮುಂದೆ ಅಮ್ಮನ ಗೊಣಗಾಟ, ವಟವಟ ನಡೆಯುತ್ತಿತ್ತು.

"ಎಲ್ಲಿ ಸಿಕ್ತೋ ಕಾಣೆ ಇವರ್ಗೆ ಈ ಗೊನೆ!

ಇವ್ರಗ್ ಯಾವ್ ಭೂಪ ತಗಲ್ಹಾಕಿದ್ನೋ ಇದನ್ನ.

ಒಂದೊಂದು ಬಾಳೆಹಣ್ಣು ಒಂದು ಮೊಳನಾದ್ರೂ ಇದೆ. (ಅದಂತೂ ಸತ್ಯ!). ಒಳ್ಳೆ ಗೆದ್ಗೆದ್ದೆ ಹಾಗಿದೆ ಈ ಬಾಳೆಹಣ್ಣು.

ನೇಂದ್ರಬಾಳೆ ಇರಬೇಕು. ಒಳಗೆ ಅಂಟ್ ಅಂಟು ಇರ್ಬೇಕು! ಕಾಯಾಗಿದ್ರೆ ಎಲ್ಲಾರ್ಗೂ ಎರಡೆರಡು ಕೊಡ್ಬೋದಾಗಿತ್ತು, ಚಿಪ್ಸ್ ಆದ್ರೂ ಮಾಡ್ಬೋದಾಗಿತ್ತು, ಇದು ಅತ್ಲಾಗೆ ಕಾಯಿಗ್ ಕಾಯೀನೂ ಅಲ್ಲಾ. ಹಣ್ಣಿಗ್ ಹಣ್ಣೂ ಅಲ್ಲಾ. ನಂಗ್ ಗೊತ್ತು! ನನಗೆ ರೇಗಿಸೋದಕ್ಕೇ ಇದನ್ನ ತಂದಿರೋದು. ನೋಡ್ಲಾರೆ. ಈ ಗೊನೆನ! ಕೊಟ್ಟರೆ ಮಂಗಾನೂ ಬಿಸಾಕುತ್ತೆ ಇದನ್ನ. ಅಂತಾ ಚೆನ್ನಾಗಿ ಎಳ್ಳು, ಅಚ್ಚು ಮಾಡಿದ್ದೆಲ್ಲ ವ್ಯರ್ಥ!" ಇಷ್ಟೆಲ್ಲಾ ಹೀಗಳೆದು,

"ಭಗವಂತಾ, ಹಬ್ಬದ ಹೊತ್ತಿಗೆ ಇದು ಹಣ್ಣಾಗದೇ ಇರಲೀ" ಅನ್ನುವ ಅಮ್ಮನ ದೀನ ಮೊರೆಯನ್ನು ಆ ದೇವರು ಆಲಿಸಲೇ ಇಲ್ಲ! ಬಾಳೆಗೊನೆ, ಭೂತಕ್ಕೆ ಎಡೆ ಹಾಕುವುದಿರಲಿ, ಅಡೆ ಹಾಕಿದ ಬಾಳೆಕಾಯಿಯಂದದಿ, ಸೊಗಸಾಗಿ ಹಣ್ಣಾಗುತ್ತಲೇ ಹೋಯ್ತು! ಹಬ್ಬದ ಹೊತ್ತಿಗೆ, ಅಣ್ಣ predict ಮಾಡಿದಂತೆಯೇ correct ಆಗಿ. ಒಳ್ಳೆ ಹೊಂಬಣ್ಣಕ್ಕೆ ತಿರುಗಿ, ನಳನಳಿಸುವ ಹರೆಯದ ಹೆಣ್ಣಿನಂದದಿ ಅಮ್ಮನ ತಲೆಬಿಸಿಗೆ ಕಾರಣವಾಯ್ತು. ಅಮ್ಮನ ಹತ್ತಿರ ಸಾಕಷ್ಟು ಹಣ ಇದ್ದಿದ್ದರೆ, ಬೇರೆ ಗೊನೆ ತರಿಸಿ, ಈ ಬಾಳೆಹಣ್ಣಿನ ಗೊನೆನ, ನಮ್ಮನೆ ಹಿತ್ತಿಲಿನಲ್ಲಿ ಒಗೆಯುವ ಕಲ್ಲಿನ ಮೇಲೆ, ತೊಟ್ಟಿಯ ಮೇಲೆ, ಎತ್ತರದ ಕಾಂಪೌಂಡ್ ಮೇಲೆ ಸಾಲಾಗಿ ಕೂರುವ ಕೋತಿಗಳ ಸಮೂಹಕ್ಕೆ ನೈವೇದ್ಯ ಮಾಡಿಬಿಡುತ್ತಿದುದರಲ್ಲಿ ಸಂದೇಹವೇ ಇಲ್ಲ!

ನನ್ನ ಅಮ್ಮನೋ, ಅಜ್ಜ (ಅವರಪ್ಪ) ಹೇಳುತ್ತಿದ್ದಂತೆ, ಮೀನಿನ ಹೆಜ್ಜೆಯನ್ನಾದರೂ ಕಂಡು ಹಿಡಿಯುವ ಜಾಣೆ! ನಯ, ನಾಜೂಕು, ಅಣಿ, ಅಚ್ಚುಕಟ್ಟು. ಯಾರ ಕೆಲಸಾನೂ ಒಪ್ಪದವಳು. ಹೇಳಬೇಕೇ! ಎಷ್ಟು ಚೆನ್ನಾಗಿ ಎಳ್ಳು, ಸಕ್ಕರೆಅಚ್ಚು ಮಾಡುತ್ತಾಳೆ ಅಂತ! ಆಗಂತೂ ತಿಂಗಳ ಹಿಂದೆಯೇ ಶುರುವಾಗುತ್ತಿತ್ತು, ಅಮ್ಮ ಹಾಗೂ ನೆರೆಮನೆಯ ಶಾಂತಮ್ಮನ ಎಳ್ಳು, ಸಕ್ಕರೆಅಚ್ಚಿನ ಕಾರ್ಖಾನೆ! (ಪುಕ್ಕಟೆ ಸೇವೆ) ಬೇರೆ ಹೆಂಗಳೆಯರು ದಿನಕ್ಕೊಬ್ಬರು ಇಬ್ಬರಂತೆ, ಮಧ್ಯಾಹ್ನ ಊಟದನಂತರ ಅವರವರ ಮನೆ ಸಕ್ಕರೆ, ಹಾಲು, ಮೊಸರು, ನಿಂಬೆಹಣ್ಣು ಕೊಟ್ಟು ಹೋಗುತ್ತಿದ್ದರು. ಅಮ್ಮ, ಶಾಂತಮ್ಮ ಪಾಕ ಶೋಧಿಸೀ ಶೋಧಿಸೀ, ತೊಳೆಸಿ, ತೊಳೆಸಿ, ಅಚ್ಚುಗಳಿಗೆ ಸುರಿಯುತ್ತಿದ್ದರು. ನನಗೆ, ಶಾಂತಮ್ಮನ ಮಗಳು ರಮಾಮಣಿಗೆ ಶಾಲೆಗೆ ರಜೆ ಇದ್ದರೆ, ಚೇಟಾಳು, ಮೋಟಾಳುವಿನ

ಕೆಲಸಕ್ಕೆ ಹಚ್ಚುತ್ತಿದ್ದರು. ಅಂದರೆ, ನೀರಲ್ಲಿ ಮುಳುಗಿಸಿದ ಅಚ್ಚುಗಳನ್ನು ತೆಗೆದು ಒರೆಸುವುದು, ರಬ್ಬರ್ ಬ್ಯಾಂಡ್ ಹಾಕುವುದು, ಪಾಕ ಸುರಿದಮೇಲೆ ಒಳಗೆ ಟೊಳ್ಳು ಬಿಡದಂತೆ ಟಕಟಕ ಕುಟ್ಟುವುದು, ಮೇಲೆ ಸುರಿದ ಪಾಕವನ್ನು ಚಾಕುವಿನಿಂದ ಹೆರೆದು, ಪಾತ್ರೆಯೊಳಗೆ ಹಾಕುವುದು, ಶೋಧಿಸಿದ ಬಟ್ಟೆ ನೀರಲ್ಲಿ ಜಾಲಾಡಿ ಶುಭ್ರ ಮಾಡುವುದು. ಮಧ್ಯೆ ಮಧ್ಯೆ ಅಮ್ಮಂದಿರಿಗೆ ಕಾಣಿಸದಂತೆ ಶೋಧಿಸಿದ್ದನ್ನು, ಮುರುಕಲು ಅಚ್ಚುಗಳನ್ನು ಗುಳ್ಕಾಯ್ ಸ್ವಾಹ ನಡೆಯುತ್ತಿತ್ತು. ಅಚ್ಚು ತೆಗೆಯುವುದನ್ನು ಮಾತ್ರ ಅಮ್ಮ ಯಾರಿಗೂ ಬಿಡುತ್ತಿರಲಿಲ್ಲ! ನಮ್ಮ ಬೀದಿಯಲ್ಲಿ, ಎಲ್ಲರ ಮನೆಯಲ್ಲೂ ಕೊಕ್ಕರನ ಗರಿಯಂತೆ ಬೆಳ್ಳನೆ ಸಕ್ಕರೆ ಅಚ್ಚುಗಳು ನಳನಳಿಸುತ್ತಿದ್ದವು! ತಿಂಗಳುಗಟ್ಟಲೆ ಜೋಡಿಸಿಟ್ಟುಕೊಂಡು ಇರಿಸಿಕೊಂಡಿದ್ದ ಇಂಗ್ಲಿಷ್ ಮ್ಯಾಗಜಿನ್ ಗಳ ಗಟ್ಟಿಯಾದ ಪೇಪರ್ನಲ್ಲಿ ಅಮ್ಮ ಮಾಡಿದ ದೊನ್ನೆಗಳು, ಡಬ್ಬಿಗಳು, ಬಣ್ಣಬಣ್ಣದ ಪುಟ್ಟಪುಟ್ಟ ಕವರ್ಗಳು, ಎಳ್ಳು ತುಂಬಿಸಿಕೊಳ್ಳಲು ಕಾಯುತ್ತಾ, ಟೇಬಲ್ಲಿನ ಮೇಲೆ ಕಂಗೊಳಿಸುತ್ತಿದ್ದವು! ಕಬ್ಬಿನ ಗಾಡಿಯವನೊಂದಿಗೆ ಸೆಣಸಾಡಿ ಒಂದೇ ಸಮ ಕತ್ತರಿಸಿ ತಂದ ಕಬ್ಬಿನ ತುಂಡುಗಳು! ಸಣ್ಣ, ಸಣ್ಣದ ಬಟ್ಟಲುಗಳಲ್ಲಿ ಬಣ್ಣ, ಬಣ್ಣದ ಕುಸುರಿಕಾಳು! ಎಳ್ಳು ಬೀರುವ ತಟ್ಟೆಯ ಮೇಲೆ ಮುಚ್ಚಲು ಅಮ್ಮನ ಕಲಾವಂತಿಕೆಯ ಕುರುಹುಗಳಾದ, ಕಸೂತಿಯ, ಲೇಸಿನ, ಕ್ರೋಶಾದ ಚೌಕಗಳು! ಹೀಗಿರುವಾಗ, ಈ ಭೂತಾಕಾರದ ಬಾಳೆಗೊನೆ ಮನೆಯೊಳಗೆ ಬಂದಾಗಿನಿಂದ ಅಮ್ಮನಿಗೆ ನಿದ್ದೆ ಹತ್ತುತ್ತಿರಲಿಲ್ಲ. ಊಟ ಸೇರುತ್ತಿರಲಿಲ್ಲ. ಆತಂಕವೋ ಆತಂಕ! ಅಷ್ಟು ಸುಂದರವಾಗಿ ಸಜ್ಜುಗೊಳಿಸುವ ಎಳ್ಳು ಬೀರುವ ಚುಕ್ಕಿ ಚಿತ್ತಾರದ ಸಂಕ್ರಾಂತಿಯ ತಟ್ಟೆ, ಮೊಳದುದ್ದದ ಬಾಳೆಯಹಣ್ಣಿನಿಂದಾಗಿ ತನ್ನ ಸೌಂದರ್ಯ, ಆಕರ್ಷಣೆಯನ್ನು ಕಳೆದುಕೊಳ್ಳುವುದರಲ್ಲಿ ಅವಳಿಗೆ ಎಳ್ಳಿನ ಮೊನೆಯಷ್ಟಾದರೂ ಸಂದೇಹವಿರಲಿಲ್ಲ!

ಬಂದೇ ಬಿಟ್ಟಿತು ಸಂಕ್ರಾಂತಿಯ ಸುದಿನ! ಸರಿ, ನಾನೂ ಕಣದ ಲಂಗ ಹಾಕ್ಕೊಂಡು, ಜಡೆಗೆ ಕುಚ್ಚು, ಕಿವಿಗೆ ಜುಮುಕಿ, ಕೈಗೆ ಬಳೆ. ಸರ್ವಾಲಂಕೃತಳಾಗಿ, ಅಮ್ಮ 'ತಟ್ಟೆ ದಾಟಿ ಅರ್ಧ ಮೊಳ ಚಾಚಿದೆ, ಕಬ್ಬಿನ ತುಂಡಿಗಿಂತ ಉದ್ದ ಬಾಳೆಹಣ್ಣು' ಎಂದು ಗೊಣಗಾಡುತ್ತಾ, ಅಸಮಾಧಾನದಿಂದ ಅಣಿಮಾಡಿ ಕೊಟ್ಟ ತಟ್ಟೆ ಹಿಡಿದು, ಎಳ್ಳು ಬೀರಲು, ಗೆಳತಿ ಗಾಯತ್ರಿಯೊಂದಿಗೆ ಹೊರಟೆ. ಗಾಯತ್ರಿಯ ಮನೆಯಲ್ಲಿ ಎಲ್ಲ ಮನೆಗಳಿಗೂ ಬೀರುತ್ತಿರಲಿಲ್ಲ. ಬರೀ ಅವರ ಮನೆಗೆ ಬಂದವರಿಗೆ ಮಾತ್ರ ಹಣ್ಣು, ಅಚ್ಚು ಏನಾದರೂ ಕೊಡುತ್ತಿದ್ದರು. ನನ್ನೊಂದಿಗೆ ಬರುವುದರಲ್ಲಿ ಅವಳಿಗೆ ಬಹಳ ಫಾಯಿದಾ ಇತ್ತು. ನನಗೆ ತಟ್ಟೆ ಭರ್ತಿ ಕೊಡುವಾಗ, ಅವಳಿಗೂ ಒಂದು ಎಳ್ಳಿನ ಪ್ಯಾಕೆಟ್ (ಅಚ್ಚಿನೊಡನೆ) ಅಥವಾ ಚಾಕಲೇಟ್, ಬಿಸ್ಕತ್, ಪೆಪ್ಪರ್ಮೆಂಟ್ ಹೀಗೆ ಏನೇನಾದರೂ ಸಿಗುತಿತ್ತು. ಅವಳಿಗೆ ನನ್ನ ಮೇಲೆ ಸ್ವಲ್ಪ ಅಸೂಯೆ ಹುಟ್ಟುತಿದ್ದುದು ಸಹಜವೇ ಆಗಿತ್ತು. ಅದರಿಂದ ನನಗೂ ಕೊಂಚ ಒಳಗೊಳಗೇ ಖುಷಿ ಆಗುತ್ತಿದ್ದುದು ಸುಳ್ಳಲ್ಲ.

ಸರಿ, ಮೊದಲನೇ ಮನೆ ಅವಳದ್ದೇ. ಅಲ್ಲಿಂದಲೇ ಶುರುವಾಯ್ತು, "ಇದು ನಿಮ್ಮಪ್ಪ ಅವತ್ತು ಆಟೋದಲ್ಲಿ ತಂದ್ರಲ್ಲಾ, ಆ ಬಾಳೆಹಣ್ಣಾ?"

"ಹೂಂ."

"ಗೊನೆಲಿ ಕಾಣಿಸ್ತಾ ಇದ್ದಿದ್ದಕ್ಕಿಂತ ದೊಡ್ಡದಾಗಿದೆ."

ಸರಿ, ಮನೆಗೆ ಬರುವುದು, ಅಮ್ಮ ಅಣಿ ಮಾಡಿಟ್ಟಿರುವ ಮತ್ತೊಂದು ತಟ್ಟೆ ತೆಗೆದುಕೊಂಡು, ಇನ್ನೊಬ್ಬರ ಮನೆಗೆ ಹೋಗುವುದು, ಹೀಗೆ ನಡೆಯಿತು. ಸಾಧಾರಣವಾಗಿ ನನ್ನನ್ನು ಎಲ್ಲರೂ ಗುರುತಿಸುತ್ತಿದುದು, ಓ ನಾಗರತ್ನಮ್ಮನ ಮಗಳು, ಇಲ್ಲ ಕೃಷ್ಣಮೂರ್ತಿಗಳ ಮಗಳು, ಉಷನ ತಂಗಿ, ಬಾಬು ತಂಗಿ, ಅಶೋಕನ ತಂಗಿ, ನಮ್ಮ ಮನೆಯಲ್ಲಿ ಆಗ ಇದ್ದ ಸೋದರಮಾವ, ಸಾಮಿ ಅಕ್ಕನ ಮಗಳು ಹೀಗೆ. ಒಂದು ನಾಲ್ಕು ಮನೆಗಳಿಗೆ ನಾನು ಹೋಗಿ ತಟ್ಟೆಕೊಡಿ ಅಂತ ಕೇಳಿ, ನನ್ನ ತಟ್ಟೆಯ ಮೇಲಿನ ಚೌಕ ತೆಗೆದು, ಬಾಳೆಹಣ್ಣು ಕಣ್ಣಿಗೆ ಬಿದ್ದ ತಕ್ಷಣ, ಮುಂದಿನ ಸಂಭಾಷಣೆ ಅಲ್ಲಿಗೇ ನಿಂತುಹೋಗಿ ಆ ಮನೆಯವರು ಒಂದು ರೀತಿ ವಿಚಿತ್ರವಾಗಿ ನನ್ನನ್ನೇ ನೋಡುತ್ತಿದ್ದಾರೆ ಅನ್ನಿಸಲು ಶುರುವಾಯ್ತು. ಅಮ್ಮನ ಎಳ್ಳು, ಅಚ್ಚುಗಳನ್ನು ಹೊಗಳುವರೇ ಸಿಗಲಿಲ್ಲ. ಹಾಗೂ ಹೀಗೂ ಮುಜುಗರಪಟ್ಟುಕೊಂಡು ಒಂದು ಎಂಟ್ಹತ್ತು ಮನೆಗಳಿಗೆ ಕೊಟ್ಟು ಮುಗಿಸುವ ವೇಳೆಗೆ ಅಮ್ಮಾನೂ ಸ್ವಲ್ಪ ಶಾಂತಳಾಗಿದ್ದಳು. ಸಧ್ಯ! ಖರ್ಚಾಗ್ತಾ ಇದೆಯಲ್ಲ ಬಾಳೆಹಣ್ಣು ಅಂತ! ಕಡ್ಕಡೆಗೆ ಎರಡೆರಡೇ ಹಣ್ಣುಗಳನ್ನ ಬೀರಿಸಿಬಿಡ್ತಿದ್ಲೋ ಏನೋ! ಆದರೆ ಅಷ್ಟರಲ್ಲಿ ಒಂದು ಸಂಗತಿ ನಡೀತು. ಬೀದಿ ತುದಿಯ ಮನೆ, ಅಮ್ಮನ ಫ್ರೆಂಡ್ ಪಾತು (ಆಗೆಲ್ಲ ಇನ್ನೂ ಆಂಟಿ ಅಂತಿರಲಿಲ್ಲ, ಸುಮ್ನೆ ಅವ್ರ ಅಮ್ಮ, ಇವ್ರ ಅಮ್ಮ ಹೀಗೆ ಗುರುತಿಸುತ್ತಿದುದು) ಮನೆಗೆ ಹೋದೆ. ತಟ್ಟೆಯ ಮೇಲಿನ ಮುಸುಕು ತೆಗೆಯುತ್ತಿದ್ದಂತೆಯೇ ಪಾತು(ಪಾರ್ವತಿ) ನಗಲು ಪ್ರಾರಂಭಿಸಿದರು... ನಾನು ಅಣಿಯಾಗಿ ಅವರ ಮನೆ ತಟ್ಟೆಯಲ್ಲಿ ಕಬ್ಬು, ಬಾಳೆಹಣ್ಣು, ಎಳ್ಳಿನ ಪ್ಯಾಕೆಟ್, ಸಕ್ಕರೆ ಅಚ್ಚು, ಕುಸುರಿಕಾಳಿನ ಬಟ್ಟಲು ಎಲ್ಲವನ್ನೂ ಜೋಡಿಸುವುದನ್ನೇ ಕಾದಿದ್ದು, ಬಾಳೆಹಣ್ಣನ್ನು ಕೈಯಲ್ಲಿ ಹಿಡಿದು, ಈಜಿಚೇರ್ನಲ್ಲಿ ಕುಳಿತು ಪೇಪರ್ ಓದುವುದರಲ್ಲಿ ಮಗ್ನರಾಗಿದ್ದ ಅವರ ಪತಿ ಪರಮೇಶ್ವರನ ಮುಂದೆ ಹಿಡಿದರು.

'ಇಲ್ನೋಡಿ'. ಪೇಪರ್ ಇಂದ ತಲೆ ಎತ್ತಿದ ಪರಮೇಶ್ವರ್ ಒಂದು ಕ್ಷಣ ಗಾಬರಿಯಾದರು. ಆಮೇಲೆ ಪಕಪಕನೆ ನಗಲು ಶುರುಮಾಡಿದರು.

'ಎಲ್ಲಿ ಸಿಕ್ತು ನಿಂಗೆ ಇದು?'

'ನಾಗರತ್ನಮ್ಮನ ಮನೆ ಬಾಳೆಹಣ್ಣು. ಅವ್ರ ಮಗಳು ಎಳ್ಳು ಬೀರೋದಿಕ್ಕೆ ಬಂದಿದೆ.' ಅಂತ ಕಿಸಕ್ಕೆಂದು ನಕ್ಕರು.

ಗಂಡ, ಹೆಂಡತಿ ಇಬ್ಬರೂ ಜೋರಾಗಿ ಗಹಗಹಿಸಿ ನಗುತ್ತಿರಲು, ನನಗೆ ಅವಮಾನದಿಂದ ಭೂಮಿ ಬಾಯಿ ಬಿಟ್ಟು ನನ್ನನ್ನು ನುಂಗಬಾರದೇ ಅನ್ನಿಸಿತು. ಕೋಪ ಏರಿ, ಗಾಯತ್ರೀನೂ ಎಳಕೊಂಡು ಮನೆಗೆ ಹೋದವಳೇ, 'ನಾನು ಇನ್ನು ಎಳ್ಳು ಬೀರೋದಿಕ್ಕೆ ಹೋಗೋದಿಲ್ಲ' ಅಂತ ಘೋಷಿಸಿ, ಮುಖ ಉಬ್ಬಿಸಿಕೊಂಡು ಕೂತೆ. ಅಮ್ಮನಿಗೆ ಒಂದೇ ಕ್ಷಣದಲ್ಲಿ ನಡೆದಿರುವುದು ಏನು ಅಂತ ಅರ್ಥ ಆಯ್ತು. ನನ್ನನ್ನು ಪುಸಲಾಯಿಸಿ, ಆ ಹೊತ್ತಿಗೆ ನಮ್ಮ ಮನೆಗೆ ಬೇರೆಯವರು ಬೀರಿದ್ದ ಬಾಳೆಹಣ್ಣುಗಳನ್ನು ಅಡ್ಜಸ್ಟ್ ಮಾಡಿ ಮಿಕ್ಕ ಮನೆಗಳಿಗೆ ಎಳ್ಳು ಬೀರಿಸಿ, ಉಸ್ಸಪ್ಪ! ಅಂತ ಕೂತರು.

ಹೀಗೆ ಅಂದಿನ ಸಂಕ್ರಾಂತಿಯ ನೆನಪು, ಈಗ ನೆನೆಸಿಕೊಂಡರೂ ಹುಚ್ಚುಹುಚ್ಚಾಗಿ ನಗು ಬರುತ್ತಾ ಮುದವನ್ನೂ ತರುತ್ತೆ.

ಅಷ್ಟೂದ್ದದ ಬಾಳೆಹಣ್ಣಿನ ಗೊನೆ ತಂದು, ನಮ್ಮ ಮನೆಯಲ್ಲಿ ಕೋಲಾಹಲವಾದರೂ, ಬೀದಿ ತುಂಬಾ ಸಂಭ್ರಮ, ಸಡಗರಕ್ಕೆ ಕಾರಣವಾಗಿ ಅಲ್ಪ ಸ್ವಲ್ಪ ಅಲ್ಲೋಲಕಲ್ಲೋಲವನ್ನೆಬ್ಬಿಸಿ, ನನ್ನ ಮನದಲ್ಲಿ ಸಂಕ್ರಾಂತಿಯ ಬಣ್ಣಬಣ್ಣದ ಕುಸುರಿಕಾಳಿನ ಚಿತ್ತಾರದ ನೆನಪುಗಳನ್ನು ರಚಿಸಿದ ನನ್ನ ಅಣ್ಣನ ನೆನಪು ಮಾತ್ರ ಹೃದಯದಲ್ಲಿ ಸಕ್ಕರೆ ಅಚ್ಚಾಗಿದೆ!●

## ಕವಿತೆಗಳು

ನಾಗರಾಜ್ ಎಂ





1. ನೀನಾಗು ಕತ್ತಲಲ್ಲಿ
ಬೆಳಕು ಚೆಲ್ಲುವ ಹಣತೆ...!
ನಾನಾಗುವೆ ನಿನ್ನ ಬೆಳಕಿನ
ಸುತ್ತಾ, ಸುತ್ತುವ ಮಿಡತೆ...!
ಪ್ರತಿ ದಿನವೂ ಈ ದೀಪಾವಳಿ
ಬರಲಿ ಎನ್ನುವುದೇ, ನನ್ನ ಕೋರಿಕೆ...!
ಯಾಕೆಂದರೆ? ಆ ಬೆಳಕಲ್ಲಿ
ನನ್ನ ಮುಖ ನೀನು,
ನಿನ್ನ ಮುಖ ನಾನು
ನೋಡಬಹುದಲ್ಲ...
ಎಂಬ ಚಿಕ್ಕ ಬಯಕೆ...!

2.
ಜೀವನವೇ ಒಂದು ಬೊಂಬೆಯಾಟ
ಅರಿಯದೆ ಯಾಕೆ ನೀ
ಪಡುವೆ, ಮನದಿ ತೊಳಲಾಟ?
ನೋವು–ನಲಿವು ಎರಡೂ
ಜೀವನದ ಪರಿಪಾಠ.
ನೋವಲಿ ಕುಗ್ಗದೆ, ನಲಿವಲಿ ಹಿಗ್ಗದೇ ಎರಡನ್ನು ಸಮವಾಗಿ ತೆಗೆದುಕೊಂಡು
ನೀ ನಡೆದರೆ, ಇಷ್ಟ ಆಗುವುದು ಈ ಬೊಂಬೆಯಾಟ...!

# Culinary Heritage That We Carry



SANJANA

Everyone belongs to many different communities and/or groups defined by (among other things) shared geography, religion, ethnicity, income, cuisine, interest, race, ideology, or intellectual heritage. Choose one of the communities to which you belong, and describe that community and your place within it.

My grandfather's life is the exemplification of the "I live to eat, not eat to live" adage; he has an unabashed and impressive fondness for food. The smell of a cooking meal pervades the background of my earliest memories with him. Even now, I cannot picture him without his garrulous chatter and enthusiasm - uncharacteristic of his age - as he described his meals that week. My grandfather and I have very little in common. He grew up during the time of Gandhi, fighting for India's independence, and I grew up in a small Jersey town. But through the medium of food, we find insight into each other's lives, and built a foundation of love.

South Indian brahmin food - the food of my childhood - is more than just simple culinary enjoyment; it is memory, nostalgia, a mode of subtle communication. Every bowl of saaru I eat, regardless of where I eat it, is infused with my mother's comfort, every square of baadaam barfi a time portal to the carefree idleness of my childhood summers, every bite of maatvaadi palya inoculated loud and colorful festivals and weddings. And however little I may know or have in common with a distant relative, family friend, or grandfather, one bite of rotti would be enough to create implicit, mutual understanding, a nostalgic and inherent bond between us. Because that single bite of rotti conveys a vast and wordlessly elegant range of historical, cultural, and familial connections in a matter of five seconds. Shared culinary heritage has propelled me to create and cultivate connections among family, to connect me to my religious and cultural heritage on a more intimate level.



Brindavana Milana Thanda





# ಹಾವಾದವ್ರೋ ಎಲ್ಲ ಹಾವಾದವ್ರೋ!



ದಾಶರಥಿ ಭಟ್ಟ

ಈಗ್ಗೆ ಮೂವತ್ತು ವರ್ಷಗಳ ಹಿಂದೆ ಗೋವಾದ ಪೋಂಡ ಎಂಬ ಊರಿನಲ್ಲಿ ಕೆಲಸ ಮಾಡುತ್ತಿದ್ದೆ. ಊರಿನ ಕೇಂದ್ರದಿಂದ ಒಂದೂವರೆ ಮೈಲಿ ದೂರದಲ್ಲಿ ಶಾಂತಾದುರ್ಗಾ ಎಂಬ ಕಾಲೋನಿಯಲ್ಲಿ ನನ್ನ ಹೌಸ್ ಮೇಟ್ ಸಾತಯ್ಯನ ಜೊತೆ ನನ್ನ ವಾಸ. ಈ ಒಂದೂವರೆ ಮೈಲಿ ವಿಸ್ತಾರದಲ್ಲಿ ವಿರಳವಾದ ಮನೆಗಳಷ್ಟೇ ಇತ್ತು, ಅಥವಾ ಇಲ್ಲವೇ ಇಲ್ಲ ಎಂದೂ ಹೇಳಬಹುದು. ನಾನು ಬಾಡಿಗೆಗೆ ಇದ್ದ ಮನೆ ಗುಡ್ಡದಂತಹ ಪ್ರದೇಶದಲ್ಲಿತ್ತು. ಮನೆಯ ಮುಂದೆ ಪಣಜಿ–ಬೆಂಗಳೂರು ಹೈವೇ. ಅಲ್ಲಿಂದ ಸ್ವಲ್ಪ ದೂರ ಗುಡ್ಡದ ಮೇಲಕ್ಕೆ ನಡೆದುಕೊಂಡು ಬಂದರೆ, ಕರಾವಳಿ ಹಳ್ಳಿಯ ಮನೆಗಳಂತೆ ಮನೆಯ ಸುತ್ತಲೂ ಬೇಲಿ, ಮಧ್ಯೆ ಎರಡು ರೂಮು, ಅಡಿಗೆ ಮನೆ, ಬಚ್ಚಲುಗಳ ಸಣ್ಣ ಮನೆ. ಮನೆ ಸುತ್ತಲಿನ ಜಾಗದಲ್ಲಿ ನಾಲ್ಕು ತೆಂಗಿನ ಮರ, ಒಂದು ನುಗ್ಗೆ ಮರ, ಬ್ರೆಡ್ ಫ್ರೂಟ್ ಮರ. ಇವು ಬಿಟ್ಟರೆ ಹೆಸರೇ ಗೊತ್ತಿಲ್ಲದ ಅನೇಕ ಗಿಡಗಂಟಿಗಳು ಜಾಗ ಇದ್ದಲ್ಲೆಲ್ಲ ಬೆಳೆದಿದ್ದವು. ಮಳೆಗಾಲದಲ್ಲಿ ಯಥೇಚ್ಛವಾಗಿ ಮಳೆ ಸುರಿಯುತ್ತಿದ್ದುದರಿಂದ, ಗುಡ್ಡದ ಇಳಿಜಾರೂ ಕುರುಚಲು ಗಿಡ ಗಂಟಿಗಳಿಂದ ತುಂಬಿದ್ದವು. ನಾವು ಮನೆ ಸೇರಲು ಆ ಗಿಡಗಳ ಮಧ್ಯೆಯೇ ಕಾಲುದಾರಿ. ಬೇಲಿ ಮುಂದಿನ ಸ್ವಲ್ಪ ಸಮತಟ್ಟು ಜಾಗದಲ್ಲಿ ನಮ್ಮ ಪುಷ್ಪಕ ವಿಮಾನಗಳಾದ ಸ್ಕೂಟರ್ ಮತ್ತು ಮೋಟಾರ್ ಬೈಕ್ ನಿಲ್ಲಿಸಲು ಸ್ವಲ್ಪ ಜಾಗ.

ಮನೆ ಸುತ್ತಮುತ್ತಲಿನ ಜಾಗವನ್ನು ನಾವೆಂದೂ ಸ್ವಚ್ಛ ಮಾಡಿದ್ದೇ ಇಲ್ಲ. ಹೀಗಾಗಿ ಗಿಡ ಗಂಟಿಗಳಲ್ಲದೆ ಹುಳು ಹುಪ್ಪಟ್ಟೆಗಳೂ ಅಲ್ಲಿ ಯಥೇಚ್ಛವಾಗಿ ಸೇರಿಕೊಂಡಿರಬಹುದಾದ ಸಾಧ್ಯತೆಗಳು ಸಾಕಷ್ಟಿತ್ತು. ನನ್ನ ಹೌಸ್ ಮೇಟ್ ಸಾತಯ್ಯ ತಮಿಳುನಾಡಿನ ಕರಾವಳಿಯವನು. ಅವನು ಹೊರಗಿನ ಹಾಲ್ ಉಪಯೋಗಿಸಿದರೆ, ನಾನು ರೂಮಿನಲ್ಲಿ ಮಲಗುತ್ತಿದ್ದೆ.

ಭಾನುವಾರದ ಒಂದು ದಿನ. ಸಾತಯ್ಯ ರಜಕ್ಕಾಗಿ ತನ್ನ ಊರಿಗೆ ಅಂದು ಪ್ರಯಾಣ ಮಾಡುವವನಿದ್ದ. ಹೀಗಾಗಿ ಬೆಳಿಗ್ಗೆ ಬೇಗ ಎದ್ದು, ಊರಿಗೆ ತೆಗೆದುಕೊಂಡು ಹೋಗಲು, ಅವನು ಗೋಡಂಬಿಯೋ ಮತ್ತೇನೋ ತರಲು ಪೋಂಡ ಪೇಟೆಗೆ ಹೊರಟು ಹೋಗಿದ್ದ. ನಾನು ಸುಮಾರು ಒಂಬತ್ತೂವರೆಗೆ ಎದ್ದು, ನಿದ್ದೆಗಣ್ಣಿನಲ್ಲೇ ಪ್ರಾತರ್ವಿಧಿಗಳನ್ನು ತೀರಿಸಿ, ಅಡಿಗೆಮನೆ ಸಿಂಕಿನಲ್ಲಿದ್ದ ಒಂದು ಪಾತ್ರೆ ಗಲಬರಿಸಿ, ಸಾತಯ್ಯ ಹೋಗುವ ಮುಂಚೆ ತಂದು ಒಳಗೆ ಇಟ್ಟಿದ್ದ ಹಾಲಿನ ಪ್ಯಾಕೆಟ್ ಕತ್ತರಿಸಿ, ಪಾತ್ರೆಗೆ ಹಾಲನ್ನು ಸುರಿದು, ಖಾಲಿ ಪ್ಯಾಕೆಟನ್ನು ಯಾಂತ್ರಿಕವಾಗಿ ಅಡಿಗೆ ಮನೆ ಮೂಲೆಗೆ ಎಸೆದೆ. ಪಾತ್ರೆಗೆ ಹಾಲು ಬಗ್ಗಿಸಿದ ಮೇಲೆ, ಬೆಂಕಿ ಕಡ್ಡಿ ಗೀಚಿ ಉಮ್ರಾವ್ ಸ್ಟವ್ ಹಚ್ಚಿ ಕಡ್ಡಿಯನ್ನ ಮತ್ತೆ ಟೊಯ್ಯನೆ ಮೂಲೆಗೆಸೆದೆ. ನಮ್ಮ ಕೈಗಳಿಗೆ ಆ ಕೆಲಸಗಳನ್ನೆಲ್ಲ ಗುರಿ ತಪ್ಪದಂತೆ ಮಾಡುವುದು ಕರತಲಾಮಲಕವಾಗಿತ್ತು.

ಅಡಿಗೆ ಮನೆ ಒಂದು ತರಹ ನಮ್ಮ ಗಾರ್ಬೇಜ್ ಸೆಂಟರ್ ಆಗಿತ್ತು. ಅದರ ಗೋಡೆ ಗುಂಟ ಹಳೆ ದಿನಪತ್ರಿಕೆಗಳು, ಹಾಲಿನ ಖಾಲಿ ಚೀಲಗಳು, ಖಾಲಿ ಬಾಟಲ್ ಗಳು, ದಿನಸಿ ಮತ್ತು ತರಕಾರಿ ಕಟ್ಟಿಕೊಟ್ಟ ರದ್ದಿ ಪೇಪರ್ಗಳು ಹೀಗೆ ಏನೇನು ಸಾಧ್ಯವೋ ಎಲ್ಲ ಚೆಲ್ಲಾಡಿರುತ್ತಿದ್ದವು. ನಾವು ಮನೆ ಗುಡಿಸುತ್ತಿದ್ದುದೇ ತಿಂಗಳಿಗೊಂದು ಸಲ. ಇನ್ನು ಅಡಿಗೆ ಮನೆ ಕ್ಲೀನ್ ಮಾಡುವುದೆಲ್ಲಿಂದ? ಇರಲಿ, ಅದೊಂದು ಅವಿವಾಹಿತ ಘಟ್ಟದ ಪರಮ ಪ್ರಿಯ ಲಗ್ಷುರಿ.

ಬೆಂಕಿ ಕಡ್ಡಿ ಎಸೆದು ಒಂದೆರಡು ನಿಮಿಷಗಳಾಗಿವೆ. ಎಲ್ಲಾ ಬತ್ತಿಗಳೂ ಹೊತ್ತಿಕೊಳ್ಳುವುದಕ್ಕಾಗಿ ನಾನು ಸ್ಟವ್ ನ ಬತ್ತಿ ಹಿಡಿಯ ಜೊತೆ ಸರ್ಕಸ್ ಮಾಡುತ್ತಿದ್ದೇನೆ. ಉರಿ ನೀಲಿಯಾಗಿ, ಹೊಗೆ ರಹಿತವಾದರೆತಾನೇ ಹಾಲಿನ ಪಾತ್ರೆ ಸ್ಟವ್‌ನ ಮೇಲಿಡಬೇಕು. ಅಷ್ಟರಲ್ಲಿ ನನಗೆ ರದ್ದಿ ಬಿಸಾಕಿದ್ದ ಕಡೆಯಿಂದ ಪೇಪರ್ ನ ಪರ ಪರ ಸದ್ದು ಕೇಳಿಸಿತು. ಬೆಂಕಿ ಕಡ್ಡಿ ಆರಿಸೇ ಎಸೆದೆನಲ್ಲ. ಪೇಪರ್ಗೇನಾದರೂ ಬೆಂಕಿ ಹತ್ತಿತೆ ಎಂದು ನಾನು ಆ ಕಡೆ ತಿರುಗಿ ನೋಡಿದೆ.

ಆ ಕ್ಷಣ ನನಗೆ ಉಸಿರೇ ನಿಂತು ಹೋಗಿ, ಜೀವ ಬಾಯಿಗೆ ಬಂದಿತು. ಗೋಡೆಯ ಗುಂಟ ಮುದುರಿ ಬಿಸಾಕಿದ್ದ ರದ್ದಿಯ ಮೇಲೆ ಎರಡಡಿ ಉದ್ದದ ಹಾವೊಂದು ನಿಧಾನವಾಗಿ ಮನೆಯ ಒಳ ಕೋಣೆಗಳ ಕಡೆ ಹರಿಯುತ್ತಿದೆ. ಹಾವು ನೋಡಿದ ತಕ್ಷಣ ಮೈಯೆಲ್ಲಾ ಬೆವರಿ, ಗಡಗಡ ನಡುಗುತ್ತಾ, ಒಂದೇ ಓಟದಲ್ಲಿ ಮುಂದಿನ ಬಾಗಿಲು ತೆರೆದು ಮನೆಯಿಂದ ಹೊರಗೆ ಹಾರಿ, ಬೇಲಿಯ ಗೇಟನ್ನೂ ತೆಗೆದು, ಆಚೆ ಓಡಿ, ಮನೆಯ ಸರಹದ್ದಿನಿಂದ ಆಚೆ ನಿಂತೆ. ಸ್ವಲ್ಪ ಹೊತ್ತು ನನಗೇನು ಮಾಡಬೇಕೆಂದೇ ತೋಚಲಿಲ್ಲ. ಸ್ಕೂಟರ್ ತೆಗೆದುಕೊಂಡು ಫೇರಿ ಕೀಳೋಣವೆಂದರೆ, ಮನೆಚಡ್ಡಿ ಮತ್ತು ಬನಿಯನ್ ಮೇಲೆ ಹೊರಗೆ ನಿಂತಿದ್ದೇನೆ. ಸ್ಕೂಟರ್ ಕೀ ಒಳಗಿದೆ. ಮನೆಯೊಳಗೆ ಸರ್ಪ ರಾಜ ಬಂದು ಕೂತಿರುವಾಗ, ನಾನೊಬ್ಬನೇ ಬೇಲಿಯಿಂದ ಒಳಗೆ ಹೋಗಲು ಕೂಡಾ ಭಯ. ಯಾರನ್ನಾದರೂ ಕರೆಯೋಣವೆಂದರೆ, ನಮ್ಮ ಮನೆ ಬಲಕ್ಕೆ ಮನೆಗಳೇ ಇಲ್ಲ, ಎಡದ ಮನೆಯವರು, ಬೇಲಿಗುಂಟ ಎತ್ತರದ ಗಿಡಗಳನ್ನು ಬೆಳೆಸಿ ದುರ್ಗಮ ಗಡಿಯನ್ನೇ ನಿರ್ಮಿಸಿಬಿಟ್ಟಿದ್ದಾರೆ. ಮನೆಯ ಮುಂದಕ್ಕೋ ಮೊದಲೇ ಹೇಳಿದಂತೆ ಬೆಂಗಳೂರು–ಪಣಜಿ ಹೈವೇ. ನನ್ನ ಸ್ಥಿತಿ ಕೇಳುವವರೂ ಇಲ್ಲ. ನನ್ನ ನಡುಗುವ ಕಾಲುಗಳನ್ನು ನೋಡುವವರೂ ಇಲ್ಲ.

ಮನೆಯ ಒಳಗೆ ಹೋಗದೆ, ಸಾತಯ್ಯನಿಗೆ ಕಾಯುತ್ತಾ ಅಲ್ಲೇ ನಿಂತಿದ್ದೆ. ಅವನ ಯೆಜ್ಡಿ ಕಂಡದ್ದೇ ಜೀವ ಬಂದ ಹಾಗಾಯ್ತು. ಅವನು ಬೈಕ್ ನಿಲ್ಲಿಸುತ್ತಿದ್ದಂತೆಯೇ ಅಡಿಗೆ ಮನೆ ಹಾವಿನ ಕಥೆ ಹೇಳಿದೆ. ಅದು ಎಲ್ಲಿ ಹೋಯ್ತೆಂದು ಕೇಳಿದ. "ನನಗೇನು ಗೊತ್ತು, ಅದು ಮನೆಯೊಳಗೆ ಕಂಡ ತಕ್ಷಣ, ಇಡೀ ಮನೆ ಅದಕ್ಕೆ ಬಿಟ್ಟುಕೊಟ್ಟು ಹೊರಗೆ ಓಡಿ ಬಂದೆ" ಎಂದೆ. "ಮನೆಯೊಳಗೆ ಬಂದ ಹಾವನ್ನು ಹೊಡೆಯಬೇಕು, ಅಥವಾ ಹೊರಗೆ ಓಡಿಸಬೇಕು. ಇಲ್ಲಾ ಅದು ಎಲ್ಲಿ ಹೋಯ್ತೆಂದಾದರೂ ನೋಡಬೇಕು. ಎಲ್ಲಾ ಬಿಟ್ಟು ಮನೆಯಿಂದಲೇ ಓಡಿ ಹೊರಗೆ ಬಂದ ನಿನಗೆ ತಲೆ ಇದೆಯಾ?" ಅಂತ ಬಾಯಿಗೆ ಬಂದ ಹಾಗೆ ಬಯ್ದ. "ನಾನೊಬ್ಬನೇ ಇದ್ದಾಗ ಅವೆಲ್ಲಾ ಮಾಡೋಕಾಗುತ್ತಾ? ಈಗ ನೀನೆ ಅದನ್ನು ಹುಡುಕಿ ಏನಾದರೂ ಮಾಡು" ಎಂದು, ಹೊರಗೇ ನಿಂತಿದ್ದೆ. ಹಾಗೆ ನೋಡಿದರೆ ಇಬ್ಬರೂ ಧೀರರೇ. "ಪೆಹಲೆ ಆಪ್, ಪೆಹಲೆ ಆಪ್" ಅಂತ ನಿಧಾನವಾಗಿ ಮನೆ ಹತ್ತಿರ ಹೋಗಿ, ಬಾಗಿಲು ತೆರೆದೇ ಇಟ್ಟಿದ್ದರಿಂದ, ಮೆಟ್ಟಿಲ ಬಳಿ ನಿಂತು ಹಾಲ್ ನ ಇಂಚಿಂಚನ್ನೂ ದುರ್ಬೀನು ಹಾಕಿದವರಂತೆ ನೋಡಿ, ಅಲ್ಲೆಲ್ಲೂ ಹಾವಿಲ್ಲವೆಂದು ಖಾತ್ರಿಪಡಿಸಿಕೊಂಡೆವು. ಮೊದಲು ನಮ್ಮ ಶೂಗಳನ್ನು ಹಾಕಿಕೊಂಡು, ಅಲ್ಲೇ ಇಟ್ಟಿದ್ದ ಕ್ರಿಕೆಟ್ ಸ್ಟಂಪ್ ಗಳಲ್ಲಿ ಒಂದೊಂದನ್ನು ಕೈಲಿ ಹಿಡಿದು, ಮನೆಯ ಪೂರ್ಣ ಸರ್ವೇ ಮಾಡಿ, ಅಡಿಗೆ ಮನೆಯ ರದ್ದಿ, ಕಸ ಕಡ್ಡಿಗಳನ್ನು ತಡಕಿ, ಅದಕ್ಕೇ ಹತ್ತಿಪ್ಪತ್ತು ಏಟುಗಳನ್ನು ಬಡಿದು, ಅವುಗಳಲ್ಲೇನೂ ಅದು ಇನ್ನೂ ಬಿಡಾರ ಹೂಡಿಲ್ಲವೆಂದು ಖಾತ್ರಿ ಪಡಿಸಿಕೊಂಡೆವು. ಎಷ್ಟೋ ದಿನದಿಂದ ಅಲ್ಲಿ ಬಿದ್ದಿದ್ದ ಕಸ ಕಡ್ಡಿ, ರದ್ದಿ ಮತ್ತು ಬಾಟಲ್ಗಳನ್ನು ಹೊರಗೆಸೆದು ಸ್ವಚ್ಛ ಮಾಡಿದೆವು. ಬಟ್ಟೆ ಬರೆ, ಹಾಸಿಗೆ, ಪಾತ್ರೆ ಪಗಡಿ ಎಲ್ಲಾ ತಲಾಶ್ ಮಾಡಿ, ಎಲ್ಲೂ ಏನೂ ಇಲ್ಲ ಆರಾಮಾಗಿರು ಎಂದ. ಇವತ್ತು ಸಂಜೆ ಬೆಂಗಳೂರು ಬಸ್ಸಿನಲ್ಲಿ ರಜಾಕ್ಕೆ ಹೋಗುತ್ತಿರುವ ಇವನು, ನನ್ನನ್ನು ಹಾವಿನ ಬಾಯಿಗೆ ತಳ್ಳಿ, ದೊಡ್ಡದಾಗಿ ಧೈರ್ಯದ ಮಾತಾಡುತ್ತಾ ಇದ್ದಾನಲ್ಲಾ ಅಂತ ಸಿಟ್ಟು ಉಕ್ಕಿ ಹರಿಯಿತು.

ಆಗೋ ಇಗೋ ಎನ್ನುವಷ್ಟರಲ್ಲಿ ಮಧ್ಯಾಹ್ನ ಕಳೆಯಿತು. ಸಾತಯ್ಯ ಹೊರಡಲು ರೆಡಿಯಾದ. ಅವನು ಹೊರಡುವ ಮುಂಚೆ, ನನ್ನ ಮಂಚ ಇದ್ದ ರೂಮಿನ ಇಂಚಿಂಚನ್ನೂ ಪರೀಕ್ಷಿಸಿ, ಮಂಚದ ಕೆಳಗೆ ತಲಾಶ್ ಮಾಡಿ, ಕಿಟಿಕಿಗಳನ್ನೆಲ್ಲಾ ಮುಚ್ಚಿ, ರೂಮಿನ ಬಾಗಿಲು ಬಂದ್ ಮಾಡಿ, ಬಾಗಿಲಿಗೆ ತೂತಿಲ್ಲವೆಂದು ಖಾತ್ರಿ ಪಡಿಸಿಕೊಂಡೆ. ಸಂಜೆ ಆರು ಗಂಟೆಗೆ ಸಾತಯ್ಯನನ್ನು ನನ್ನ ಸ್ಕೂಟರ್ನಲ್ಲಿ ಕರೆದುಕೊಂಡು ಹೋಗಿ ಬಸ್ಸು ಹತ್ತಿಸಿದೆ.

ಈಗ ನನ್ನ ಪ್ರಶ್ನೆ "ಮನೆಗೆ–ಟು ಗೋ, ಆರ್ ನಾಟ್ ಟು ಗೋ'. ಸ್ವಲ್ಪ ಹೊತ್ತು ಕ್ಲಬ್ಬಿನಲ್ಲಿ ಕೂತಿದ್ದು ಆಮೇಲೆ ಹೋಗೋಣವೆಂದು ಕ್ಲಬ್ಬಿಗೆ ಹೋದೆ. ಎಲ್ಲಿದ್ದರೂ ನನ್ನ ಕಣ್ಣಿನ ತುಂಬಾ ಆ ಹಾವೇ! ಅಲ್ಲಿದ್ದವರಿಗೆಲ್ಲಾ ಹಾವಿನ ವೃತ್ತಾಂತದ ನನ್ನ ತುತ್ತೂರಿ ಊದಿಯಾದರೂ ಅದರ ಭಯ ಹೋಗುವುದೇನೋ ಅಂತ ನೋಡಿದೆ. ಭಯ ಹೋಗುವುದಿರಲಿ, ಕಥೆ ಕೇಳಿದ ಒಬ್ಬೊಬ್ಬರೂ ಒಂದೊಂದು ಸಲಹೆ ಕೊಡಲಾರಂಭಿಸಿದರು. ಹಾವು ಷೂನಲ್ಲಿ ಸೇರಿ ಮಲಗಿರುತ್ತದೆ. ನೋಡಿಕೊಂಡು ಷೂ ಹಾಕಿಕೋ ಅಂತ ಒಬ್ಬ ಹೇಳಿದರೆ, ಪ್ಯಾಂಟು ಜೇಬು ಚೆಕ್ ಮಾಡಿ ಪ್ಯಾಂಟೇರಿಸು ಅಂತ ಇನ್ನೊಬ್ಬ. ಪಾತ್ರೆ ಪಗಡಿಗಳನ್ನು ಯಾವಾಗಲೂ ಬೋರಲಿಟ್ಟಿರು ಅಂತ ಮತ್ತೊಬ್ಬ. ಇದೆಲ್ಲಾ ಕೇಳಿ ಆ ರಾತ್ರಿ ಮನೆಗೆ ಹೋಗುವ ಆಲೋಚನೆಯನ್ನೇ ಬಿಟ್ಟು ಕ್ಲಬ್ಬಿನಲ್ಲೇ ಕೂತಿದ್ದ ಗೆಳೆಯ ಸುನಿಲ್ ಮನೆಗೆ ಹೋಗಿ ಮಲಗಿದೆ. ಬೆಳಿಗ್ಗೆ ಮನೆಗೆ ಬಂದು ಕಮಾಂಡೋನಂತೆ ಮೈಯೆಲ್ಲಾ ಕಣ್ಣಾಗಿ ಒಳಗೆ ಹೋಗಿ, ಕ್ಷಣಾರ್ಧದಲ್ಲಿ ರೆಡಿಯಾಗಿ, ಕೆಲಸಕ್ಕೆ ಫೇರಿ ಕಿತ್ತೆ.

ಎಷ್ಟು ದಿನ ಎಲ್ಲೆಲ್ಲೋ ಕಾಲ ಹಾಕಲು ಸಾಧ್ಯ. ಸಂಜೆ ಮನೆಗೆ ಬರುವುದು. ಬಾಗಿಲು ತೆಗೆದು, ಸರಕ್ಕನೆ ರೂಮಿಗೆ ಹೋಗಿ, ರೂಮೆಲ್ಲಾ ತಲಾಶ್ ಮಾಡಿ, ರೂಮ್ ಬಾಗಿಲು ಹಾಕಿಕೊಳ್ಳುವುದು. ಹೊರಗೆ ಬಂದರೆ ಮೈನ್ ಗಳ ಮೇಲೆ ನಡೆದಂತೆ ಹುಷಾರಾಗಿ ಓಡಾಡುವುದು. ಮತ್ತೆ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡರೆ, ಮನದಲ್ಲಿ ಮಾತ್ರ ಕ್ಷಣ ಬಿಡದೆ ಹಾವಿನ ಧ್ಯಾನ. ರೂಮನ್ನು ಎಚ್ಚರವಿದ್ದ ಪ್ರತಿ ಘಳಿಗೆಯೂ ಕಣ್ಣಿಂದಲೇ ಕ್ವಾರಂಟೈನ್ ಮಾಡುತ್ತಾ, ನನ್ನ ಇಡೀ ಅಸ್ಥಿತ್ವವನ್ನು ಆ ರೂಮಿಗೆ ಸೀಮಿತ ಗೊಳಿಸುತ್ತಾ ಇಡೀ ಮನೆಯನ್ನು ಹಾವಿಗೆ ಬಿಟ್ಟುಕೊಟ್ಟೆ. ಆ ಹಾವೆಂಬ ಭೂತ ಮನೆಯಲ್ಲೆಲ್ಲೋ ಅದೃಶ್ಯವಾಗಿದೆ. ಯಾವ ಕ್ಷಣದಲ್ಲಾದರೂ ನನ್ನ ಮುಂದೆ ಧುತ್ತೆಂದು ಬಂದು ನನ್ನನ್ನು ಬಲಿ ತೆಗೆದುಕೊಂಡು ಬಿಡುತ್ತದೆ ಎಂದು ಪ್ರತಿ ಕ್ಷಣವೂ ಯೋಚಿಸುತ್ತಿದ್ದೆ. ಯಾರೇ ಸಿಕ್ಕಿದರೂ ನನ್ನ 'ಹಾವಿನ ತುತ್ತೂರಿ'ಯೇ ಶುರುವಾಗುತ್ತಿತ್ತು. ನನ್ನ ಹೆದರಿದ ಮನಸ್ಸಿನ ಮೇಲೆ ಕೆಲವರು ಕಪ್ಪೆ ಎಸೆದರೆ, ಇನ್ನು ಕೆಲವರು ಹಾವಿನ ಗುಣ ಸ್ವಭಾವ ಮತ್ತು ಅದನ್ನೆದುರಿಸುವ ಬಗ್ಗೆ ಪ್ರಖಂಡ ಸಲಹೆಗಳನ್ನು ಕೊಡಲಾರಂಭಿಸಿದರು.

ಒಂದೆರಡು ದಿನಗಳಲ್ಲಿ ಒಂದಿಬ್ಬರು ಸ್ನೇಹಿತರ ಬೆಂಗಾವಲಿನಲ್ಲಿ ನನ್ನ ಸಕಲ ವಸ್ತುಗಳನ್ನೂ ವಿಶುಯಲ್ ಕ್ವಾರಂಟೈನ್ ಮಾಡಿ ರೂಮು ಸೇರಿಸಿದೆ. ಸಾತಯ್ಯ ಬರುವವರೆಗೂ ಅಡಿಗೆ ಮನೆಗೆ ಹೋಗುವುದು ಬೇಡ ಎಂದು ಅದಕ್ಕೆ ರಜೆ ಕೊಟ್ಟು ಆ ಕಡೆ ತಲೆ ಹಾಕುವುದೇ ಬಿಟ್ಟೆ. ಬಚ್ಚಲು, ಟಾಯ್ಲೆಟ್ ಗಳ ಮೂಲೆ ಮೂಲೆಗೂ ನೀರೆರಚಿ ಒಂದು ಸಣ್ಣ ಹುಳುವೂ ಇಲ್ಲವೆಂದು ಖಾತ್ರಿ ಮಾಡಿಕೊಂಡು ಬಾಗಿಲುಗಳನ್ನು ಬಂದು ಮಾಡಿಟ್ಟೆ.

ಬೆಳಿಗ್ಗೆ ಎದ್ದು ಮೆಲ್ಲಗೆ ರೂಮಿನ ಬಾಗಿಲು ತೆಗೆದು, ರೂಮಿನಲ್ಲೇ ನಿಂತಿದ್ದು ಐದು ನಿಮಿಷ ಕಾಲೋ, ಕಟ್ಟಿಗೆಯೋ ನೆಲಕ್ಕೆ ಬಡಿದು ಶಬ್ದ ಮಾಡುವುದು; ರೂಮಿನ ಹೊರಗೆ ಬಂದ ತಕ್ಷಣ ಅದರ ಬಾಗಿಲು ಹಾಕುವುದು; ಸರಕ್ಕನೆ ಓಡಿ ಬಚ್ಚಲು, ಟಾಯ್ಲೆಟ್ ಗಳ ಬಾಗಿಲು ತೆರೆದು, ಕೂಲಂಕುಷ ಪರೀಕ್ಷಿಸಿ ಬಾಗಿಲು ತೆರೆದಿಟ್ಟುಕೊಂಡೇ ಸ್ನಾನ ಗೀನ ಮಾಡಿ ಆದಷ್ಟು ಬೇಗ ಓಡಿ ರೂಮು ಸೇರುವುದು; ಡ್ರೆಸ್ ಮಾಡಿಕೊಂಡು ರೂಮಿನ ಬಾಗಿಲು ಚೆನ್ನಾಗಿ ಹಾಕಿಕೊಂಡು ಕೆಲಸಕ್ಕೆ ಹೊರಡುವುದು. ಕೆಲಸ ಮುಗಿದ ಮೇಲೆ, ಸಂಜೆ ಕ್ಲಬ್ಬಿನಲ್ಲೋ, ಗೆಳೆಯರ ಮನೆಯಲ್ಲೋ ಕಾಲ ಕಳೆದು, ಯಾವುದೋ ಹೋಟೆಲ್ಲಿನಲ್ಲಿ ರಾತ್ರಿ ಊಟ ಮುಗಿಸಿ ಲೇಟಾಗಿ ಮನೆಗೆ ಬಂದು, ಬಾಗಿಲು ತೆರೆದು, ಎಲ್ಲಾ ಕಡೆ ಒಮ್ಮೆ ಸರ್ವೇ ಮಾಡಿ ರೂಮಿಗೆ ಓಡಿ, ಬಾಗಿಲು ಬಂದ್ ಮಾಡಿಕೊಳ್ಳುವುದು. ಮತ್ತೆ ಬೆಳಿಗ್ಗೆಯವರೆಗೂ ಆ ರೂಮಿನಲ್ಲೇ ನನಗೆ ಕಾಲಾಪಾನಿ ಗೃಹ ಬಂಧನ. ದಿನಗಳೆದಂತೆ ಆ ಹಾವೇನಾದರೂ ನಾನು ನೋಡಿದ ದಿನವೇ ಮನೆಯಿಂದ ಹೊರಟೇ ಹೋಗಿದೆಯೇನೋ ಎನ್ನಿಸಲೂ ತೊಡಗಿತು. ಅವತ್ತು ಬೇರೆ ಹಿಂದಿನ ಬಾಗಿಲು ಮತ್ತು ಮುಂಬಾಗಿಲು ಬಹಳ ಹೊತ್ತೇ ತೆರೆದಿಟ್ಟಿತ್ತಲ್ಲ. ಯಾರಿಗೆ ಗೊತ್ತು? ನನ್ನ ಹುಶಾರಿಯಲ್ಲಂತೂ ನಾನಿರುವುದು ಒಳ್ಳೆಯದೆಂದು, ನನ್ನ ರೂಮೆಂಬ ದುರ್ಗಮ ಕೋಟೆಯೊಳಗೆ ಕ್ರಿಕೆಟ್ ಸ್ಟಂಪ್ ಎಂಬ ವಜ್ರಾಯುಧದ ರಕ್ಷಣೆಯಲ್ಲಿ ದಿನ ಕಳೆಯುತ್ತಿದ್ದೆ.

ಆ ದಿನಗಳ ಒಂದು ರಾತ್ರಿ ಹೀಗೇ ಬಂದು ಮಲಗಿದ್ದೆ. ರಾತ್ರಿ ಒಂದು ಹೊತ್ತಿನಲ್ಲಿ ಎಚ್ಚರವಾಗಿ, ಬಚ್ಚಲಿಗೆ ಅವಸರವಾಯಿತು. ಈ ಅಪರಾತ್ರಿ ಹೇಗಪ್ಪಾ ರೂಮಿನ ಬಾಗಿಲು ತೆಗೆದು ಆಚೆ ಹೋಗಲಿ ಎಂದು ಚಿಂತಿತನಾದೆ. ರೂಮಿನ ಬಾಗಿಲು ತೆಗೆದ ತಕ್ಷಣ ನನ್ನ ಉರಗಸಖ ಪರೀಕ್ಷಿತ ರಾಜನಿಗೆ ವಾಸುಕಿ ಕಾದಿದ್ದಂತೆ ಕಾದಿದ್ದರೆ ಎಲ್ಲಿ ಓಡಲಿ ಅನ್ನುವ ಭಯವಾಯಿತು. ರೂಮಿನ ಲೈಟ್ ಹಾಕಿ ಬಹಳ ಹೊತ್ತು ಮಂಚದ ಮೇಲೆ ಕೂತಿದ್ದೆ. ಇನ್ನು ತಡೆಯಲು ಆಗುವುದೇ ಇಲ್ಲ ಎನಿಸಿದಾಗ, ಸತ್ತರೆ ಸತ್ತೆ ಎಂದು ನಿರ್ಧರಿಸಿ, ಕೋಟೆಯ ದಿಡ್ಡಿ ಬಾಗಿಲು ಮೆತ್ತಗೆ ತೆಗೆದು, ಹಾಲ್ ವೇ ಲೈಟ್ ಹಾಕಿ ಬಚ್ಚಲ ಕಡೆ ಕಾಲಿಟ್ಟಿದ್ದೇನೆ. ನಾನು ಯಾವುದಕ್ಕಾಗಿ ಭೀತನಾ ಗಿದ್ದೆನೋ ಆ ನಯನ ಭೇದಕ ಹಾವು ಟಾಯ್ಲೆಟ್ ಕಡೆಯಿಂದ ಗೋಡೆಗುಂಟ ನಿಧಾನವಾಗಿ ನನ್ನ ಕಡೆ ಹರಿದು ಬರುತ್ತಿದೆ. ಬಾಗಿಲು ತೆಗೆದ ಶಬ್ದಕ್ಕೋ ಅಥವಾ ತಕ್ಷಣ ಲೈಟ್ ಹಾಕಿದ್ದಕ್ಕೋ ಗಲಿಬಿಲಿಗೊಂಡ ಅದು ಕೆಲವು ಕ್ಷಣ ಸ್ತಬ್ಧವಾದರೆ, ನಾನು ಭಯದಿಂದ ಕಲ್ಲಿನಂತೆ ನಿಂತುಬಿಟ್ಟಿದ್ದೇನೆ.

ನಾನು ಬಾಡಿಗೆ ಕೊಡದೆ ಇಲ್ಲಿರುವುದನ್ನು ಇವನು ನೋಡಿ ಬಿಟ್ಟನಲ್ಲಾ, ಎಂದುಕೊಂಡಿರಬೇಕು ಆ ಹಾವು. ಮೆಲ್ಲನೆ ಹಿಂದಕ್ಕೆ ತಿರುಗಲಾರಂಭಿಸಿತು. ಗರ ಬಡಿದಂತೆ ನಿಂತ ನಾನೂ ಸಾವರಿಸಿಕೊಂಡು, ಈ ಕ್ಷಣ ನಾನು ಕ್ರಿಯಾಶೀಲನಾಗದಿದ್ದರೆ, ಈ ಹಾವಿನ ನೈಟ್ ಮೇರ್ ನನಗೆ ಚಿರಂತನವಾಗಿಬಿಡುತ್ತದೆ ಎಂದು ಯೋಚಿಸಿದೆ. ನನ್ನ ದುಃಸ್ವಪ್ನಕ್ಕೆ ಈಗಲೇ ಕೊನೆ ಹಾಡಬೇಕೆಂದು, ರೂಮಿಗೆ ಓಡಿ, ಮೂಲೆಯಲ್ಲಿಟ್ಟ ಒಂದು ಸ್ಟಂಪ್ ತೆಗೆದುಕೊಂಡು ಬಂದು, ಸಿಕ್ಕ ಸಿಕ್ಕಲ್ಲಿ ಆ ಹಾವಿಗೆ ಬಡಿಯತೊಡಗಿದೆ. ಅದಕ್ಕೆಷ್ಟು ಏಟು ಬಿತ್ತೋ ಯಾರಿಗೆ ಗೊತ್ತು. ನನಗೋ ಮೈಮೇಲೆ ದೆವ್ವ ಬಂದಂತಾಗಿತ್ತು.

ಆ ಹಾವಿಗೆ ಎಷ್ಟು ಏಟುಗಳು ಬಿದ್ದಿದ್ದವೆಂದರೆ, ಮೊದ ಮೊದಲು ನುಲಿದು ರಕ್ತಸಿಕ್ತವಾಗಿ ಒದ್ದಾಡುತ್ತಿದ್ದ ಹಾವು, ತಣ್ಣಗಾಗಿ ಮಲಗಿತ್ತು. ನನ್ನ ಕಾಲುಗಳೂ ತಣ್ಣಗಾಗಿ ಬಿಟ್ಟಿತ್ತು. ನಾನು ಭಯದಿಂದ ನಡುಗುತ್ತಿದ್ದೆ. ಆ ಜಂತು ನಿರ್ಜೀವವಾಯಿತೆಂದು ಖಾತ್ರಿಪಡಿಸಿಕೊಳ್ಳಲು ಅದನ್ನೇ ಸ್ವಲ್ಪ ಹೊತ್ತು ನೋಡುತ್ತಾ ನಿಂತೆ. ನಡುಗುವ ಕೈಗಳಲ್ಲಿದ್ದ ಸ್ಟಂಪ್ ನ ತುದಿಯಿಂದ ಆ ಜಂತುವನ್ನು ಅಲ್ಲಾಡಿಸಿ ನೋಡಿದೆ. ಕ್ಷೀಣವಾಗಿಯೂ ಅದರಲ್ಲೇನೂ ಉಸಿರಿರಲಿಲ್ಲ. ಅದರ ತಲೆ ಸಂಪೂರ್ಣ ನಜ್ಜುಗುಜ್ಜಾಗಿತ್ತು. ಇಷ್ಟೆಲ್ಲಾ ಮುಗಿದಾಗ ಜ್ವರ ಬಂದು ಬಿಟ್ಟ ಹಾಗೆ ನಾನು ಬೆವರುತ್ತಿದ್ದೆ. ಅದನ್ನು ಸ್ಟಂಪ್ ನ ತುದಿಯಿಂದ ಎತ್ತಿ, ಮನೆ ಬಾಗಿಲು ತೆರೆದು ಬೇಲಿಯಾಚೆ ಎಸೆದೆ. ಒಳಗೆ ಬಂದು, ಸ್ಟಂಪನ್ನು ಅಡಿಗೆ ಮನೆಯಲ್ಲಿ ಬಿಸಾಕಿ, ಮುಂದಿನ ಬಾಗಿಲನ್ನು ತೆರೆದಿಟ್ಟು, ವಾರದಿಂದ ಬಹಿಷ್ಕರಿಸಿದ್ದ ಹಾಲಿನಲ್ಲಿನ ಬೆತ್ತದ ಕುರ್ಚಿ ಮೇಲೆ ಸ್ವಲ್ಪ ಹೊತ್ತು ಕುಳಿತುಕೊಂಡೆ. ಒಂದು ವಾರದಿಂದ ಮನಸ್ಸಿನಲ್ಲಿ ಮಡುಗಟ್ಟಿದ್ದ ಭಯ, ಆತಂಕಗಳು ಮಾಯವಾಗಿ, ತಲೆಯ ಮೇಲಿನ ದೊಡ್ಡ ಭಾರವೊಂದು ಇಳಿದ ಹಾಗಾಯಿತು. ಅಡಿಗೆಮನೆಗೆ ಹೋಗಿ ನೀರು ಕುಡಿದು ಬಂದು, ರೂಮಿನ ಬಾಗಿಲನ್ನು ಪೂರ್ತಿ ತೆಗೆದಿಟ್ಟು ನಿರಾಳವಾಗಿ ನಿದ್ದೆ ಮಾಡಿದೆ.●



## ಕವಿತೆಗಳು

ತಲಕಾಡು ಶ್ರೀನಿಧಿ





1.

ಪಾರ್ಲರ್ನಿಂದ
ಹೊರಬಂದ ಸುಂದರಿಯ ಕಂಡು
ಸಣ್ಣಗೆ ಸಿಳ್ಳು
ಹೊಡೆದ
'ಇದು ನಾನೇ...
ತೆಪ್ಪಗೆ ನಡೀರಿ' ಎಂದವಳ
ಹಿಂದೆ ಕುರಿಯಂತೆ
ನಡೆದ!

2.

ಇಷ್ಟು ದಿನ ಕಾಡುತಿತ್ತು
ಎದೆಯಲ್ಲೊಂದು
ಮಾಯದ
ಗಾಯ...
ನಿನ್ನ ಕೈ ಸೋಕಲು
ಗೆಳತಿ... ಈಗ
ಗಾಯವೇ
ಮಾಯ!

3.

ಮನೆ ಮಡದಿ
ಬಿಟ್ಟೋಡಲು
ಬಹಳ ಜನ
ಸಿದ್ಧರಿರುತ್ತಾರೆ...
ಅವರಲ್ಲಿ
ಎಷ್ಟು ಜನ
ಸಿದ್ಧಾರ್ಥನಂತೆ
ಬುದ್ಧರಾಗುತ್ತಾರೆ?

4.

ಅಪರಿಚಿತ
ಅಮೆರಿಕನ್ನರನು
ಪ್ರೀತಿಯ ಸೋದರ
ಸೋದರಿಯೆಂದರು...
ವಿಶ್ವದೆಲ್ಲೆಡೆ
ನಮ್ಮ ಸಂಸ್ಕೃತಿಯ
ಎತ್ತಿ ಹಿಡಿದ ಸ್ವಾಮಿ
ವಿವೇಕಾನಂದರು!







# ಬೆಂಗಳೂರು ಸಂತೆಯಲ್ಲೊಂದು ಸಂಜೆ

ರುದ್ರಕುಮಾರ್



ಸಾಮಾನ್ಯವಾಗಿ ರಾತ್ರಿ ಸುಮಾರು 8 ಗಂಟೆಗೆ ಆಫೀಸ್ ಬಿಡುವ ನಾನು ಅಂದು ಸಂಜೆ 5ಕ್ಕೆ ಕಂಪನಿ ಶಟಲ್ ನಲ್ಲಿ ಮನೆಗೆ ಹೊರಟಿದ್ದೆ. ಪಾರೂ ಮತ್ತು ದೀಪೂವಿನ ಜೊತೆ ವಾರದ ದಿನಗಳಲ್ಲಿ ಒಟ್ಟಾಗಿ ಕುಳಿತು ಡಿನ್ನರ್ ಮಾಡುವುದೇ ಅಪರೂಪ. ಇವತ್ತು ಅವರಿಗೆ ಸರ್ಪ್ರೈಸ್ ಕೊಟ್ಟು ಮನೆಯಿಂದಲೇ ಸಂಜೆಯ ಕಾನ್ಫರೆನ್ಸ್ ಕಾಲ್ ತಗೊಂಡರಾಯ್ತು ಅಂತ ಮನಸ್ಸಿನ ಜೊತೆ ರಾಜಿ ಮಾಡಿಕೊಂಡಿದ್ದೆ. ಬೆಂಗಳೂರಿನ ಸಂಜೆಯ ಟ್ರಾಫಿಕ್ಕು ಹಗುರದಿಂದ ಭಾರಿ ಮಟ್ಟಕ್ಕೆ ತಿರುಗುತ್ತಿತ್ತು. ವ್ಯಾನ್ ಡ್ರೈವರ್ ಒಂದು ಕೈಯಲ್ಲಿ ಮೊಬೈಲ್ ಅನ್ನು ಕಿವಿಗೆ ಹಚ್ಚಿಕೊಂಡು, ಇನ್ನೊಂದರಲ್ಲಿ ಸ್ಟೀರಿಂಗ್ ಮತ್ತು ಹಾರ್ನ್ ಗಳನ್ನು ಸಂಬಾಳಿಸುತ್ತ, ಒಮ್ಮೊಮ್ಮೆ ಕೈಗಳನ್ನು ಬದಲಾಯಿಸಿ ಗೇರ್ ಜೊತೆ ಆಟವಾಡುತ್ತ ವಾಹನ ನಡೆಸುತ್ತಿದ್ದ. ಇವುಗಳ ನಡುವೆ ಸಡನ್ ಆಗಿ ಕಟ್ ಮಾಡುವ ಆಟೋ ಮತ್ತು ಬೈಕ್ ಗಳಿಗೆ ಸುಭಾಷಿತ ಹೇಳುತ್ತಿದ್ದ. ವಾಹನಗಳ ಅಡಿಯಿಂದ ಬರುವ ಹೊಗೆಯ ಘಾಟು, ಚಕ್ರಗಳು ಮೇಲೆಬ್ಬಿಸುತ್ತಿದ್ದ ಧೂಳಿನ ಧೂಪ, ಸುತ್ತ ಆವರಿಸಿದ ಎಲ್ಲ ತೆರನಾದ ಹಾರ್ನ್ ವಾದ್ಯಗಳಿಂದ ಒಳಗೊಂಡು ಬೆಂಗಳೂರು ಪಡುವಣದಲ್ಲಿ ಮೆಲ್ಲನೆ ಮರೆಯಾಗುತ್ತಿದ್ದ ಸೂರ್ಯದೇವನಿಗೆ ನಮಿಸುತ್ತಿತ್ತು.

ಅದೇನು ಜನ, ಅದೆಷ್ಟು ವೆಹಿಕಲ್ಸು! ಅದ್ಹೇಗೆ ಹೀಗಾಯ್ತೋ ನಮ್ಮ ಬೆಂಗ್ಳೂರು? ಎಲ್ಲೋ ಒಂದು ಕಡೆ ಒಂದಷ್ಟು ಜನ ಸೇರಿ ವ್ಯವಹಾರ ವಹಿವಾಟು ಮಾಡೋದಿಕ್ಕೆ ಸಂತೆ ಅಂತ ಅಂತಿದ್ರು. ಈಗ ಬೆಂಗ್ಳೂರ್ ನೋಡಿದರೆ, ಒಂದು ಮೂಲೆಯಿಂದ ಇನ್ನೊಂದು ಮೂಲೆವರೆಗೂ ಜನಜಂಗುಳಿ, ಸಾಲು ಸಾಲು ಅಂಗಡಿಗಳು. ಇದನ್ನ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ" ಅನ್ನುವ ಬದಲು "ಬೃಹತ್ ಬೆಂಗಳೂರು ಮಹಾನಗರ ಸಂತೆ" ಅಂತ ಕರೆಯಬಹುದೇನೋ! ಸಹ ಪ್ರಯಾಣಿಕರತ್ತ ಗಮನ ಹೋಯ್ತು. ಒಂದಿಬ್ಬರು ತಮ್ಮ ಸ್ಮಾರ್ಟ್ ಫೋನ್ ಗಳ ವಾಟ್ಸ್ಯಾಪ್/ಎಸ್ಸೆಮ್ಮೆಸ್ ಮೆಸೇಜ್ ಗಳಲ್ಲಿ ತಲ್ಲೀನರಾಗಿದ್ದರು. ಒಂದಿಬ್ಬರು ಇಯರ್ ಫೋನ್ ಸಿಕ್ಕಿಸಿಕೊಂಡು ಏನೋ ಕೇಳುತ್ತ ಕಣ್ಮುಚ್ಚಿ ಧ್ಯಾನದ ಬುದ್ಧನಂತೆ ಕುಳಿತಿರುವಂತಿತ್ತು. ಹೊರಗಿನ ಗಲಭೆ ಗೊಂದಲಗಳ ಯಾವುದೇ ಗೋಜಿಲ್ಲದೆ ತಮ್ಮದೇ ಪ್ರಪಂಚಗಳಲ್ಲಿ ಜಾರಿದ್ದ ಇವರನ್ನು ಕಂಡು ಸೋಜಿಗವೆನಿಸಿ ಇವರಿಗೆ ಯಾವ ಉಪಮೆ ಕೊಡಬೇಕೋ ತಿಳಿಯದೆ ಸುಮ್ಮನಾದೆ.

ಮನೆ ಹತ್ತಿರದ ಸರ್ಕಲ್ ನಲ್ಲಿ ನನ್ನನ್ನಿಳಿಸಿ ಕ್ಷಣದಲ್ಲೇ ಟ್ರಾಫಿಕ್ಕಿನಲ್ಲಿ ಕರಗಿಹೋದ ವ್ಯಾನನ್ನೇ ನೋಡುತ್ತ ಮನೆಯತ್ತ ನಡೆದ ನನಗೆ ಸುತ್ತೆಲ್ಲ ಯಾಕೋ ವಿಚಿತ್ರವೆನಿಸಿತ್ತು. ಎಲ್ಲವೂ ಯಾಂತ್ರಿಕದಂತೆ ಭಾಸವಾಗಿ ಕೀ ಕೊಟ್ಟು ಆಡಲು ಬಿಟ್ಟ ಗೊಂಬೆಗಳಂತೆ ಕಂಡವು. ಕಗ್ಗದ 'ಏನು ಜೀವನದರ್ಥ, ಏನು ಪ್ರಪಂಚಾರ್ಥ?'. ಪದಗಳು ಮನದೊಳಗೆ ಮೆಲ್ಲನೆ ತಟ್ಟಿದವು.

ಶೋ ರೂಂ ಒಂದರ ಮುಂದೆ ಜನರ ಗುಂಪೊಂದು ಗಾಜಿನ ಮೂಲಕ ಟೀವೀಯಲ್ಲಿ ಕ್ರಿಕೆಟ್ ಮ್ಯಾಚ್ ನೋಡುತ್ತಿದ್ದುದನ್ನು ಕಂಡು ಇದೇನು ಹುಚ್ಚುತನ ಅಂದುಕೊಂಡೆ. ಒಂದು ಕಾಲದಲ್ಲಿ ನನಗೂ ಕ್ರಿಕೆಟ್ ಹುಚ್ಚು ಇತ್ತೆಂಬ ಅರಿವಾಗಿ ನಮ್ಮ ಬಯಕೆಗಳ ಬದಲಾಗುವಿಕೆ ಮತ್ತು ಅವುಗಳ ನಶ್ವರತೆಯ ಸತ್ಯತೆ ಮತ್ತೊಮ್ಮೆ ಗೋಚರಿಸಿತ್ತು. ಮುಂದೆ ಫುಟ್ ಪಾತ್ನಲ್ಲಿ ನನಗಿಷ್ಟವಾದ ಚುಕ್ಕೆ ಬಾಳೆಹಣ್ಣು ನೋಡಿ ಎಷ್ಟಪ್ಪಾ ಎಂದಾಗ ಅವನು ತಮಿಳಿನಲ್ಲಿ ಏನೋ ಹೇಳಿದ. ಬೆಂಗಳೂರಿನಲ್ಲಿದ್ದ ಮೇಲೆ ಸ್ವಲ್ಪ ತಮಿಳು ಬರಬೇಕಲ್ವ, 'ಎರಡುವರೆ ರೂಪಾಯಿಗೆ ಒಂದು ಹಣ್ಣು' ಎಂದು ಹೇಳಿರಬೇಕು. ತಕ್ಷಣವೇ ಕನ್ನಡದ ಅಭಿಮಾನ ಉಕ್ಕಿ ಒಂದೆರಡು ಸಾಲುಗಳ ಭಾಷಣ ಬಿಗಿದು ಹಣ್ಣು ತೆಗೆದುಕೊಳ್ಳದೆ ಮುಂದಕ್ಕೆ ಹೆಜ್ಜೆ ಹಾಕಿದೆ. ಹಲಸೂರಿನಿಂದ ಪೂರ್ವಕ್ಕಿರುವ ಪ್ರದೇಶವೆಲ್ಲ ತಮಿಳುನಾಡಿಗೆ ಸೇರಿದೆಯೆಂಬ ನಿಶ್ಚಯವೋ ಎಂಬಂತೆ ಮಾತನಾಡುವ ಇವರನ್ನು ನೋಡಿದಾಗ ವಿಶ್ವಮಾನವತತ್ವ ಇರಲಿ, ನಾವೆಲ್ಲ ಭಾರತೀಯರು ಎಂಬುವುದನ್ನೂ ಮರೆಸುವ ಸಿಟ್ಟು ಎಲ್ಲಿಂದ ಬರುತ್ತದೆಯೋ ನಾ ಕಾಣೆ!

ನಾಲ್ಕಾರು ಹೆಜ್ಜೆಯಲ್ಲೇ ಉಕ್ಕಿದ ಸಿಟ್ಟಿನ ಪ್ರವಾಹ ಇಳಿದು ದಿನವಿಡೀ ಬಿಸಿಲು, ಗಾಳಿ, ಹೊಗೆ, ಧೂಳುಗಳಲ್ಲಿ ಕುಳಿತು ವ್ಯಾಪಾರ ಮಾಡುವ ಅವನ ಬಗ್ಗೆ ಕನಿಕರ ಬರುವಷ್ಟರಲ್ಲಿ ಮನೆಯ ಗೇಟ್ ಹತ್ತಿರ ಬಂದಿದ್ದೆ. ವರಾಂಡದಲ್ಲಿ ಪಾರ್ವತಿ ಹೂ ಕಟ್ಟುತ್ತಿದ್ದವಳು ಅನಿರೀಕ್ಷತವಾಗಿ ಬಂದ ನನ್ನನ್ನು ನೋಡಿ ಆಶ್ಚರ್ಯಗೊಂಡರೂ ತೋರಿಸದೆ ರಾಗವಾಗಿ 'ರಾಯರು ಬಂದರು ಬೇಗನೆ ಮನೆಗೆ ಇನ್ನೂ ಬೆಳಕಿತ್ತು!' ಅಂದಳು. ಅವಳಿಗೆ ಸಂಜೆ ಆಫೀಸ್ ನಿಂದ ಮನೆಗೆ ಬರುವವರೆಗೂ ನಡೆದ ಸಂಗತಿಗಳನ್ನು ಸಂಕ್ಷಿಪ್ತವಾಗಿ ತಿಳಿಸಿ ವಾರದ ದಿನಗಳಲ್ಲಿ ಇನ್ನೂ ಬೆಳಕಿರುವಾಗ ಮನೆಗೆ ಬರುವ ಪ್ರಯತ್ನ ಮಾಡುವ ಹಳೆಯ ಭರವಸೆಯ ಬಾಣ ಮತ್ತೊಮ್ಮೆ ಬಿಟ್ಟೆ. ಹಳೆಯ ಪುರಾಣವೆಂಬಂತೆ ಯಾವುದೇ ಪ್ರತಿಕ್ರಿಯೆ ತೋರಿಸದ ಅವಳ ಆಸಕ್ತಿ ಹೆಚ್ಚಿಸಲು ರಂಗಶಂಕರದಲ್ಲಿ ಬರುವ ವಾರದಲ್ಲಿ "ಮೈಸೂರು ಮಲ್ಲಿಗೆ" ನಾಟಕ ನೋಡುವ ಪ್ಲಾನ್ ಹೇಳಿದ್ದಕ್ಕೆ ಸ್ವಲ್ಪವೂ ವಿಚಲಿತಳಾಗದೆ ನೋಡಿದಾಗಲೇ ಗ್ಯಾರಂಟಿ ಅನ್ನುವ ತೆರದಿ ತನ್ನ ಕಾರ್ಯದಲ್ಲಿ ಮಗ್ನಳಾದಳು. ಹೋದಸಾರಿ ಟಿಕೆಟ್ ತಗೊಂಡು ಪ್ರಾಜೆಕ್ಟ್ ಮೀಟಿಂಗ್ ಅಡ್ಡ ಬಂದು ಹೋಗಲಾಗದಿದ್ದದ್ದು ನೆನಪಾಯ್ತು.

ಕಾಫಿ ಮಾಡಲನುವಾದ ಪಾರೂಗೆ ಬೇಡವೆಂದು ಹೇಳಿ ಒಟ್ಟಿಗೆ 'ಅರ್ಲಿ ಡಿನ್ನರ್' ಮಾಡಿ ಕಾನ್ಪರೆನ್ಸ್ ಕಾಲ್‌ಗೆ ಸೇರಿಕೊಳ್ಳುವೆನೆಂದೆ. ಕುಮಾರ ಕಂಠೀರವ ಕಾಣದೆ, ದೀಪು ಎಲ್ಲಿ ಎಂದು ಕೇಳಲು, ಅದನ್ನೇ ನಿರೀಕ್ಷಿಸಿದ್ದ ಪಾರೂ ಐಪಿಎಲ್ ಮ್ಯಾಚ್ ನೋಡಲು ಹೋಗಿರುವನೆಂದು ಹೇಳಿ, ಜೊತೆಗೆ ಅವನ್ ಕ್ರಿಕೆಟ್ ಹುಚ್ಚನ್ನು ನನ್ನ ಆಫೀಸ್ ಕೆಲಸದ ಜೊತೆಗೆ ಹೋಲಿಸಿ ಛೇಡಿಸಿದಳು. ನನಗೆ ಆಫೀಸ್ ಕೆಲಸದ ಹುಚ್ಚಿಲ್ಲ, ಅದು ಬ್ರಹ್ಮ ಹಾಕಿರುವ ಗಂಟು (ನನ್ನ – ನಿನ್ನ ತರಹ) ಅಂತ ಹೇಳಬೇಕೆಂದವನು ಸುಮ್ಮನೆ ಯಾಕೆ ಈ ಅಪರೂಪದ ಸಂಜೆಯ ಮೂಡ್ ಅನ್ನು ಕೆಡಿಸುವುದು ಎಂದು ಸುಮ್ಮನಾದೆ. ಅದಕ್ಕೆ ಬದಲು 'ಓ ನಾವಿಬ್ಬರೇ!? ದೆನ್ ವಿ ಕೆನ್ ಹ್ಯಾವ್ ಎ ರೊಮ್ಯಾಂಟಿಕ್ ಡಿನ್ನರ್ ಟುಡೆ!' ಅಂದೆ. ಪಾರೂ ಮೌನದಲ್ಲೇ ಮಂದಹಾಸ ಬೀರಿದಳು. ಅವಳ ಅಂದಿನ ದಿನದ ವಿಶೇಷವನ್ನು ವಿಚಾರಿಸಲು ಸಿಕ್ಕ ಉತ್ತರ 'ಅನದರ್ ಬೋರಿಂಗ್ ಡೆ', ಇಲ್ಲಿ ಸುತ್ತಲೂ ಇರುವ ಹೆಂಗಸರ ಜೊತೆ ಹರಟೆ ಹೊಡೆಯಲು ತಾನು ಹಿಂದಿ, ಮರಾಠಿ, ತೆಲುಗು, ತಮಿಳು, ಮಲೆಯಾಳಮ್ ಭಾಷೆಗಳನ್ನು ಕಲಿಯಬೇಕೆಂಬ ಅಸಹಾಯತೆ ತೋಡಿಕೊಂಡಳು.

ಎಂಥಾ ಕಾಲ ಬಂತು ನೋಡಿ. ನಮ್ಮೂರಿನಲ್ಲೇ ಕನ್ನಡ ಹುಡುಕೋ ಹಾಗಾಯ್ತು! ಮನೆ ಕೆಲ್ಸಕ್ಕೆ ಕನ್ನಡ ಮಾತನಾಡುವವಳು ಸಿಕ್ಕಿದ್ದೇ ನಮ್ಮ ಅದೃಷ್ಟ! ಇವತ್ತು ಅವಳೂ (ಫೋನ್ ಮಾಡದೆಯೆ, ವಾಟ್ಸಾಪ್ ಮೆಸೇಜ್ ಕಳಿಸಿ) ಕೈ ಕೊಟ್ಟಿದ್ದು ಪಾರ್ವತಿಗೆ ರೇಗಿತ್ತು. ಪಕ್ಕದ ಮನೆಗೆ ಹೊಸದಾಗಿ ಬಂದಿರುವ ನಾರ್ತ್ ಇಂಡಿಯನ್ಸ್ ಗಳ ಅಬ್ಬರದ ಮ್ಯೂಸಿಕ್ ಶಬ್ದಕ್ಕೆ ಆ ಕಡೆಯ ಕಿಟಕಿಗಳನ್ನೆಲ್ಲ ಮುಚ್ಚಿದ್ದಳು. ಇನ್ನು ಈ ಕಡೇ ಮನೆಗೆ ಕಾಲ್ ಸೆಂಟರ್ ನಲ್ಲಿ ಕೆಲ್ಸ ಮಾಡೋ ಹುಡುಗಿಯರು ಬರ್ತಾರೆ ಅಂತ ಕೆಲಸದವಳು ಹೇಳಿದ ಮಾತನ್ನು ನೆನಪಿಸಿಕೊಂಡು ಮಧ್ಯರಾತ್ರಿ, ಬೆಳಗಿನ ಜಾವದಲ್ಲೆಲ್ಲ ಆಗಬಹುದಾದ ಶಬ್ದಗಳನ್ನೂ ಅವರ ವೀಕೆಂಡ್ ಪಾರ್ಟಿಗಳನ್ನೂ ನೆನಸುತ್ತ ನಮ್ಮ ಸ್ಥಿತಿಯ ಚಿಂತನೆಯನ್ನು ಮುಂದಿಟ್ಟಳು. ಕೆಲವು ಕ್ಷಣ ಯೋಚಿಸಿ ನಾನು ಶಾಂತಸ್ವರದಿಂದ ಅಕ್ಕಮಹಾದೇವಿಯ ವಚನಕ್ಕೆ ಮೊರೆಹೋದೆ. "ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ!" ಸ್ವಲ್ಪ ದಿನಗಳು ತಾಳಿಕೋ, ದೀಪು ಕಾಲೇಜ್ ಮುಗಿಸಿ ಸೆಟಲ್ ಆದ ತಕ್ಷಣ ನಾವು ಊರಾಚೆಯಲ್ಲಿ ಅಥವಾ ದೂರದ ಮಲೆನಾಡಿನಲ್ಲಿ ಒಂದು ಪುಟ್ಟ ಮನೆ ಮಾಡಿಕೊಂಡು ಇರುವ ಎಂದೆ. ನೋಡೋಣ ನಮ್ಮ ಕನಸಿನ ಮನೆ ಯಾವಾಗ ನನಸಾಗುವುದೋ ಎನ್ನುತ್ತ ಪಾರೂ ಡಿನ್ನರ್ ರೆಡಿ ಮಾಡಲು ಅಡಿಗೆ ಮನೆಗೆ ಹೋದಳು. ನಾನು ಎಂದಿನಂತೆ ಬ್ಯಾಗ್ ನಿಂದ ಲ್ಯಾಪ್ಟಾಪ್ ತೆಗೆಯಲು ಮುಂದಾದೆ.●

# ಬೃಂದಾವನದಲ್ಲಿ ಹೆಸರಾಂತ ಕಲಾವಿದರು


Shri. K.V. Krishna Prasad


Smt. Nandini Rao


Shri. R.K. Padmanabhan


Smt. Rathnamala Prakash


Smt. Shubha Dhananjaya



# ಮೈಸೂರು ದಸರಾ..... ಎಷ್ಟೊಂದು ಸುಂದರ!!!!!

ವಿ. ಪ್ರಸನ್ನ ಕುಮಾರ



ಮೂಲತಃ ಮೈಸೂರಿನವನಾದ ನನಗೆ "ಮೈಸೂರು ದಸರಾ" ಎಂದರೆ ಬಾಲ್ಯದಿಂದಲೂ ಎಲ್ಲಿಲ್ಲದ ಸಂಭ್ರಮ, ಸಡಗರ...ಮನೆಯಲ್ಲಂತೂ ಸಂಭ್ರಮಕ್ಕೆ ಪಾರವೇ ಇಲ್ಲ. ಮೈಸೂರಿನಲ್ಲಿ ನಮ್ಮ ಕೃಷ್ಣಮೂರ್ತಿಪುರಂ ಬಡಾವಣೆಯ ಎಲ್ಲರ ಮನೆಯ ಸ್ನೇಹಿತರೂ ಒಟ್ಟಾಗಿ ಸೇರಿ ಸಂತಸದ ವಾತಾವರಣದಲ್ಲಿ ಹಬ್ಬವನ್ನಾಚರಿಸಿ ನಕ್ಕು ನಲಿಯುತ್ತಿದ್ದಿವಿ. ಒಂಬತ್ತೂ ದಿನಗಳು ಮನೆ ಮನೆಗಳಿಗೆ ಬೊಂಬೆಗಳನ್ನು ನೋಡಲು ಹೋಗುವುದೇನು, ಚಿಕ್ಕ ಚಿಕ್ಕ ತಿನಿಸುಗಳನ್ನು ಬೊಂಬೆ ಬಾಗಿನವಾಗಿ ಪಡೆಯುವಾಗ ಆಗುತ್ತಿದ್ದ ಸಂತೋಷವೇನು. ಅನುಭವಿಸಿದವರಿಗೇ ಗೊತ್ತು!!!!

ಇನ್ನು ಅಮೇರಿಕದ ನ್ಯೂಜೆರ್ಸಿಗೆ ಬಂದು 20 ವರ್ಷಗಳಾಗಿದ್ದರೂ, ನಮ್ಮ ಮಕ್ಕಳಾದ ಸ್ನೇಹ ಹಾಗು ಸುಹಾಸರಿಗೆ ನಮ್ಮ ಮೈಸೂರು ದಸರಾ ತೋರಿಸಿಯೇ ಇಲ್ಲವಲ್ಲ ಎಂಬುದು ನನ್ನನ್ನು ಹಾಗು ನನ್ನ ಧರ್ಮಪತ್ನಿ ಉಷಾಳನ್ನು ಸದಾ ಕಾಡುತ್ತಿತ್ತು. ಕಳೆದ ವರ್ಷ ಮನಸ್ಸು ಮಾಡಿ ನಮ್ಮ ನಾಲ್ವರ ಕೆಲಸದ ರಜೆಯನ್ನು 8 ತಿಂಗಳ ಮುಂಚೆಯೆ ಪಡೆದು ಈ ಬಾರಿ ದಸರಾ ನೋಡಿಕೊಂಡು ಬರಲು ಮನಸ್ಸು ಮಾಡಿಯೇ ಬಿಟ್ಟೆವು.

ಅಕ್ಟೋಬರ್ ಒಂದು, ಶನಿವಾರ, ನವರಾತ್ರಿಯ ಪಾಡ್ಯದ ದಿವಸ ಜೆ.ಎಫ್.ಕೆ ಯಿಂದ ಹೊರಟು, ದುಬೈ ನಲ್ಲಿ ನಾಲ್ಕು ದಿವಸ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ಬಳಿಕ, ಗುರುವಾರ ನಮ್ಮ ಬೆಂಗಳೂರನ್ನು ತಲುಪಿದಾಗ ವಿಮಾನ ನಿಲ್ದಾಣದಲ್ಲಿಯೇ ಅಚ್ಚರಿ ಕಾದಿತ್ತು. ಅಂಬಾರಿ ಹೊತ್ತ ಆಲಂಕೃತ ಆನೆಯ ಪ್ರತಿಮೆ ಹಾಗು ಅದರ ಪಕ್ಕದಲ್ಲಿ ದಸರಾ ಬೊಂಬೆಗಳನ್ನು ಜೋಡಿಸಿದ್ದು ನೋಡಿ ನಾಲ್ವರಿಗೂ ಮನಸ್ಸಿಗೆ ಅದೇನೊ ಅವ್ಯಕ್ತವಾದ ಆನಂದ. ಸಾಕ್ಷಾತ್ ಅರಮನೆಯ ಆನೆಯಿಂದಲೆ ಅಧಿಕೃತವಾಗಿ ನಮಗೆ ಸ್ವಾಗತ ಸಿಕ್ಕ ಅನುಭವ!!!



ಬೆಂಗಳೂರಿನಲ್ಲಿ ಎರಡು ದಿನ ತಂಗಿದ್ದು, ಭಾನುವಾರ, ದುರ್ಗಾಷ್ಟಮಿಯ ದಿನ ಸಂಜೆ ಮೈಸೂರು ತಲುಪಿದಾಗ ನನಗಂತೂ ಮೈಯೆಲ್ಲಾ ರೋಮಾಂಚನ. ಮೊದಲ ಬಾರಿಗೆ "ಸಂತೃಪ್ತಿ" ಕುಟುಂಬದ ನಾಲ್ವರೂ ಮೈಸೂರಿಗೆ ದಸರಾ ನೋಡಲು ಬಂದೇ ಬಿಟ್ಟವಲ್ಲ ಅನ್ನೊ ಸಡಗರ. ನಮ್ಮ ಸ್ನೇಹಿತರಾದ ಸುನೀತ ಸ್ವಾಮಿ ಯವರ ಮನೆಯಲ್ಲಿ ಕಾಫಿ ಹೀರಿ, ಫಲ ಪುಷ್ಪ ಪ್ರದರ್ಶನವನ್ನು ನೋಡಲು ತೆರಳಿದೆವು. ಜನ, ಜನ, ಜನ. ನಮ್ಮ ಮಕ್ಕಳಿಗೆ ಒಂದು ಚಿಕ್ಕ ಜಾಗದಲ್ಲಿ ಅಷ್ಟೊಂದು ಜನಗಳನ್ನ ನೋಡಿಯೇ ಇರಲಿಲ್ಲ. ಸುಂದರವಾಗಿ ಕೆತ್ತಲ್ಪಟ್ಟ "ಫಲ"ಗಳನ್ನೂ ಹಾಗು ಚೊಕ್ಕವಾಗಿ ಜೋಡಿಸಿದ "ಪುಷ್ಪ"ಗಳನ್ನು ನೋಡಿಕೊಂಡು, ಅರಮನೆಯ ಮುಂಭಾಗದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅರಮನೆಯ ದೀಪಗಳನ್ನು ಹಚ್ಚುವ ಮುನ್ನವೆ ಹೋಗೋಣವೆಂದರೆ ಮಾರ್ಗದಲ್ಲಿ "ಟ್ರಾಫಿಕ್ ಜಾಮ್". ಬಹುಶಃ ಯಾರೊ ವಿ.ಐ.ಪಿ ಹೋಗುತ್ತಿರಬಹುದು ಅಂತ ನಾವು ಬೇಸತ್ತು ಕಾರಿನಲ್ಲೇ ಕುಳಿತಿದ್ದರೆ, ನಂತರ ತಿಳಿಯಿತು ಆ ವಿ.ಐ.ಪಿ ಬೇರಾರು ಅಲ್ಲ ಗಜ ಗಮನೆಯಾದ ಪಟ್ಟದ ಆನೆ "ಅರ್ಜುನ" ಅರಮನೆಗೆ ನಿಧಾನಗತಿಯಲ್ಲಿ ನಡೆದು ಬರುತ್ತಿತ್ತು ಎಂದು. ಹಾಗಾಗಿ ನಾವು ಅರಮನೆಯ ಮುಂದೆ ಹೋಗುವ ಹೊತ್ತಿಗೆ ದೀಪಗಳೆಲ್ಲ ಹತ್ತಿದ್ದವು.

ಲಕ್ಷಾಂತರ ದೀಪಗಳಿಂದ ಕಂಗೊಳಿಸುವ ಅರಮನೆಯನ್ನು



ಎವೆಯಿಕ್ಕದೆ ನೋಡುವುದೇ ಒಂದು ಸಂಭ್ರಮವಾದರೆ, ಅದರ ಮುಂದೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುವುದು ಮತ್ತಷ್ಟು ಸಂಭ್ರಮ. ಮುಂದಿನ ಸಾಲಿನ ಸೋಫ ಮೇಲೆ ಕುಳಿತು ಭವ್ಯವಾದ ಅರಮನೆಯ ಮುಂದೆ ಹಾಕಿದ್ದ ಸೊಗಸಾದ ವೇದಿಕೆ ಮೇಲೆ ನಡೆದ ರಾಜಸ್ತಾನಿ ನೃತ್ಯ ಹಾಗು ಕರ್ನಾಟಕ ತಂಡದ ಸುಗಮ ಸಂಗೀತವನ್ನು ಸ್ವಲ್ಪ ಕಾಲ ಸವಿದೆವು. ದೀಪಾಲಂಕೃತ ಅರಮನೆಯ ಮುಂದೆ ನಿಂತು ನಮ್ಮ ಚಿತ್ರಗಳನ್ನು ತೆಗೆದುಕೊಂಡ ನಂತರ ನಾವು ನಾಲ್ವರೂ ಮೈಸೂರು ಟಾಂಗ ದಲ್ಲಿ ಕೋಟೆ ಗಣಪತಿ ಗುಡಿಯ ಮುಂದಿನಿಂದ ಹೊರಟು ಸಯ್ಯಾಜಿ ರಾವ್ ರಸ್ತೆಯ ದೀಪಾಲಂಕಾರವನ್ನು ವೀಕ್ಷಿಸಿದ್ದಂತು ಒಂದು ಮರೆಯಲಾಗದ ಅನುಭವ. ದಸರಾ ಪ್ರಯುಕ್ತ ನಮ್ಮ ಕುದುರೆ ಗಾಡಿಗೂ ದೀಪಾಲಂಕಾರ ಮಾಡಲಾಗಿತ್ತು. ಸ್ನೇಹ ಸುಹಾಸರಿಗಂತೂ ಇದು ಮೊದಲ ಬಾರಿ ಆಗಿದ್ದರಿಂದ ಇದೊಂದು ಮನೋರಮಣೀಯ ಜಟಕಾ ಬಂಡಿ ಸವಾರಿಯಾಗಿತ್ತು.

ಸೋಮವಾರ, ಆಯುಧ ಪೂಜೆ, ಆದ್ದರಿಂದ ಅರಮನೆಗೆ ಪ್ರವೇಶವಿರಲಿಲ್ಲ ಹಾಗಾಗಿ ಗಣಪತಿ ಸಚ್ಚಿದಾನಂದ ಆಶ್ರಮದ ಶುಕವನಕ್ಕೆ ತೆರಳಿ, ಗಿಣಿಗಳೊಂದಿಗೆ ಚಿತ್ರಗಳನ್ನು ತೆಗಿಸಿಕೊಂಡು, ಅಲ್ಲಿಂದ ಚಾಮುಂಡಿ ಬೆಟ್ಟಕ್ಕೆ ಸರಕಾರಿ ಬಸ್ಸಿನಲ್ಲಿ ಪಯಣಿಸಿ, ಹೊಸದಾಗಿ ಬಣ್ಣ ಹಚ್ಚಿಸಿಕೊಂಡು ಇನ್ನಷ್ಟು ಕಂಗೊಳಿಸುತ್ತಿದ್ದ ಮಹಿಷಾಸುರ ಹಾಗು ಪ್ರತಿದಿನವೂ ಕಂಗೊಳಿಸುತ್ತ ಇರುವ ಕಳೆತುಂಬಿದ ಚಾಮುಂಡೇಶ್ವರಿಯ ದರ್ಶನ ಪಡೆದು, ಬೆಟ್ಟದ ಮೇಲಿಂದ ದೀಪಾಲಂಕೃತ ಅರಮನೆಯನ್ನು ವೀಕ್ಷಿಸಿದ್ದು ಮನಸ್ಸಿಗೆ ಮುದ ನೀಡಿತು.

ಮಂಗಳವಾರ, ವಿಜಯದಶಮಿಯ ದಿನ ನಮ್ಮ ಮನೆದೇವರಾದ ಯೋಗಾನರಸಿಂಹ ದೇವಸ್ಥಾನಕ್ಕೆ ತೆರಳಿದ ನಂತರ, ನಮ್ಮ ವಿ ಐ ಪಿ ಪಾಸುಗಳನ್ನು ತೆಗೆದುಕೊಂಡು ಸೀದಾ ಅರಮನೆಗೆ ತೆರಳಿದರೆ, ಅಲ್ಲಿ ಒಳಗೆ ಪ್ರವೇಶಿಸಲು ಅಪಾರ ಜನಸ್ತೋಮ. ಸರತಿಯ ಸಾಲಿನಲ್ಲಿ ನಿಂತ ನಮಗೆ ಬರ್ತಾ ಬರ್ತಾ ಸರತಿಯ "ಸಾಲು" "ಗುಂಪಾಗಿ" ನೂಕು ನುಗ್ಗಲು ಶುರುವಾಯ್ತು. ಉಸಿರು ಕಟ್ಟಿಸುವ ವಾತಾವರಣ ಶುರುವಾದಾಗ ಸರತಿಯಿಂದ ಆಚೆ ಬಂದು ನೋಡಿದರೆ, ಅದೇ ಸಾಲಿನಿಂದ ಆಚೆ ಬಂದವರು ನಮ್ಮ ಕ್ಯಾಲಿಫ಼ೋರ್ನಿಯ ಸ್ನೇಹಿತರಾದ ವಿದ್ಯಾ ವಲ್ಲೀಶ ಹಾಗು ಅವರ ಸ್ನೇಹಿತೆ. ಇದೆ ಸಮಯಕ್ಕೆ ವರುಣನು ಧಾರಾಕಾರವಾಗಿ ಕೃಪೆ ತೋರಿಸಿ ನಮ್ಮನ್ನೆಲ್ಲ ತೋಯಿಸಿದ. ಅಂತು ಇಂತು ನಾವೆಲ್ಲರೂ ಅರಮನೆಯ ಮುಂಭಾಗದ ಒಳಗೆ ಹೋಗುವ ಹೊತ್ತಿಗೆ ಮೆರವಣಿಗೆ ಆಗತಾನೆ ಶುರುವಾಗಿತ್ತು. ಹೆಂಗೋ ಮಳೆಯಲ್ಲೇ ಮುನ್ನುಗ್ಗಿ ಮೆರವಣಿಗೆಯನ್ನು ನೋಡಲು ಮುಂದೆಯೇ ನಿಂತೆವು. ಎಂತಹ ಅದ್ಭುತ, 104 ಸುಂದರ ಸ್ತಬ್ಧ ಚಿತ್ರಗಳು, ಅವುಗಳ ಮುಂದೆ ಮಳೆಯಲ್ಲೆ ಉತ್ಸಾಹದಿಂದ ಕುಣಿದು ಕುಪ್ಪಳಿಸಿದ ಕಂಸಾಳೆ ನೃತ್ಯ ಪಟುಗಳು, ಕಳಶ ಹೊತ್ತ ಗರತಿಯರು, ಡೊಲ್ಲು ಕುಣಿತ ಮಾಡಿದವರು, ಕಾಲಿಗೆ ಕಟ್ಟಿಕೊಡು ಉದ್ದವಾಗಿ ನಡೆದವರು, ಇವೆರೆಲ್ಲರನ್ನು ನೋಡಲು ಕಣ್ಣಿಗೆ ಹಬ್ಬ, ಮನಸಿಗೆ ಆನಂದ. ವಿಶೇಷ ಗಮನ ಸೆಳೆದದ್ದು 30 ಅಡಿ ಎತ್ತರ ಕಾಲಿಗೆ ಬೆತ್ತದ ದಬ್ಬೆ ಕಟ್ಟಿಕೊಂಡು ಬಂದ ಅಷ್ಟಬಾಹು ಶಿವ. ಅವನನ್ನು ನೋಡಿದ ಜನಗಳ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಇವನು ಇದೇ ರೀತಿ 3 ಮೈಲಿ ಮೆರವಣಿಗೆಯ ಪೂರ ದೂರ ಯಾವ ರೀತಿ ಹೋಗುತ್ತಾನೊ ಎಂಬ ಪ್ರಶ್ನೆ ಎಲ್ಲರ ಮನದಲ್ಲಿ ಮೂಡಿತು. ಸುಮಾರು ಎರಡು ಘಂಟೆಗಳ ಕಾಲ ಈ ವೈಭವವೆಲ್ಲ ಮುಂದೆ ಹೋದ ಮೇಲೆ ನಿಧಾನವಾಗಿ






ಬಂದದ್ದೆ 750 ಕಿಲೊಗ್ರಾಮ್ ಚಿನ್ನದ ಅಂಬಾರಿಯಲ್ಲಿ ರಾಜ ರಾಜೇಶ್ವರಿಯ ವಿಗ್ರಹ ಹೊತ್ತು ರಾಜ ಗಾಂಭಿರ್ಯದಿಂದ ನಡೆದು ಬಂದ ಗಜೇಂದ್ರ "ಅರ್ಜುನ". ಅದನ್ನು ನೋಡಿದಾಗ ಎಲ್ಲರೂ ಭಾವಪರವಶರಾಗಿ "ಜೈ ಚಾಮುಂಡೇಶ್ವರಿ" ಎಂದು ಕೂಗುತ್ತಾ ನಿಂತಲ್ಲಿಂದಲೆ ಕೈಮುಗಿದರು. ಜನ ಜಂಗುಳಿ, ನೂಕು ನುಗ್ಗಲು, ಭೋರ್ಗರೆಯುವ ಮಳೆ, ಬಟ್ಟೆಯಲ್ಲಾ ಒದ್ದೆ ಮುದ್ದೆ. ಇಷ್ಟಾದರೂ ಮೆರವಣಿಗೆಯಲ್ಲಿ ಭಾಗವಹಿಸಿದವರ ಹಾಗು ನೋಡುತ್ತಿದವರ ಉತ್ಸಾಹ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಒಟ್ಟಾಗಿ ಮೂರು ಘಂಟೆಗಳ ಕಾಲ ನಿಂತು ಜಂಬೂ ಸವಾರಿ ನೋಡಿ ಮುಗಿಸಿದಾಗ ನಮಗಂತು ಅದೇನೊ ಮಹತ್ತರ ಕಾರ್ಯವನ್ನು ಯಶಸ್ವಿಯಾಗಿ ಸಾಧಿಸಿದ ಒಂದು ಸಮಾಧಾನದ ಅನಿಸಿಕೆ.

ಅರಮನೆಯಿಂದ ಕಾರಿನಲ್ಲಿ ಸೀದಾ ಬನ್ನಿ ಮಂಟಪಕ್ಕೆ ತೆರಳಿ ನಿಗದಿತ ಜಾಗದಲ್ಲಿ 8 ಘಂಟೆಗೆ ಕುಳಿತ ಕೂಡಲೆ ಶುರುವಾಯ್ತು ವಿಧ ವಿಧವಾದ ಕಾರ್ಯಕ್ರಮಗಳು. ರೋಮಾಂಚನ ಗೊಳಿಸುವ ಮೋಟಾರ ಸೈಕಲ್ ಸವಾರರ ಪ್ರದರ್ಶನ, ಮಕ್ಕಳ ಕಂಬದ ಮೇಲಿನ ಚಾಕಚಕ್ಯತೆ ಇತ್ಯಾದಿ. ಆದರೆ ಕೊನೆಯ 30 ನಿಮಿಷದಲ್ಲಿ ಮಾಡುವ ಪಂಜಿನ ಕವಾಯಿತ ಅತ್ಯಂತ ವಿಶೇಷವಾದದ್ದು. 350 ಜನ ಶಿಸ್ತಿನಿಂದ ಎರಡು ಕೈಯಲ್ಲಿ ಉರಿಯುವ ಪಂಜನ್ನು ಹಿಡಿದು ಬನ್ನಿ ಮಂಟಪವನ್ನು ಪ್ರವೇಶಿಸಿದಾಗ ಮೈಯೆಲ್ಲಾ ರೋಮಾಂಚನವಾಗುತ್ತೆ. ಪಂಜು ಹಿಡಿದು ಅದರಲ್ಲಿ ವಿಧ ವಿಧವಾದ ಪದಗಳ ಜೋಡನೆ ಮಾಡಿ ಎಲ್ಲರ ಮನಸೂರೆಗೊಂಡರು. ಅದು ಯಾವ ರೀತಿ ಇತ್ತು ಅನ್ನುವುದು ಬರೆಯುವುದೆ ಕಷ್ಟ, ನೋಡಿಯೆ ಅನುಭವಿಸಬೇಕು. ತುಂಬಾ ವರುಷಗಳ ಹಿಂದೆ ಮೈಸೂರು ಸಂಸ್ಥಾನದ ಸೈನಿಕರು ರಾತ್ರಿಯ ಹೊತ್ತು ದೂರದಿಂದ ಸನ್ನೆಯ ಮೂಲಕ ಕೆಲವು ವಿಷಯಗಳನ್ನು ತಿಳಿಸಲು ಈ ರೀತಿ ಪಂಜು ಹಿಡಿದವರ ಮೂಲಕ "ಬನ್ನಿ" "ಹೋಗಿ" "ನಿಲ್ಲಿ". ಇತ್ಯಾದಿ ಪದಗಳನ್ನು ಮಾಡುತ್ತಿದ್ದರಂತೆ. ಅದನ್ನು ತೋರಿಸಲು ಈ ಪಂಜಿನ ಕವಾಯುತವನ್ನು ಕಳೆದ 206 ಉತ್ಸವದಲ್ಲಿ, ವಿಜಯದಶಮಿಯ ರಾತ್ರಿಯ ವೇಳೆ ಪ್ರತಿವರ್ಷ ನಡೆಸುತ್ತಾ ಬಂದಿದ್ದಾರೆ. ಪ್ರಪಂಚದ ಇನ್ನೆಲ್ಲಿಯು ಕೂಡ ಈ ಪಂಜಿನ ಕವಾಯುತವನ್ನು ನಡೆಸುವುದಿಲ್ಲ. ಇದನ್ನು ಮೈಸೂರಿನಲ್ಲಿ ನೋಡುವುದೆ ನಮ್ಮೆಲ್ಲರ ಭಾಗ್ಯ ಅಂದುಕೊಂಡೆವು. ಮನೆಗೆ ಬಂದಾಗ ರಾತ್ರಿ ಹನ್ನೊಂದಾಗಿತ್ತು.

ಬುಧವಾರ, ಮೈಸೂರು ಹತ್ತಿರ ಇರುವ ಕಲ್ಲಹಳ್ಳಿ ಎಂಬ ಹಳ್ಳಿಯಲ್ಲಿ ಲಕ್ಷ್ಮಿ ಸಮೇತನಾಗಿರುವ ಭೂವರಾಹ ಸ್ವಾಮಿಯ ದರುಶನ ಮಾಡಿಕೊಂಡು, ಕೆ.ಎಸ್.ಐ.ಸಿ ಯಲ್ಲಿ ಹಲವು ಮೈಸೂರು ರೇಶಿಮೆ ಸೀರೆಗಳನ್ನು ಕೊಂಡುಕೊಂಡು, ಗೊಂಬೆ ಮನೆಯಲ್ಲಿ ಸಹಸ್ರಾರು ಬೊಂಬೆಗಳನ್ನು ನೋಡಿಕೊಂಡು, ಹಲವನ್ನು ಕೊಂಡುಕೊಂಡು ಬೆಂಗಳೂರಿಗೆ ಮರಳಿ ಬಂದಾಗ ಬೆಳಗಿನ ಜಾವ 2:30. ನಾಲ್ಕು ದಿವಸ ನಮ್ಮ ಮೈಸೂರಿನ ಪ್ರವಾಸ, ಒಂದು ಸಮಗ್ರವಾದ ದೃಶ್ಯ ಕಾವ್ಯವನ್ನು ಓದಿಕೊಂಡು ನೋಡಿದ ಅವಿಸ್ಮರಣೀಯ ಅನುಭವ.

ನಮ್ಮ ಮೈಸೂರು ದಸರಾ. ಎಷ್ಟೊಂದು ಸುಂದರ. ನೀವೆಲ್ಲರೂ ಖಂಡಿತವಾಗಿ ಜೀವಮಾನದಲ್ಲಿ ಒಮ್ಮೆ ಯಾದರು ನೋಡಲೇಬೇಕಾದ ಸಡಗರದ ಸಂಭ್ರಮದ ಸುಂದರ ದಸರಾ!!●

ಕವಿತೆ

ಪ್ರಶಾಂತ ಜೋಶಿ



# ಬೇಕೊಂದು ದೀಪಾವಳಿ



ಮೈಗೆ ಸವರಿದ ಎಣ್ಣೆ
ಮಿರಿಮಿರಿಮಿರಿ ಮಿಂಚುತಿದೆ
ಬಿಸಿನೀರಿನ ಹಿತಸ್ನಾನಕೆ
ದೇಹವು ಅಣಿಯಾಗುತಿದೆ

ಕಟ್ಟೆಯ ಮೇಲಿಟ್ಟಿರುವ
ಅಮ್ಮನ ಆರತಿ ತಟ್ಟೆ
ಮುಟ್ಟಿ ಮುಟ್ಟಿ ಸಂಭ್ರಮದಿ
ನೋಡುತಿರೆ ಹೊಸಬಟ್ಟೆ

ಪಡಸಾಲೆಯ ರಂಗವಲ್ಲಿ
ಕಣ್ಣಲ್ಲೇ ಕುಣಿಯುತಿದೆ
ಮೈಸೂರ್ ಪಾಕಿನ ಘಮವು
ಕೈಬೀಸಿ ಕರೆಯುತಿದೆ

ಸುರುಸುರು ಎನ್ನುತ ಬತ್ತಿ
ಠುಸ್ ಪಟಾಕಿ ಸುಡುತಿರುವುದು
ಸುರುಳಿಚಕ್ರ ತಿರುಗುತಿರೆ
ಹೂಪಟಾಕಿ ಬುಸುಗುಡುವುದು

ಬೆಳಕಿನ ಜಾತ್ರೆಯಿದು
ದೀಪಗಳ ಮೆರವಣಿಗೆ
ಕಳೆಯುತಿರೆ ಕತ್ತಲೆಯ
ಅರಳುವುದು ಮನಮಲ್ಲಿಗೆ

ಅಜ್ಞಾನವ ಬಡಿದೋಡಿಸಿ
ಸಹಜೀವನ ದೃಶ್ಯಾವಳಿ
ಜನಜನಕೆ ಮನಮನಕೆ
ಬೇಕೊಂದು ದೀಪಾವಳಿ





# ಊರಿಗೆ ಬಂದವಳು ಬ್ಯೂಟಿಪಾರ್ಲರಿಗೆ ಬರದೇ...

ಅಲಂಕಾರ ಇಂದು ಯಾರೊಬ್ಬರ ಸ್ವತ್ತೂ ಅಲ್ಲ. ಒಂದು ವರ್ಗದ ಜನ ಮಾತ್ರ ಅಲಂಕಾರಕ್ಕೆ ಒತ್ತು ಕೊಡುತ್ತಾರೆ ಎಂಬ ನೀತಿ ಈಗ ಕ್ರಮೇಣ ಬದಲಾಗುತ್ತಿದೆ. ಆ ನಿಟ್ಟಿನಲ್ಲಿ ಯೋಚಿಸಲು ಪೂರಕವಾಗುವಂತೆ ಒಂದು ಲೇಖನ.

ಕಾವ್ಯಾ ಕಡಮೆ ನಾಗರಕಟ್ಟೆ



"ನನ್ನ ಒಂದು ದಿನದ ಲಿಪ್‌ಸ್ಟಿಕ್ಕಿನ ಬೆಲೆ ನಿನ್ನ ಒಂದು ತಿಂಗಳಿನ ಸಂಬಳಕ್ಕಿಂತ ಹೆಚ್ಚು ಗೊತ್ತಾ?" ಅಂತ ನಮ್ಮ ನಾಯಕಿಯು ನಾಯಕನಿಗೆ ಬೆನ್ನುಮಾಡಿ ನಿಂತು ಜಂಭದಿಂದ ಗಾಗಲ್ ಏರಿಸಿ, ಹುಬ್ಬು ಹಾರಿಸುತ್ತ ತುಟಿ ಕೊಂಕಿಸಿ ಕ್ಯಾಮರಾಕ್ಕೆ ಮುಖ ಮಾಡಿ ನುಡಿದಳೆಂದರೆ ಅಲ್ಲಿಗೆ ಸಿನಿಮಾದ ಸ್ವಾರಸ್ಯ ಶುರುವಾಯಿತು ಅಂತ ಅರ್ಥ. ಅಲ್ಲಿಂದ ಚಿತ್ರವು ಹೊಸ ತಿರುವು ಪಡೆದುಕೊಳ್ಳುತ್ತದೆ. ಅಲ್ಲಿಯ ತನಕ ತೆಪ್ಪಗಿದ್ದ ಒಳ್ಳೆಯ ಮನಸ್ಸಿನ ಪರೋಪಕಾರಿ ನಾಯಕ, ನಾಯಕಿಯ ಸೊಕ್ಕು ಮುರಿಯುವ ಪಣ ತೊಡುತ್ತಾನೆ. ಎರಡು ಫೈಟು ನಾಲ್ಕು ಹಾಡುಗಳ ನಂತರ ಗೌರಮ್ಮನಂತೆ ಚೂಡಿದಾರ್ ತೊಟ್ಟು ಪ್ರಸನ್ನವದನೆಯಾಗಿ ನಾಯಕಿ ನಕ್ಕಳೆಂದರೆ ಇನ್ನೈದು ನಿಮಿಷಗಳಲ್ಲಿ ಚಿತ್ರ ಮುಗಿಯುತ್ತದೆ ಅನ್ನುವ ಸೂಚನೆ ದೊರೆತಂತೆ ಪ್ರೇಕ್ಷಕನಿಗೆ. ಅಷ್ಟೇ ಏಕೆ, ಮೂರು ವರ್ಷಗಳ ಹಿಂದೆ ಬಂದ ಒಂದು ಜನಪ್ರಿಯ ಸಿನಿಮಾದಲ್ಲೂ "ಇವಳ ಕಣ್ಣ ಕಾಡಿಗೆ– ನನ್ನ ಮನೆಯ ಬಾಡಿಗೆ– ಒಂದೆ ರೇಟು ಡೌಟೆ ಇಲ್ಲ, ತುಂಬ ತೊಂದರೆ" ಅಂತ ಹೀರೋ ಹಾಡಿ ಕುಣಿವುದನ್ನು ನಾವೇ ಮನಸಾರೆ ಮೆಚ್ಚಿ ಸಿಳ್ಳು ಹೊಡೆದು ಬಂದಿಲ್ಲವೇ? ಈ ಎರಡೂ ಸಾಲುಗಳಲ್ಲೂ ಅಲಂಕಾರವನ್ನು ಹೆಣ್ಣಿನ ವ್ಯಕ್ತಿತ್ವಕ್ಕೆ ಪೂರಕ ಎನ್ನುವ ಬದಲು ಅನ್ವರ್ಥಕವೆನಿಸುವಂತೆ ಬಳಸಿದ್ದನ್ನು ಗಮನಿಸಿದರೆ ನಮ್ಮ ವಿಚಾರಶಕ್ತಿಯನ್ನು ಬಹುವಾಗಿ ರೂಪಿಸುವ ಜವಾಬ್ದಾರಿ ಹೊತ್ತ ಮಾಧ್ಯಮಗಳ ಕುರಿತು ಗುಮಾನಿ ಕಾಡದೇ ಇರದು.



ಅಲಂಕಾರ ಮಾಡಿಕೊಳ್ಳಬೇಕೋ ಬೇಡವೋ ಅನ್ನುವುದು ಪ್ರತೀ ವ್ಯಕ್ತಿಯ ವೈಯಕ್ತಿಕ ಆಯ್ಕೆ. ಅದು ನಮ್ಮನ್ನು ನಾವು ಇನ್ನೊಬ್ಬರ ಮುಂದೆ ಹೇಗೆ ಪ್ರೆಸೆಂಟ್ ಮಾಡಿಕೊಳ್ಳಲು ಇಚ್ಛಿಸುತ್ತೇವೆ ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ. ಅಲಂಕಾರದಲ್ಲಿರುವ ಆಸಕ್ತಿಯನ್ನು ಯಾವುದೇ ಮನುಷ್ಯನ ವ್ಯಕ್ತಿತ್ವದ ಸತ್ವವನ್ನಳೆಯುವ ಮಾನದಂಡವನ್ನಾಗಿ ಕಾಣುವುದು ಸಮಂಜಸವಲ್ಲ ಎನ್ನಿಸುತ್ತದೆ. ಐನ್‌ಸ್ಟೀನ್‌ರ ದೊಗಳೆ ಕೋಟು, ಕೆದರಿದ ಕೂದಲು, ಯಾವಾಗಲೂ ನಿದ್ದೆಗೆಟ್ಟಂತಿರುವ ಮುಖ ನೋಡಿ ವಿಜ್ಞಾನದಲ್ಲಿರುವ ಅವರ ಪ್ರಭುತ್ವವನ್ನು ಅಲ್ಲಗಳೆಯಲು ಸಾಧ್ಯವೇ?

ಅಲಂಕಾರವಿರಲಿ ಇಲ್ಲದಿರಲಿ, ತಯಾರಾಗಿ ಕನ್ನಡಿಯ ಮುಂದೆ ನಿಂತರೆ ನಮಗೇ ನಾವು ಮೆಚ್ಚುಗೆಯಾಗಬೇಕು. ನಮ್ಮ ಕುರಿತೇ ನಮಗೆ ಉಂಟಾಗುವ ಮೆಚ್ಚುಗೆ ಮತ್ತು ಆ ಮೂಲಕ ದೊರೆವ ಆತ್ಮವಿಶ್ವಾಸವೇ ಅಲಂಕಾರದ ಮೂರ್ತರೂಪ ಎಂಬ ನಂಬಿಕೆ ನನ್ನದು. ಸ್ವತಃ ತಮ್ಮನ್ನಲ್ಲದೇ ಇನ್ನೊಬ್ಬರನ್ನು ಮೆಚ್ಚಿಸಲು ಮಾಡಿಕೊಳ್ಳುವ ಅಲಂಕಾರ ಬಹು ಬೇಗ ಅರ್ಥ ಕಳೆದುಕೊಂಡುಬಿಡುತ್ತದೆ, ಜೊತೆಗೆ ಶುಷ್ಕವೆನಿಸಿಬಿಡುತ್ತದೆ. ನಮ್ಮ ನಮ್ಮ ಸೌಂದರ್ಯಪ್ರಜ್ಞೆಗೆ ಅನುಗುಣವಾಗಿ ಧರಿಸುವ ಹಿತಮಿತವಾದ ಅಲಂಕಾರ ಮತ್ತು ನಿಲುವಿಗೆ ಸರಿಹೊಂದುವಂಥ ಉಡುಪು ಆಯುವ ಜಾಣ್ಮೆಗಳೆರಡೂ ಬಾಹ್ಯ ಜಗತ್ತಿನಲ್ಲಿ ಖಾಯಮ್ಮಾಗಿ ಅಲ್ಲದಿದ್ದರೂ ಮೊದಲ ನೋಟದಲ್ಲೇ ನಮ್ಮತನದ ಛಾಪನ್ನು ಮಿಕ್ಕವರಲ್ಲಿ ಮೂಡಿಸುವುದಂತೂ ಸತ್ಯ.

ಇತ್ತೀಚೆಗೆ ಅಂದರೆ ತೀರ ಹತ್ತು–ಹದಿನೈದು ವರ್ಷಗಳ ಹಿಂದೆಯೂ ನಮ್ಮ ಮಧ್ಯಮ ವರ್ಗದ ಮನೆಗಳಲ್ಲಿ ಸೌಂದರ್ಯ ಪ್ರಸಾದನಗಳನ್ನು ಹಿರಿಯರು ಪ್ರೋತ್ಸಾಹಿಸುತ್ತಿರಲಿಲ್ಲ. ಆಗೆಲ್ಲ ಹೆಣ್ಣುಮಕ್ಕಳು ಇದ್ದುದರಲ್ಲಿಯೇ ನಾಲ್ಕು ಕಾಸು ಉಳಿಸಿ ಮುಖಕ್ಕೆ ಹಚ್ಚುವ ಕ್ರೀಮನ್ನು ಮನೆಯಲ್ಲಿ ಹೇಳದೇ ಕೊಂಡು ತಂದರೆ ಅದೇ ಅವರಿಗೆ ದೊಡ್ಡ ಸಾಹಸದಂತೆ ಭಾಸವಾಗುತ್ತಿತ್ತು. ಆದರೆ ಹಿಂದಿನಂತೆ ಕ್ರೀಮಿನ ಮೇಲೆ ತೆಳುವಾಗಿ ಪೌಡರು ಹಚ್ಚಿ ಕಣ್ಣಿಗೆ



ಕಾಡಿಗೆಯೆಳೆದೇ ಸಮಾಧಾನಪಟ್ಟುಕೊಂಡು ಬಿಡುವ ದಿನಗಳು ನಮ್ಮ ಕಾಲಕ್ಕೆ ಇಲ್ಲವಲ್ಲ.

ಈಗೇನಿದ್ದರೂ ಮುಖದಲ್ಲಿ ಬೆವರ ಮಣಿಗಳು ಕಾಣಬಾರದೆಂಬ ಕಾರಣಕ್ಕೆ ತ್ವಚೆಗೆ ಹೊಂದುವ ಫೌಂಡೇಶನ್ನು ಹಚ್ಚುವ ಮೂಲಕ ಅಲಂಕಾರ ಶುರುವಾಗುತ್ತದೆ. ಇನ್ನು ಆ ಫೌಂಡೇಶನ್ನನ್ನೇ ಕಿವಿ– ತೋಳು– ಬೆನ್ನುಗಳಿಗೆ ಹಚ್ಚಿ, ಅದರ ಮೇಲೆ ದಪ್ಪ ಬ್ರಶ್ಶಿನಲ್ಲಿ ಮೆಲುವಾಗಿ ಸವರುವ ಕಾಂಪ್ಯಾಕ್ಟ್ ಪೌಡರು, ನಾಚಿದಂತೆ ಕೆನ್ನೆ ಕೆಂಪಾಗಿರಲು ಬ್ಲಶ್ಶು, ಸಾಲದ್ದಕ್ಕೆ ಮುಖದ ಮೇಲಿನ ಕಲೆಗಳು ಕಾಣದಿರಲು ಕಂಸೀಲರು, ಇನ್ನು ತುಟಿ– ಕಣ್ಣುಗಳ ರಂಗೇರಿಸಲು ಲಿಪ್‌ಲೈನರು, ಲಿಪ್‌ಸ್ಟಿಕ್ಕು, ಲಿಪ್‌ಗ್ಲಾಸು, ಐಬ್ರೋ ಪೆನ್ಸಿಲ್, ಐಶ್ಯಾಡೋ, ಐಲೈನರು, ಮಸ್ಕರಾ ಮುಂತಾದ ಹತ್ತಾರು ಪ್ರಸಾದನ ಸಾಮಗ್ರಿಗಳನ್ನು ಬಳಸಿದ ನಂತರವೇ ಮನೆಯಿಂದ ಹೊರಬೀಳುವ ಮಾತು.

ಇನ್ನು ಭಾರತೀಯ ಉಡುಗೆಗಳನ್ನು ತೊಟ್ಟುಕೊಂಡರಂತೂ ಅದಕ್ಕೆ ಮ್ಯಾಚಿಂಗು ಬಳೆ–ಬಿಂದಿ–ನೆಕ್‌ಲೇಸು– ಜುಮಕಿ ಸೆಟ್‌ಗಳು ಬೇಕೇ ಬೇಕು. ಹೀಗಾಗಿ ಅಲಂಕಾರದಲ್ಲಿ ಆಸಕ್ತಿಯಿರುವವರಿಗೆ ಎರಡು ಗಂಟೆ ಮೊದಲೇ ತಿಳಿಸಿಬಿಡುವುದು ನಮ್ಮೆಲ್ಲರ ಮನೆಗಳಲ್ಲೂ ವಾಡಿಕೆ.

ಅಲ್ಲದೇ ಹಬ್ಬ–ಮದುವೆ ಸೀಜನ್ನುಗಳು ಬಂದರಂತೂ ಮೊದಲೇ ಸಮಯ ನಿಗದಿ ಪಡಿಸಿಕೊಂಡು ಹೋದರೂ ಪಾರ್ಲರುಗಳಲ್ಲಿ ನುಗ್ಗಾಟವಿರುವುದು ಖಚಿತ. ಫೇಶಿಯಲ್, ಮೆನಿಕ್ಯೂರ್, ಪೆಡಿಕ್ಯೂರ್, ಥ್ರೆಡಿಂಗ್, ವ್ಯಾಕ್ಸಿಂಗ್ ಅಂತ ಹತ್ತಾರು ಹೆಣ್ಣುಮಕ್ಕಳ ಸಾಲು ನೋಡಿದರೆ "ಊರಿಗೆ ಬಂದವಳು ಬ್ಯೂಟಿಪಾರ್ಲರಿಗೆ ಬರದೇ ಇರುತ್ತಾಳೆಯೇ?" ಎಂಬ ಆಧುನಿಕ ಗಾದೆ ಹುಟ್ಟಿದ್ದು ಇಂಥ ಸಂದರ್ಭದಲ್ಲಿಯೇ ಇರಬೇಕು ಅಂತ ಅನ್ನಿಸುವುದು.

ಇಷ್ಟಿದ್ದರೂ ಅಲಂಕಾರಿಸಿಕೊಳ್ಳುವುದು ಕೇವಲ ಹೆಣ್ಣುಮಕ್ಕಳ ಸ್ವತ್ತು ಎಂದರೆ ಅಪೂರ್ಣವಾಗುತ್ತದೆ. ಅಲಂಕಾರಕ್ಕೆ ನೀಡುವ ಪ್ರಾಮುಖ್ಯತೆಯಲ್ಲಿ ಹೆಂಗಸರು ಮತ್ತು ಗಂಡಸರ ನಡುವೆ ಹೆಚ್ಚೇನೂ ವ್ಯತ್ಯಾಸವಿಲ್ಲ ಅಂತಲೇ ಅನ್ನಿಸುತ್ತದೆ. ಕೂದಲಿಗೆ ಜೆಲ್ ಹಚ್ಚುತ್ತಲೋ ಹತ್ತಾರು ಸಲ ಕೂದಲು ಬಾಚಿಕೊಳ್ಳುತ್ತಲೋ, ಮಾರುಕಟ್ಟೆಯಲ್ಲಿ ಹೊಸತಾಗಿ ಬಂದ ಕ್ರೀಮು ಹಚ್ಚುತ್ತಲೋ ಕನ್ನಡಿಯ ಮುಂದೆ ತಾಸುಗಟ್ಟಲೆ ನಿಂತೇ ಇರುವ ಗುಣವಿರುವ ಗಂಡಸರು ನಮ್ಮ ನಡುವೆಯೇ ಇಲ್ಲವೇ?

ಅಲಂಕಾರದಿಂದ ವ್ಯಕ್ತಿಯ ನೈಜ ಮುಖ ಮರೆಯಾಗುತ್ತದೆ ಎಂಬುದನ್ನು ನಾನಂತೂ ಒಪ್ಪುವುದಿಲ್ಲ. ಅಲಂಕಾರ ಹಲವರಿಗೆ ಆತ್ಮವಿಶ್ವಾಸ ಪಡೆವ ಸಾಧನವಾದರೆ ಇನ್ನು ಕೆಲವರ ವ್ಯಕ್ತಿತ್ವದಲ್ಲಿ ಅದು ಅವರ ಜೀವನಪ್ರೀತಿಯನ್ನು ಪ್ರತಿಫಲಿಸುತ್ತದೆ. ತಮ್ಮ ನೈಜ ಮುಖವನ್ನು ಇನ್ನೊಬ್ಬರಿಗೆ ತುಸುವೂ ಅಲಂಕಾರವಿಲ್ಲದೇ ತೋರಿಸಬೇಕೋ ಬೇಡವೋ ಎನ್ನುವುದು ಅವರವರ ವಯಕ್ತಿಕ ಆಯ್ಕೆಗೆ ಬಿಟ್ಟಿದ್ದು. ಅಲಂಕರಿಸಿಕೊಳ್ಳುವ ಒಂದೇ ಮಾನದಂಡದ ಮೇಲೆ ಯಾರ ಜಾಣ್ಮೆಯೂ ನಿರ್ಧಾರವಾಗುವುದಿಲ್ಲ ಅನ್ನುವುದಂತೂ ದಿಟ.

ಫ್ಯಾಷನ್ ಲೋಕದಲ್ಲಿ "ನ್ಯೂಡ್ ಮೇಕಪ್" ಎಂಬುದೊಂದು ಪರಿಕಲ್ಪನೆ ಮೈದಾಳಿದೆ. ಅತ್ಯಂತ ಕಡಿಮೆ ಪ್ರಸಾದನಗಳನ್ನು ಬಳಸಿ ಒಂಚೂರೂ ಗಾಢ ವರ್ಣಗಳನ್ನು ಬಳಸದೇ ವ್ಯಕ್ತಿಯ ಮುಖ ಸಹಜವಾಗಿಯೇ ಕಾಣುವಂತೆ ಅಲಂಕರಿಸುವುದೇ ಈ ನ್ಯೂಡ್ ಮೇಕಪ್. ಅಲಂಕಾರವಿಲ್ಲದಿರುವುದೇ ಒಂದು ಫ್ಯಾಷನ್ ಅನ್ನುವುದೇ ಇದರ ಮೂಲತತ್ವ. ಆ ಕಾರಣಕ್ಕಾಗಿಯೇ ಇತ್ತೀಚಿನ ದಿನಗಳಲ್ಲಿ ಈ ಹೊಸ ಪರಿಕಲ್ಪನೆಯನ್ನು ಅಲಂಕಾರ ಪ್ರಿಯರು ಕೊಂಡಾಡುತ್ತಿರುವುದು ಆಶ್ಚರ್ಯವೇನಲ್ಲ.

"ಜೀವನಪ್ರೀತಿಯೇ ಸೌಂದರ್ಯ ಪಾಲನೆಯ ಬಹು ಮುಖ್ಯ ಪ್ರಸಾದನ" ಎಂದ ಹತ್ತೊಂಭತ್ತನೆಯ ಶತಮಾನದ ಪ್ರಸಿದ್ಧ ನಟಿ ರೋಸಲಿಂಡ್ ರಸಲ್‌ಳ ಮಾತಿನಲ್ಲಿ ಹುರುಳಿದೆ ಅಂತಲೇ ನನ್ನ ಅನಿಸಿಕೆ. ಅಲ್ಲದೇ ನಮ್ಮ ಬಾಹ್ಯ ದೇಹವನ್ನು ಎಷ್ಟೇ ಜಾಗರೂಕತೆಯಿಂದ ಅಲಂಕರಿಸಿಕೊಂಡಿದ್ದರೂ, ತುಟಿಯಂಚಿನಲ್ಲಿ ಅಂತರಂಗದ ನಗುವೊಂದನ್ನು ಧರಿಸದಿದ್ದರೆ ಎಂಥ ಅಲಂಕಾರವೂ ಸಪ್ಪೆಯೆನಿಸಿಬಿಡುವುದಂತೂ ಸತ್ಯ.

# ಹಬ್ಬಗಳನ್ನು ಏಕೆ ಮತ್ತು ಹೇಗೆ ಆಚರಿಸಬೇಕು?

ಡಾ ಎಂ. ಜಿ. ಪ್ರಸಾದ್



ಎಲ್ಲಾ ಮನುಷ್ಯರಿಗೂ ಸದಾ ಸಂತೋಷದಿಂದ ಇರಬೇಕು ಎನ್ನುವ ಧ್ಯೇಯ ಸಹಜ. ಇಂತಹ ಸಂತೋಷವಾಗಿರುವ ಧ್ಯೇಯವನ್ನು ಸಾಧಿಸುವುದಕ್ಕಾಗಿಯೇ ಸನಾತನ ಧರ್ಮದ ಋಷಿಗಳು ದೇಹ, ಮನಸ್ಸು ಹಾಗೂ ಜೀವಾತ್ಮಗಳ ಸಂಬಂಧ ಹಾಗೂ ಜೀವಾತ್ಮ ಮತ್ತು ಪರಮಾತ್ಮನ ಒಂದಾಗುವಿಕೆ ಇವುಗಳ ಬಗ್ಗೆ ಅವಿರತವಾಗಿ ಸಂಶೋಧನೆ ನಡೆಸಿ ಮತ್ತು ಸಾಧನೆ ಮಾಡಿ ಸಫಲರಾಗಿ ಧರ್ಮ, ಕರ್ಮ ಹಾಗೂ ಯೋಗಗಳ ಬಗ್ಗೆ ಸಾಹಿತ್ಯವನ್ನು ನೀಡಿದ್ದಾರೆ. ಈ ಸಾಹಿತ್ಯದಲ್ಲಿ ತತ್ವಗಳು ಹಾಗೂ ಅದರ ಆಚರಣೆಗಳು ಮತ್ತು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ವಿಶಾಲವಾಗಿ ವಿವರಿಸಿದ್ದಾರೆ. ಈ ಪುರುಷಾರ್ಥಗಳನ್ನು ಜೀವನದಲ್ಲಿ ಸದಾ ಧ್ಯೇಯವಾಗಿರಿಸಿ ದಿನನಿತ್ಯದ ಜೀವನವನ್ನು ನಡೆಸಿದಾಗ ಸದಾ ಆನಂದ ಹಾಗೂ ಶಾಂತಿಯ ಸ್ಥಿತಿಯನ್ನು ಪಡೆಯುವುದು ಖಂಡಿತವಾಗಿ ಸಾಧ್ಯ ಎಂದು ವಿಶ್ವದ ಇತಿಹಾಸದಲ್ಲಿ ಅನೇಕಾನೇಕ ಮಹಾತ್ಮರುಗಳು ತೋರಿಸಿದ್ದಾರೆ. ಇಂತಹ ಸಾಧನಾಮಾರ್ಗದಲ್ಲಿ ಆನಂದ ಹಾಗೂ ಉತ್ಸಾಹವನ್ನು ನೀಡುವುದೇ ಹಬ್ಬಗಳ ಆಚರಣೆಗಳು.

### ಹಬ್ಬ ಎಂದರೇನು?

ಹಬ್ಬ ಎನ್ನುವ ಪದವೇ ಸನಾತನ ಧರ್ಮದ ಸಂಸ್ಕೃತಿಯಲ್ಲಿ ಅನೇಕ ಅರ್ಥಗಳನ್ನು ಒಳಗೊಂಡಿದೆ. ಈ ಸಂಕ್ಷಿಪ್ತ ಲೇಖನದಲ್ಲಿ ಅನೇಕ ಅರ್ಥಗಳನ್ನು ಸಂಕ್ಷೇಪವಾಗಿ ನೀಡಲಾಗಿದೆ. ಇನ್ನು ಹೆಚ್ಚಿನ ವಿವರಗಳನ್ನು ಶ್ರೀ ಶ್ರೀ ರಂಗಪ್ರಿಯ ಸ್ವಾಮಿಗಳಿಂದ ರಚಿತವಾದ ಭಾರತೀಯ ಹಬ್ಬ–ಹರಿದಿನಗಳು ಎಂಬ ಗ್ರಂಥದಲ್ಲಿ ನೋಡಬಹುದು. ಈ ಗ್ರಂಥವನ್ನು ಉಚಿತವಾಗಿ e–ಪುಸ್ತಕದ ರೂಪಿನಲ್ಲಿ www.ayvm.in ಎಂಬ ವೆಬ್ ಸೈಟ್ ನಲ್ಲಿ ಪಡೆಯಬಹುದು.

ಹಬ್ಬ ಎನ್ನುವುದಕ್ಕೆ ಉತ್ಸವ ಮತ್ತು ಪರ್ವ ಎಂಬ ಎರಡು ಅರ್ಥಗಳನ್ನು ಮಾತ್ರ ವಿಚಾರ ಮಾಡೋಣ. ಉತ್ಸವ ಎಂದರೆ "ಹರ್ಷವನ್ನು ಉಂಟು ಮಾಡುವ ಕಾರ್ಯ". ಇಲ್ಲಿ ಹರ್ಷ ಅಥವಾ ಸಂತೋಷ ಎಂದರೆ ಕೇವಲ ದೇಹ ಮತ್ತು ಇಂದ್ರಿಯಗಳಿಗೆ ಮಾತ್ರ ಎಂದಲ್ಲ. ಮನಸ್ಸು ಮತ್ತು ಬುದ್ಧಿಯನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದು ಪರಮಾತ್ಮನ ಸ್ಥಾನದಲ್ಲಿ ನಿಲ್ಲಿಸುವುದು ಎಂದೂ ಆಗುತ್ತದೆ. ಉತ್ಸವ ಎಂದರೆ ಊರ್ಧ್ವಮುಖವಾಗಿ ಕರೆದೊಯ್ಯುವುದು ಎಂದಾಗುತ್ತದೆ. ಹಬ್ಬಗಳನ್ನು ಆಚರಿಸಿದಾಗ ನಮ್ಮ ಮನಸ್ಸು ಉನ್ನತಸ್ಥಾನಕ್ಕೆ ಹೋಗಿ ನಿಲ್ಲಬೇಕು. ಇನ್ನು ಹಬ್ಬಕ್ಕೆ ಪರ್ವ ಎನ್ನುವ ಅರ್ಥವಿದೆ. ಪರ್ವ ಎಂದರೆ "ಕಾಲಗಳ ಸಂಧಿಸ್ಥಾನ". ಹಬ್ಬಗಳನ್ನು ವಿಶೇಷವಾದ ಕಾಲಗಳಲ್ಲಿ ಆಚರಣೆ ಮಾಡುತ್ತೇವೆ. ಹಾಗೆಯೇ ಪರ್ವ ಎನ್ನುವ ಶಬ್ದಕ್ಕೆ ಇನ್ನೊಂದು ಮುಖ್ಯವಾದ ಅರ್ಥ "ಗಿಣ್ಣು, ಗ್ರಂಥಿ, ಗಿಡ ಮರ ಬಳ್ಳಿ ಮತ್ತು ಬೆರಳುಗಳಲ್ಲಿರುವ ಒಂದು ಮುಖ್ಯವಾದ ಭಾಗ". ಅಷ್ಟೇ ಅಲ್ಲದೇ "ಹಬ್ಬ" ಎನ್ನುವ ಪದವೇ ಸಂಸ್ಕೃತ ಪದವಾದ "ಪರ್ವ" ಎಂಬುದರ ರೂಪಾಂತರವೇ ಆಗಿದೆ. "ಪರ್ವ" ಎಂಬ ಪದ "ಪರ್ಬ" ಎಂದಾಗಿ ಕೊನೆಗೆ "ಹಬ್ಬ" ಎಂದಾಗಿದೆ.

ಎಲ್ಲರಿಗೂ ತಿಳಿದಂತೆ ನಮ್ಮ ಜೀವನದಲ್ಲಿ ಕಾಲದ ಮಹತ್ವ ಅತಿ ಮುಖ್ಯ ಪಾತ್ರವನ್ನು ವಹಿಸಿದೆ. ಆದ್ದರಿಂದಲೇ ಪರ್ವಕಾಲ ಅಥವಾ ಹಬ್ಬಗಳ ಆಚರಣೆಯ ಕಾಲ ಕಬ್ಬಿನ ಜಲ್ಲೆಯಲ್ಲಿನ ಗಿಣ್ಣುಗಳಂತೆ ಎಂದು ಹೇಳಬಹುದು. ಕಾಲವನ್ನೇ ಪರಮಾತ್ಮನ ಶರೀರದಂತೆ ಎಂದೂ ಹೇಳಿದೆ. ಕರ್ನಾಟಕದ ಮಹಾಯೋಗಿ ಹಾಗೂ ಜ್ಞಾನಿಗಳಾದ ಶ್ರೀರಂಗ ಸದ್ಗುರು ಹೇಳಿದಂತೆ "ತನ್ನ ಕಾಲರೂಪವಾದ ಶರೀರದಲ್ಲಿ ಭಗವಂತನು ಗೊತ್ತಾದ ಸ್ಥಾನಗಳಲ್ಲಿ ಜೀವಿಗಳಿಗೆ ಅವುಗಳ ಉದ್ಧಾರಕ್ಕಾಗಿ ಒದಗಿಸಿಕೊಡುವ ಸೌಲಭ್ಯಗಳು ಪರ್ವಗಳು". ಆದ್ದರಿಂದ ಹಬ್ಬ ಎಂದರೆ ನಮ್ಮ ಮನಸ್ಸನ್ನು ನಿಜವಾದ ಸಂತೋಷ ಹಾಗೂ ಶಾಂತಿಯನ್ನು ನೀಡುವ ಸ್ಥಾನಕ್ಕೆ ಕರೆದೊಯ್ಯುವ ಸಾಧನ ಎಂದಾಯಿತು.

### ಹಬ್ಬಗಳನ್ನು ಏಕೆ ಆಚರಿಸಬೇಕು?

ಹಬ್ಬಗಳನ್ನು ಆಚರಿಸಿವುದರಿಂದ ಕುಟುಂಬದಲ್ಲಿ ಎಲ್ಲರಿಗೂ ಸಂತೋಷ ಸಿಗುತ್ತದೆ. ಆದ್ದರಿಂದ ಹಬ್ಬವನ್ನು ಆಚರಿಸಬೇಕು. ನಮ್ಮ ಸನಾತನ ಧರ್ಮದ ಯಾವುದೇ ಒಂದು ಹಬ್ಬವನ್ನು ನಾವು ವಿಚಾರ ಮಾಡಿದಾಗ ನಾಲ್ಕು ಭಾಗಗಳ ಅನುಭವವಾಗುತ್ತದೆ. ಮೊದಲನೆಯದಾಗಿ ಆಧ್ಯಾತ್ಮಿಕ ಭಾಗ, ಎರಡನೆಯದಾಗಿ ತಾತ್ವಿಕ ಭಾಗ, ಮೂರನೆಯದಾಗಿ ಸಾಂಪ್ರದಾಯಿಕ ಭಾಗ ಹಾಗೂ ನಾಲ್ಕನೆಯದಾಗಿ ಸಾಂಸ್ಕೃತಿಕ ಭಾಗ. ಆಧ್ಯಾತ್ಮಿಕ ಭಾಗದಲ್ಲಿ ಹಬ್ಬವು ಪ್ರತಿಯೊಬ್ಬರಲ್ಲಿಯೂ ಆನಂದಾನುಭವವನ್ನು ಉಂಟುಮಾಡುತ್ತದೆ. ಏಕೆಂದರೆ ಹಬ್ಬದಲ್ಲಿ ಹರುಷವನ್ನು ನೀಡುವ ಶಕ್ತಿಯಿದೆ. ಆ ಶಕ್ತಿಯೇ ಕಾಲದ ಶಕ್ತಿಯು. ಪ್ರಪಂಚದ ಪ್ರತಿಯೊಂದು ಸಮಾಜದಲ್ಲಿಯೂ ಇರುವ ಜನಕ್ಕೆ ಅಲ್ಲಿ ಆಚರಿಸುವ ಹಬ್ಬಗಳ ಶಕ್ತಿಯ ಅನುಭವ ಉಂಟಾಗುತ್ತದೆ. ಈ ಶಕ್ತಿ ಬರುವುದಕ್ಕೆ ಎರಡನೆಯದಾದ ತಾತ್ವಿಕ ಭಾಗ ಕಾರಣ

ಎನ್ನಬಹುದು ಏಕೆಂದರೆ ಹಬ್ಬದ ತತ್ವವೇ ಒಳ್ಳೆಯ ಶಕ್ತಿಯು ಕೆಟ್ಟ ಶಕ್ತಿಯ ಮೇಲೆ ಯುದ್ಧ ಮಾಡಿ ಕೊನೆಗೆ ಒಳ್ಳೆಯ ಶಕ್ತಿಗೆ ಜಯವಾಗುವುದು. ನಮಗೆ ತಿಳಿದಂತೆ ಯಾವಾಗಲೂ ಒಳ್ಳೆಯ ಶಕ್ತಿ ಹಾಗೂ ಕೆಟ್ಟ ಶಕ್ತಿಗಳು ಯುದ್ಧ ಮಾಡುತ್ತಿರುತ್ತದೆ. ಒಳ್ಳೆಯ ಶಕ್ತಿ ಗೆದ್ದಾಗ ಆನಂದ ಉಂಟಾಗುತ್ತದೆ. ಈ ತಾತ್ವಿಕ ಭಾಗಕ್ಕೆ ಆಧಾರವೇ ಮೂರನೆಯದಾದ ಸಾಂಪ್ರದಾಯಿಕ ಭಾಗ. ಈ ಸಾಂಪ್ರದಾಯಿಕ ಭಾಗದಲ್ಲಿ ವಿಶೇಷವಾದ ಕಥೆಯೇ ಆಧಾರವಾಗಿರುತ್ತದೆ. ಸನಾತನ ಧರ್ಮಕ್ಕೆ (ಅಥವಾ ಹಿಂದೂ ಧರ್ಮ) ಸಂಬಂಧಿಸಿದಂತೆ ನೋಡಿದರೆ ಇತಿಹಾಸಗಳಾದ ರಾಮಾಯಣ ಮತ್ತು ಮಹಾಭಾರತ ಅಥವಾ ಪುರಾಣಗಳಲ್ಲಿರುತ್ತದೆ. ಪರಮಾತ್ಮನ ಅವತಾರಗಳಾದ ಶ್ರೀರಾಮ ಮತ್ತು ಶ್ರೀ ಕೃಷ್ಣನ ಕಥೆಗಳಾದರೆ ಅದರ ಅನುಸಂಧಾನ ಹಾಗೂ ಶ್ರೀರಾಮ ಅಥವಾ ಶ್ರೀಕೃಷ್ಣನ ಪೂಜೆಯು ಹಬ್ಬದಲ್ಲಿ ಸೇರಿರುತ್ತದೆ. ನಂತರ ನಾಲ್ಕನೆಯದಾದ ಸಾಂಸ್ಕೃತಿಕ ಭಾಗವನ್ನು ನೋಡಿದರೆ ಪ್ರತಿಯೊಂದು ಹಬ್ಬಕ್ಕೂ ವಿಶೇಷವಾದ ಸಾಂಸ್ಕೃತಿಕ ಆಚರಣೆಯಿರುತ್ತದೆ. ಉದಾಹರಣೆಗೆ ನವರಾತ್ರಿ ಹಬ್ಬದಲ್ಲಿ ಗೊಂಬೆ ಇಡುವುದು ಮತ್ತು ಪರಸ್ಪರ ಒಂದು ಕುಟುಂಬದವರು ಮತ್ತೊಂದು ಕುಟುಂಬದವರ ಮನೆಗೆ ಹೋಗಿನೋಡುವುದು ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತದೆ.

ನಾವು ಆಚರಿಸುವ ಪ್ರತಿ ಹಬ್ಬದಲ್ಲಿಯೂ ಈ ನಾಲ್ಕು ಭಾಗಗಳನ್ನು ನೋಡಬಹುದು. ಈ ನಾಲ್ಕು ಭಾಗದಲ್ಲೂ ಕುಟುಂಬದ ಎಲ್ಲ ಸದಸ್ಯರಿಗೂ ಸಂತೋಷ ನೀಡುತ್ತದೆ. ಹಾಗಯೇ ಸಮಾಜದಲ್ಲಿಯೂ ಸೌಹಾರ್ದತೆ ಹಾಗು ಸಮನ್ವಯ ತರುತ್ತದೆ. ಪ್ರತಿ ಹಬ್ಬವು ಸರ್ವತೋಮುಖವಾದ ಪ್ರಭಾವ ಬೀರುತ್ತದೆ. ಆದ್ದರಿಂದ ಎಲ್ಲರು ಯಾವ ದೇಶದಲ್ಲಿಯೇ ಇರಲಿ ಹಬ್ಬಗಳನ್ನು ಆಚರಿಸಬೇಕು.

### ಹಬ್ಬಗಳನ್ನು ಹೇಗೆ ಆಚರಿಸಬೇಕು?

ಹಬ್ಬಗಳನ್ನು ಆಚರಿಸುವಾಗ ನಾವು ಮೇಲೆ ಹೇಳಿದ ನಾಲ್ಕು ಭಾಗಗಳಾದ ಆಧ್ಯಾತ್ಮಿಕತೆ, ತಾತ್ವಿಕತೆ, ಸಂಪ್ರದಾಯ ಹಾಗೂ ಸಂಸ್ಕೃತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಆಚರಿಸಬೇಕು. ಹಬ್ಬಗಳನ್ನು ಕೇವಲ ಊಟ, ಬಟ್ಟೆ, ಇತ್ಯಾದಿಯಾಗಿ ದೇಹದ ಮಟ್ಟದಲ್ಲಿಯೇ ಆಚರಿಸಿದರೆ ನಮಗೆ ಹಬ್ಬದ ಪೂರ್ಣವಾದ ಅನುಭವ ಆಗುವುದಿಲ್ಲ. ಪ್ರತಿಯೊಂದು ಹಬ್ಬದಲ್ಲಿಯೂ ನಾವು ಮನಸ್ಸು ಮತ್ತು ಬುದ್ಧಿಯನ್ನು ಉನ್ನತವಾದ ಆಧ್ಯಾತ್ಮಿಕ ಮಟ್ಟಕ್ಕೆ ಕರೆದೊಯ್ಯಬೇಕು. ಆ ಹಬ್ಬಕ್ಕೆ ಅನ್ವಯವಾಗುವ ಕಥೆಯ ಒಳ ಅರ್ಥವನ್ನು ಹಾಗು ತತ್ವವನ್ನು ತಿಳಿದುಕೊಳ್ಳಬೇಕು. ಮೊದಲು ನಾವು ತಿಳಿದುಕೊಂಡು ಮತ್ತೆ ಕುಟುಂಬದಲ್ಲಿ ಎಲ್ಲರಿಗೂ ತಿಳಿಸಬೇಕು. ಅದರಲ್ಲಿಯೂ ವಿಶೇಷವಾಗಿ ಮಕ್ಕಳಿಗೆ, ಯುವಕ, ಯುವತಿಯರಿಗೆ ಹೇಳಬೇಕು. ಪ್ರತಿಯೊಂದು ಹಬ್ಬವು ನಮ್ಮನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರೆಯುವಂತೆ ಮಾಡಬೇಕು. ಹಬ್ಬವು ನಮಗೆ ಕೇವಲ ಭೋಗ ಆಗಬಾರದು. ಹಬ್ಬವು ನಮಗೆ ಯೋಗ ಸಾಧನೆ ಆಗಬೇಕು. ನಾವು ಹೇಗೆ ಹಬ್ಬವನ್ನು ಆಚರಿಸಬೇಕೆಂದರೆ ನಮ್ಮ ಕುಟುಂಬದವರೆಲ್ಲರೂ ಯೋಗ ಸಾಧನಾ ಮಾರ್ಗ ಮುಂದುವರಿದು ಆನಂದ ಪಡೆಯಬೇಕು. ಇಂತಹ ಆಚರಣೆಗೆ ಪರಮಾತ್ಮನು ಬುದ್ಧಿ ಹಾಗು ಶಕ್ತಿ ನೀಡಲಿ ಎಂದು ಪ್ರಾರ್ಥಿಸೋಣ.●

ಆಕರಗ್ರಂಥ – "ಭಾರತೀಯರ ಹಬ್ಬಹರಿದಿನಗಳು" – ಶ್ರೀ ಶ್ರೀ ರಂಗಪ್ರಿಯ ಸ್ವಾಮಿಗಳು, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಬೆಂಗಳೂರು.
www.ayvm.in (free ebook)

## ಕವಿತೆ

ಲಕ್ಷ್ಮಿ ಕೋಲಾಲ್



ಓ ಬಾಲ ವಿಘ್ನೇಶ್ವರ
ನೀ ಎಲ್ಲ ಅಜ್ಞಾನವ ಮರೆಸು
ಸದ್ಬುದ್ಧಿಯನ್ನು ನೀಡಿ
ಬಾಳುವಾ ದಾರಿ ಇನ್ನೊಮ್ಮೆ ತೋರಿಸು...!

ಇರುವವರಿಗೆ ಇರದಾತನಿಗೆ
ಕಲಿತವರಿಗೆ ಮರೆತಿರುವನಿಗೆ
ನಿನ್ನ ಕೃಪೆ ನೀಡಿ ಎಂದೆಂದೂ ಹರಸು..!

ಸಂಕಟ ಹರಣ ಸುಲಭಾ ನಿನಗೆ ಸುಮುಖನೆ
ಭಕ್ತಿಯಿಂದ ಬೇಡುವೆ ಓ ಕರುಣಾ ಸಮುದ್ರನೇ.
ಧನ್ಯ ಇಂದು ನಾ ನಿನ್ನ ಪೂಜಿಸುತಲಿ
ಧನ ಧಾನ್ಯ ಸಂಪತ್ತಿಗೆ ನಿನ್ನಾ ಕರುಣೆಯಿರಲಿ
ಜಯ ಜಯವೇ ಇರಲಿ ಜೀವನದಾ ಹಾದಿಯಲಿ !!





# ಶಾಂತವ್ವಕ್ಕನ ಹುಟ್ಟುಹಬ್ಬ

ಸತೀಶ ಹೊಸನಗರ



ಇನ್ನೇನು ಶ್ರಾವಣ ಮಾಸ ಹತ್ರ ಬಂತು ಅಂತ ಊರಿನ ಹೆಂಗಳೆಯರೆಲ್ಲ ಮನೆ ಜಗಲು, ಅಂಗಳ ಸಾರ್ಸಿ ಶುಭ್ರವಾಗಿಟ್ಟುಕೊಂಡಿದ್ರು. ಎವರೆಡಿ ಶೆಲ್ಲಿನ ಒಳಗಿನಾಗಿರೋ ಕರ್ಗಿನ ಪೌಡರ್ ಹಾಕಿ ತಿಕ್ಕಿದ್ರಿಂದ್ಲೋ ಏನೋ ಕೆಲವರ ಮನಿ ಮುಂದಿನ ಅಂಗಳ ಟಾರ್ ರಸ್ತೆಗಿಂತ ಕಪ್ಪಗಿತ್ತು ನೋಡ್ರಿ. ಇತ್ಲಾಗೆ ಶಾಲೇಗ್ ಹೋಗೋ ಮಕ್ಕು ಸದ್ಯ ಛಳೀ ಹೊಂಟೋಯ್ತು ಅಂತ ತಮ್ಮ ತಮ್ಮ ಚಿಕ್ಕ ಚಿಕ್ಕ ಯೂನೀಫಾರ್ಮಿನೊಳಗೆ ತಮ್ಮನ್ನ ತುರುಕಿಕೊಂಡಿದ್ರು. ಮೇಲ್ನಿಂದ ಕೊರೆಯೋ ಮಳೆಗೋ ಬಿಸಿಲಿಗೋ ರಕ್ಷಣೆ ಇರ್ಲೀ ಅಂತ ಹೆಂಗಳೆಯರಲ್ಲಿ ಕೆಲವ್ರು ಆಶ್ಚರ್ಯ ಸೂಚಕ ಮಾರ್ಕಿನಂಗಿರೋ ಛತ್ರಿ ಹಿಡಕೊಂಡು ಓಡಾಡ್ತಿದ್ರು. ಕೆಲವೊಮ್ಮೆ ಪುಷ್ಯಾ ಮಳೆಯಿಂದ ತಪ್ಪಿಸಿಕೊಂಡ್ರೂ ಆರ್ದ್ರಿ ಮಳೆ ಬಿಡ್ತಿಲ್ಲಾ ಅನ್ನೋ ಹಂಗೆ ಜಿಟಿಪಿಟಿ ಮಳೆ ಎಷ್ಟೊತ್ತಿಗೆ ಬರುತ್ತೆ ಅಂತ ಹೇಳೋಕಾಗ್ತಿದ್ದು, ಅದರ ಪರಿಣಾಮ ಅನ್ನೋ ಹಂಗೆ ಕೆಂಪನೆ ಕಿಚಿಪಿಚಿ ಕೆಸರು ಕಾಲು–ಪ್ಯಾಂಟುಗಳಿಗೆ ಅಂಟೋದು ಗ್ಯಾರಂಟಿ ಆಗಿತ್ತು.

ಇದೇ ಹೊತ್ನಲ್ಲಿ ಊರ್ನಾಗಿರೋ ಪ್ರಾಂಬ್ರ ಓಣಿಯಲ್ಲಿ ಏನೋ ಒಂಥರ ಸಂಭ್ರಮ. ಅದೇ ಮಗ್ಗಲ ಮನಿ ಶಾಂತವ್ವಕ್ಕ ಇದಾಳಲ್ಲ ಅಕಿ ನೂರಾ ನಾಕನೇ ವರ್ಷಕ್ಕೆ ಕಾಲಿಟ್ಟ ಸಂಬಂಧ ಊರ್ನಾಗಿನ ಮುಖಂಡ್ರು ಎಲ್ಲಾ ಸೇರಿ ಹುಟ್ಟಿದ ಹಬ್ಬಾನ ದೊಡ್ಡದಾಗಿ ಆಚರ್ಸಬೇಕು ಅಂತ ಒಂದು ಕಾರ್ಯಕ್ರಮ ಹಮ್ಮಿಕೊಂಡಾರಂತ. ಭಾನುವಾರ ಮಟಮಟ ಮಧ್ಯಾಹ್ನ ಎರಡು ಘಂಟೆಗೆ ಶುರುವಾಗೋ ಕಾರ್ಯಕ್ರಮ ಇನ್ನೂ ಸ್ಥಳೀಯ ಎಮ್ಮೆಲ್ಲೆ ಬರ್ಲಿ ಅಂತ ಕಾಯ್ಕೊಂಡ್ ಕುಂತು ಘಂಟೆ ಮೂರ್ ಆದ್ರೂ ಶುರೂ ಆಗೋ ಭಾಗ್ಯ ಬಂದಂಗಿರ್ಲಿಲ್ಲ. ಆದ್ರೂ ರಗಡು ಮಂದಿ ಸೇರಿದ್ರು. ಎಲ್ಲೆಲ್ಲಿಂದಾನೋ ಬಂದಿದ್ರು. ಅವರಾಗೆ ಬಾಳ ಮುಖ್ಯ ಅಂದ್ರ, ಶಾಂತವಕ್ಕನ್ನ ಗಿರಿಮಗಳು ಮೋಹಿನಿ – ದೂರ ದೇಶ ಅಮೇರಿಕಾದಾಗ ಅದೇನೋ ಕಾಯ್ಕ ಮಾಡ್ಕಂಡ್ರು ಅಲ್ಲೇ ಇದಾರಂತೆ, ಅದ್ರೂ ಅತ್ಯಂತ ಮುತುವರ್ಜಿ ವಹಿಸಿ ಶಾಂತವಕ್ಕನ್ನ ಬರ್ತ್‌ಡೇ ಆಚರಿಸಾಕ ಹದಿಮೂರು ಸಾವಿರ ಕಿಲೋಮೀಟರ್ ದೂರದಿಂದ ಬಂದಿರೋದು ನಮ್ಮೂರಿಗೆ ಹೆಚ್ಚೇ ಬಿಡ್ರಿ. ಆದ್ರೂ ಅವನವ್ವನ, ಇದೇ ತಾಲೂಕಿನಾಗೆ ಬಿದ್ದು ಎದ್ದು ಸಾಯೋ ಈ ಎಮ್ಮೆಲ್ಲೆ ಮಂದಿಗೆ ಏನ್ ಅಂತಾದ್ ಬಂದೀತು? ಇನ್ನೂ ಸುದ್ದೀನೇ ಇಲ್ಲಲ!

ಹಂಗೂ ಮಾಡಿ ಶಾಂತವ್ವಕ್ಕನ ವಯಸ್ಸು ಇಷ್ಟೇ ಹಿಂಗೇ ಎಂದು ಯಾರೂ ಬರ್ದಿಟ್ಟಂಗಿದ್ದಿದ್ದು ಯಾರಿಗೂ ನೆನಪಿಲ್ಲ ನೋಡ್ರಿ. ಅದರಾಗೂ ಒಂದ್ ಸರ್ತಿ ನೂರರ ಹತ್ರಾ ಹೋದ್ರಿ ಅಂದ್ರ ನಿಮ್ಮ ಜೀವಮಾನದಾಗೆ ಒಂದ್ ಹೋಗಿರೋ ಮುಕ್ಕಾಲ್ ಜನ ಆಗ್ಲೇ ಟಿಕೇಟ್ ತಗೊಂಡಂಗೇ ಲೆಕ್ಕ! ಅದ್ರಾಗೂ ನೂರ್ ವರ್ಷದ ಹಿಂದೇ ಜಾತ್ಕಾ ಪಾತ್ಕಾ ಬರೀತಿದ್ರೋ ಏನೋ ಆದ್ರೂ, ಜನನಪತ್ರಿಕೆ ಮರಣ ಪತ್ರಿಕೆ ಅಂಥಾ ಯಾರೂ ಪ್ರಿಂಟ್ ಹಾಕಿದ್ದು ನಾನಂತೂ ಕಂಡಿಲ್ಲ. ಅದೂ ಹೋಗೀ ಹೋಗಿ ಬ್ರಿಟೀಷ್ ಸರಕಾರದಾಗ ಹುಟ್ಟಿರೋ ಮುದುಕಿ ಒಂಥರಾ ಬ್ರಿಟೀಷರ ಹಂಗಾ ಗರ್ವದಾಕಿ ಬಿಡ್ರಿ. ಶಾಂತವ್ವಕ್ಕ ಈಗ್ಲೇ ಇಷ್ಟು ಉರೀತಾಳೆ, ಆಗ ಹೆಂಗಿದ್ಲೋ ಅಂತ ಕೆಲವು ಹೆಣ್ ಮಕ್ಳು ಕೈ ಮುರ್ದು ಲಟಿಗಿ ತಗೊಂಡಿದ್ದಂತೂ ನಿಜ. ಒಂದ್ ಹತ್ ವರ್ಷದ ಹಿಂದಿನ್ ವರೆಗೂ ಈ ಮುದುಕಿ ಕಡಿಮೀ ಏನ್ ಇರ್ಲಿಲ್ಲ. ದಿನಾ ಅಗಸೀ ಬಾಗ್ಲು ಮುಟಾ ನಡ್ದು ಬಾವೀ ನೀರ್ ಸೇದಿ ತರೋದೇನೋ, ಬಾಗ್ಲೂ ಬಳ್ಳು, ರಂಗೋಲಿ ಹಾಕಿದ್ದಷ್ಟೇ ಅಲ್ದೇ, ಒಂದೇ ಒಂಚೂರು ಬಿಡದೇ ದೊಡ್ಡ ಹಿತ್ಲು ಗುಡುಸ್ತಿತ್ ನೋಡ್ರಿ ಈ ಮುದುಕಿ. ದರ್ಲೆ ತೆಗೆದು ಒಲೀ ಮ್ಯಾಲೆ ದನಗಳಿಗೆ ಬಾಯಾರು ಬಿಸಿಮಾಡಿ ಕೊಟ್ಟು, ಕೊಟಗಿ ಶುದ್ಧಾ ಮಾಡಿ ಹಾಲ್ ಕರಕಂಡ್ ಬಂದು ಸುರ್ ಅಂತಾ ಒಂದು ಲೋಟಾ ಕಾಫೀ ಹೀರೋದ್ರೊಳಗೆ ಹತ್ತ್ ಘಂಟೆ ಆಗಿರತ್ತು. ನಾವ್ ಇವತ್ತಿನ ದಿನಾ ವಾರಕ್ಕ ನಲವತ್ತು ಘಂಟಿ ಅಂತ ಏನ್ ಕೆಲ್ಸಾ ಮಾಡ್ತೀವಿ, ಈ ವಮ್ಮ, ಭಾನುವಾರದಿಂದ ಮಂಗಳವಾರದೊಳಗೇ ನಲವತ್ತೇನು ಐವತ್ತು ಘಂಟಿ ದುಡಿಯೋದ್ ನೋಡ್ರಿ. ಜಿಮ್ಮು–ಗಿಮ್ಮು ಅಂತ ಒಂದ್ ದಿನ ಅದರ ಬಗ್ಗೆ ಕೇಳದಿದ್ರೂ ಮೈಯಾಗೆ ಒಂದು ಚೂರು ನೆಣಾ ಅಂತ ಇದ್ದಂಗಿಲ್ಲ ನೋಡ್ರಿ, ಯಾವತ್ತಿದ್ರೂ ಒಂದೇ ಒಂದ್ ಲಕ್ಷಣಾ. ಇಂದಿನ ಕಾಲದ ಹೆಣ್ಣ್ ಮಕ್ಳು ಒಂದೊಂದು ಹಡದು ಹತ್ತು ವರ್ಷ ಹಳೇದಾದ ಎಸ್.ಟಿ. ಬಸ್ಸಿನ ಹಂಗೆ ನಡೆಯೋದಾದ್ರ ಈವಮ್ಮ ಎಂಟು ಮಕ್ಳನ್ನ ಹಡದು ಅದೆಷ್ಟೋ ಬಾಣಂತನಾನ ಮಾಡಿ ಇನ್ನೂ ಒಂಚೂರೂ ಬೆನ್ನ್ ಬಾಗಿಸದೇ ನಡೀತಾಳ ಅಂದ್ರ ಅದೊಂದು ದೊಡ್ಡ ಪವಾಡನೇ ಬಿಡ್ರಿ. ಈ ವಮ್ಮನ ಗಂಡಾ ಅದ್ಯಾವಾಗ ಟಿಕೇಟ್ ತೆಗೆಂಡು ಹೋದನೋ ನನಗೆ ಗೊತ್ತಿಲ್ಲಾ, ಅದ್ರೂ ಈ ವಮ್ಮ ಮರೆ–ಮೈಲಿಗೆ–ಮಡಿ ಅಂತಾ ಇಡೀ ಊರಿಗೆ ಫೇಮಸ್ಸು ನೋಡ್ರಿ. ಶಾಂತವಕ್ಕನ ಉಪ್ಪಿನಕಾಯಿ, ಹಪ್ಪಳಾ, ಸಂಡಿಗೆ ಅವರ ಸಂಬಂಧಿಕರ ದೆಸೆಯಿಂದ ಎಲ್ಲೆಲ್ಲೋ ಹೋಗ್ತಿತ್ತು. ಆಕಿ ಕೈ ರುಚೀನೇ ಬ್ಯಾರೆ. ಆರು ತಿಂಗಳೇನೇನು, ಆರು ವರ್ಷಾ ಅದ್ರೂ ಮಿಡಿ ಮಾವಿನಕಾಯಿ ಉಪ್ಪಿನಕಾಯಿ ಕೆಡದ್ರ ಇನ್ನೂ ಕಟುಂ ಅನ್ನೋದು ನೋಡ್ರಿ!

ಕೊನೀಗೂ ಎಮ್ಮೆಲ್ಲೆ ಸಾಹೇಬ್ರು ಬಂದ್ರೂ ಅಂತ ಕಾರ್ಯಕ್ರಮ

ಶುರೂ ಆಗೂ ಹಂಗ ಕಾಣಸ್ತು. ಶಾಂತವಕ್ಕನ್ನ ಮನಿ ಮುಂದೆ ನಾಲ್ಕು ಅಡಕೆ ಮರದ ಕಂಬಾ ನೆಟ್ಟು ಒಂದು ಸಣ್ಣ ಚಪ್ರ ಕಟ್ಟಿದ್ರು. ಅದರ ಮ್ಯಾಲೆ ಸ್ವಲ್ಪಾನೂ ಬಿಸಿಲು ಬರದೇ ಇರ್ಲಿ ಅಂತ ತೆಂಗಿನ ಮಡ್ಲು ಹೆಣೆದು ಕಟ್ಟಿದ್ರು. ಮದುವೀ ಮನೆ ಅಷ್ಟು ದೊಡ್ಡ ಚಪ್ರಾ ಅಲ್ದಿದ್ರೂ ಮೂರು ಜನ ಕೂರೋ ಹಂಗ ಅನುಕೂಲ ಮಾಡಿದ್ರು. ಮಧ್ಯ ಶಾಂತವ್ವಕ್ಕ, ಅಕಿ ಬಗಲಿಗೆ ಊರಿನ ಮಹಿಳಾ ಕಲ್ಯಾಣ ಇಲಾಖೆ ಸೂಪರ್‌ವೈಸರ್ರು ಸುಶೀಲಮ್ನೋರು, ಮತ್ತೊಂದು ಕಡೆ ಎಮ್ಮೆಲ್ಲೆ ಮಹಾಂತೇಶಪ್ನೋರು ಕುಂತಿದ್ರು. ನೂರಾ ನಾಲ್ಕು ಮುಟ್ಟಿರೋ ಶಾಂತವಕ್ಕ ತನ್ನ ಬಗಲಿಗೆ ಕುಂತೋರಿಗಿಂತಲೂ ನೆಟ್ಟಗೆ ಬೆನ್ನ ಮಾಡಿ ಕುಂತಿದ್ಲು. ಅವಳು ಉಟ್ಟಿರೋ ಅದೆಷ್ಟೋ ವರ್ಷದಿಂದ ಹಳೇ ಟ್ರಂಕಿನಾಗಿರೋ ಕಂದು ಬಣ್ಣದ ಪಟ್ಟೇ ಸೀರೇ ಇವತ್ತು–ನಿನ್ನೇ ಅಂಗಡಿಯಿಂದ ತಂದ ಹಾಗೆ ಮಡಿಕೇನೂ ಮುರೀದೇ ತನ್ನ ಮೈ ಮೇಲೆ ಗೆರೆಗಳನ್ನ ಹಂಗೇ ಉಳಿಸಿಕೊಂಡಿತ್ತು.

ಊರಿನ ಕಾರ್ಯಕ್ರಮ, ಆದ್ರೆ ಬಂದೋರಿಗೆ ತಿಂಡೀ–ಗಿಂಡೀ ಮಾಡೋರು ಯಾರು? ಅದ್ಯಾವ್ದೋ ಸೊರಬದ ಬೇಕ್ರಿ ಇಂದ ಸುಮಾರು ದೊಡ್ಡ ಕೇಕ್ ತರಸ್ಯಾರಂತ, ಅದು ಬಿಸಲಿಗೆ ಕರಗೀತು ಅಂತ ಇನ್ನೂ ಒಳಗೇ ಇಟ್ಟಿದ್ರು. ಮೈಕೂ ಪೈಕೂ ಏನೂ ಬ್ಯಾಡ, ಸುಮ್ನೇ ದುಡ್ಡು ಖರ್ಚು ಅಂತ ಹಂಗೇ ಸುತ್ಲೂ ಸೇರಿರೋ ಜನ್ರನ್ನ ಕುರುತು ಮೊದಲಿಗೆ ಸುಶೀಲಮ್ನೋರು ಮಾತಾಡಿದ್ರು. ಇವತ್ತಿನ ದಿನಾ ನೂರೇನು ಎಪ್ಪತ್ತು ವರ್ಷ ನೋಡೋ ಮಂದಿ ಭಾಳಾ ಇಲ್ಲ, ಅಂತಾದ್ರಾಗೆ ನಮ್ಮೂರಿನ ಶಾಂತವ್ವಕ್ಕ ನೂರಾ ನಾಕು ಮುಟ್ಟೈತಿ ಅಂದ್ರ ಅದೊಂದು ರಾಜ್ಯದ ವಿದ್ಯಮಾನ ಅಂತ ಭಾಳ ಚೋಲೋ ಭಾಷ್ಣ ಮಾಡಿದ್ರು. ಅವರ ನಂತ್ರ ಮಹಾಂತೇಶಪ್ನೋರು ನಾನು ವಿಧಾನ ಸಭೆ ಕಾರ್ಯಕಲಾಪದಾಗ ಈ ಸಂಬಂಧ ಚರ್ಚೇ ಮಾಡ್ಸಿ, ಶಾಂತವಕ್ಕಂಗ ಒಂದ್ ಅವಾರ್ಡ್ ಕೊಡಸ್ತೀನಿ ಅಂತ ಆಶೋತ್ತರ ಮೂಡಿಸಿ ಆಸೆ ತೋರ್ಸಿದ ಕೂಡ್ಲೇ ಅವರ ಚೇಲಾಗಳೆಲ್ಲ ದೊಡ್ಡದಾಗಿ ಚಪ್ಪಾಳೆ ಹೊಡ್ದಿದ್ದು ನೋಡಿ ನಾವೂ ಹೊಡದ್ವಿ. ಅಮ್ಯಾಲೆ ಶಾಂತವಕ್ಕನ ಮನೆ ಮಂದೀ ಎಲ್ಲ ಬಂದೂ ಅರತೀ ಮಾಡಿದ್ರು. ಅವರ ಮನೇ ಮಂದೀನೇ ಸುಮಾರು ನೂರು ಜನ ಇದ್ದಂಗಿದ್ರು ನೋಡ್ರಿ. ಎಲ್ಲ ಮಕ್ಳೂ, ಮೊಮ್ಮಕ್ಳು, ಮರಿಮಕ್ಳು, ಗಿರಿಮಕ್ಳು ಇವರ್ದ್ರೆಲ್ಲಾ ಲೆಕ್ಕಾ ಹಾಕ್ಕೊಂಡಿರೋರು ಯಾರು? ಕುದ್ದು ಶಾಂತವಕ್ಕಂಗೇ ಇವರೆಲ್ಲ ನೆನಪಿದಾರೋ ಇಲ್ವೋ! ಶಾಂತವ್ವಕ್ಕಾ ನೀನೂ ಒಂದಿಷ್ಟು ಮಾತಾಡು ಅಂದ್ರು. "ನನ್ದೇನೂ ಬ್ಯಾಡಾ, ಎಲ್ಲಾ ಚೆನ್ನಾಗಿರ್ರಿ!" ಅಂತ ಅದ್ರಾಗೂ ಬಿನ್ನಾಣ ತೋರಿಸ್ತು ಮುದುಕಿ.

ಇನ್ನೇನು ಕೇಕ್ ಕಟ್ ಮಾಡೋಣ ಅಂತ ಎಲ್ರೂ ಅಂದ್ರೂ. ಅಷ್ಟ್ರೊಳಗ ಶಾಂತವಕ್ಕನ ಅಮೇರಿಕದಿಂದ ಬಂದ ಗಿರಿಮಗಳು ಮೋಹಿನಿ, ಅದೇನೋ ಇಂಗ್ಲೀಷ್ನಾಗೆ ಅಂದ್ಲು, ಅದರ ಪ್ರಕಾರ ಶಾಂತವಕ್ಕನ್ನೂ ಒತ್ತಾಯ ಮಾಡಿ ಸ್ವಲ್ಪ ಮಾತಾಡಕ್ ಬಿಟ್ರು ನೋಡ್ರಿ. ಶಾಂತವಕ್ಕ ಹೆಚ್ಗೆ ಏನೂ ಹೇಳ್ಲಿಲ್ಲ, "ಎಲ್ರೂ ಸುಖವಾಗಿರ್ರಿ, ಜಗಳಾಪಗಳಾ ಮಾಡಬೇಡ್ರಿ. ಮನಸು ಚೆನ್ನಾಗಿದ್ರೆ ದೇಹ ಚೆನ್ನಾಗಿರ್ತತಿ. ವ್ಯಾಯಾಮಾ ಪಾಯಾಮಾ ಏನೂ ಬ್ಯಾಡ, ನೀವ್ ಏನ್ ತಿಂತೀರಿ, ಎಷ್ಟು ತಿಂತೀರಿ ಮತ್ತ ಯಾವಾಗ ತಿಂತೀರಿ ಅನ್ನೋದರ ಬಗ್ಗೆ ನಿಗಾ ಇರ್ಲಿ" ಅಂದ್ಲು. ಎಲ್ರೂ ಮತ್ತೆ ದೊಡ್ಡ ಚಪ್ಪಾಳೆ ಹೊಡೆದ್ರು. ಮೋಹಿನಿ ತನ್ನ ಅಮ್ಮನ ಹತ್ರ ಅದೇನೋ ಇಂಗ್ಲೀಷಿನಾಗೆ ಅಂದ್ಲು. ಅದನ್ನ ಅವರಮ್ಮ ತರ್ಜುಮೆ ಮಾಡಿ –"ಶಾಂತವಕ್ಕ, ನಿನ್ನ್ ಜೀವನದಾಗೆ ಇದೂವರೆಗೆ ಕಂಡಿರೋ ಮಹಾ ಅವಿಷ್ಕಾರ ಅಂದ್ರೆ ಯಾವ್ದು?" ಅಂತ ದೊಡ್ಡದಾಗಿ ಕೇಳಿದ್ರು. ಅವರು ಹೇಳೋದನ್ನ ಮೋಹಿನಿ ತನ್ನ ಬಂಗಾರ ಬಣ್ಣದ ಐಫೋನಿನ್ಯಾಗೆ ರೆಕಾರ್ಡ್ ಮಾಡಿಕೊಂತಿದ್ಲು.

ಶಾಂತವಕ್ಕ ಒಂದ್ ಸರ್ತಿ "ಹ್ಞೂ..." ಅಂತ ದೊಡ್ಡದಾಗಿ ಉಸಿರು ಎಳಕೊಂಡು ಒಂದು ಹತ್ತು ಸೆಕೆಂಡು ಯೋಚ್ನೇ ಮಾಡಿದ್ಲು. ನಾವೆಲ್ಲ ಕಂಪ್ಯೂಟರ್ರೋ, ಫೋನೋ, ಸಿನಿಮಾನೋ, ಮೋಟಾರೋ–ರೈಲೋ ಅಂತಾಳೆ ಅಂದುಕೊಂಡು ಖಾತರದಿಂದ ನೋಡ್ತಾ ಇದ್ವಿ. ಮೋಹಿನಿನೂ ತನಗೆ ಕನ್ನಡ ಬರುತ್ತೆ ಅಂತ ತೋರಿಸ್ ಬೇಕು ಅಂತ "ನನ್ ಕಡೇ ನೋಡು..., ಹೇಳಜ್ಜಿ ಹೇಳು" ಅಂತಾ ದೊಂಬಾಲು ಹಾಕಿದ್ಲು. ಶಾಂತವಕ್ಕ ಒಂಥರಾ ಟಿವಿ ನೈನಿನ ರಿಪೋರ್ಟರುಗಳು ಕ್ಯಾಮೆರಾ ನೋಡಿಕೊಂಡೇ ಮಾತಾಡ್ತಾವಲ್ಲ ಹಂಗೆ ಕ್ಯಾಮೆರಾನ ದಿಟ್ಟಿಸಿ ನೋಡಿ, "ನಮ್ಮೂರಿಗೆ ಕರೆಂಟ್ ಬಂತು ನೋಡ್ರಿ, ಎಲ್ಲಕ್ಕಿಂತ ಅದೇ ದೊಡ್ದು! ಅದ್ಯಾವ ಪುಣ್ಯಾತ್ಮ ಕರೆಂಟ್ ಕಂಡ್ ಹಿಡಿದ್ನೋ ಅದೇ ದೊಡ್ಡ ವಿಷ್ಯಾ, ಕರೆಂಟ್ ಇಲ್ಲಾ ಅಂತಂದ್ರೆ ನಿಮ್ಮ ಆಟ ಏನೂ ನಡೆಯಂಗಿಲ್ಲ!" ಅಂದು ಬಿಡ್ತು.

ತನ್ನ್ ಐಫೋನೇ ದೊಡ್ಡು ಅಂತ ಅಂದಕಂಡಿದ್ದ ಮೋಹಿನಿ ಮುಖಾ ಸಪ್ಪಗಾಯ್ತು. ಎಮ್ಮೆಲ್ಲೆ ಸಾಹೇಬ್ರು ಮುಖದ ಮ್ಯಾಲೆ ಇದುವರೆಗೆ ತೇಲಾಡ್ತಿದ್ದ ತೆಳು ನಗೆ ಒಂದು ಕ್ಷಣಾ ನಿಲ್ತು. ಸೇರಿದ್ದ ಜನ ಭೂತ ನೋಡಿದ್ರೇನೋ ಅನ್ನೋ ಹಂಗೆ ಒಂಥರಾ ಸ್ತಂಭೀಭೂತರಾದ್ರು. ಇಷ್ಟರಾಗೆ ಸುಧಾರಿಸಿಕೊಂಡ ಸುಶೀಲಮ್ಮ ಚಪ್ಪಾಳೆ ಹೊಡ್ದು, "ಭಾಳಾ ಸತ್ಯವಾದ ಮಾತು, ಸತ್ಯವಾದು ಮಾತು" ಅಂದು, ಮುಂದೆ "...ಕೇಕ್ ಕಟ್ ಮಾಡ್ರಿ..." ಅಂತ ಆದೇಶ ಕೊಟ್ರು. ಈ ಜನಗಳ ಈ ಪ್ರತಿಕ್ರಿಯೆಯನ್ನ ನಿರೀಕ್ಷೆ ಮಾಡಿರದ ಶಾಂತವಕ್ಕ ತನ್ನ ಮನಸ್ಸಿನೊಳಗೇ – "ಇವೆಲ್ಲ ನಿಮಗೆ ಈ ಜನಮದಾಗ ತಿಳಿಂಗಿಲ್ಲ ಬಿಡ್ರಿ" ಅಂದುಕೊಂಡ ಹಂಗಾಯ್ತು.•



ಕವಿತೆ

ಮಹೇಶ್ ಸೀರಿ



# ಐದುನೂರು ಮತ್ತು ಸಾವಿರದ ರೂಪಾಯಿಗಳ ಆತ್ಮಕಥನ



ಹಿಮಾಲಯದ ಎತ್ತರಕ್ಕೆ ನಾನಿದ್ದೆ ಆಗ
ಪಾತಾಳದ ತಳಕ್ಕೆ ಬಂದು ನಿಂತೆನೀಗ
ವಿಧಿಯ ಆಟವೋ, ಮೋದಿಯ ಮಾಟವೋ
ಸೂತ್ರ ಹರಿದ ಪತಂಗದಂತೆ
ಬೆಲೆಯಿರದೆ ಕಸವಾಗಿ ಹೋದೆ.

ಎಲ್ಲೆಡೆ ಬೇಡಿಕೆಯಲಿ ಕುಣಿಯುತಿದ್ದೆ ಅಂದು
ಮದುವೆಯ ವರನ ಉಪಚಾರಕೆ
ಮಂದಿರದ ದೇವರ ಪೂಜೆಗೆ
ರಾಜಕೀಯಕ್ಕೆ ಮತದಾರರ ಒಲಿಸಲು
ವ್ಯವಹಾರ, ಭ್ರಷ್ಟಾಚಾರ, ಅಪರಾಧಗಳಲ್ಲಿ
ಹೀನ, ಉತ್ತಮ, ಶ್ರೀಮಂತ, ಬಡವರಲ್ಲಿಯೂ
ನಿಲ್ಲದೆ ನಡೆಯಿತು ನನ್ನ ವೈಭವವು.

ಕೆಲವರ ಬದುಕೆಂಬ ಊಟಕೆ ಉಪ್ಪಿನಕಾಯಿಯಾಗದೆ
ಅವರ ದಾಹಕೆ ಊಟವೆಲ್ಲವೂ ನಾನಾಗಲು.
ನನ್ನ ಬಿಳಿಯ ಬಣ್ಣ ಆಯಿತು ಕಪ್ಪಗೆ
ಕಪ್ಪು ಬಿಳಿಯಾಗುವುದಾದರೆ ನಾ ಬಲಿಯಾದಲಿ

ನಾ ಹೋಗುವೆ ಬ್ಯಾಂಕಿಗೆ ಬಲಿಗೆಂದು
ನಗುತಲಿ ನಿಲ್ಲುವೆ ಬ್ಯಾಂಕಿನ ಸರದಿಯಲಿ.
ಬರಗಾಲದಲಿ ಮೇವುಸಿಗದೆ ಗೋವುಗಳು
ಕಸಾಯಿಖಾನೆ ಮುಂದೆ ನಿಂತಂತೆ.

ಭ್ರಷ್ಟಾಚಾರ, ಕಪ್ಪುಧನ, ಉಗ್ರರಿಗೆ ಕಡಿವಾಣ ಹಾಕುತ
ನನ್ನ ಈ ಬದುಕಿನ ಅಂತ್ಯದೊಂದಿಗೆ
ಮತ್ತೆ ಹೊಸ ರೂಪದಲಿ ಜನ್ಮವ ಪಡೆದು ಬರುವೆ
ದೇಶವಾಸಿಗಳ ಕನಸುಗಳನು ಪೂರೈಸಲೆಂದು.

# ಅಮೇರಿಕಾದಲ್ಲಿ ಉಡುಪಿಯ ಶ್ರೀ ಕೃಷ್ಣ ವೃಂದಾವನ

ರಾಘವೇಂದ್ರ ಕುಂದಲಗುರ್ಕಿ





ಲೌಕಿಕ ಬದುಕಿಗೆ ಅರ್ಥ ಹಾಗು ಆರೋಗ್ಯದ ಸ್ವಾಸ್ಥ್ಯತೆ ಹೇಗೆ ಮುಖ್ಯವೋ, ಅದೇ ರೀತಿ ಉತ್ತಮ ಬದುಕಿಗೆ ಹಾಗು ಮೌಲ್ಯಗಳಿಗೆ ಧಾರ್ಮಿಕ ಸ್ವಾಸ್ಥ್ಯತೆಯು ಕೂಡ ಅತಿ ಮುಖ್ಯ. ಎಡಿಸಿನ್ ನಗರದಲ್ಲಿ ದಶಕದ ಹಿಂದೆ ಸ್ಥಾಪಿತವಾದ ಶ್ರೀ ಕೃಷ್ಣ ವೃಂದಾವನ (ಶ್ರೀ ಕೃಷ್ಣ ಮಠ) ಉಡುಪಿಯ ಅಷ್ಟಮಠಗಳೊಲ್ಲೊಂದಾದ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಸ್ವಾಮಿಗಳ ಕನಸಿನ ಕೂಸು. ಇಲ್ಲಿ ಶ್ರೀ ಕೃಷ್ಣನ ಸಾನಿಧ್ಯದೊಡನೆ, ಶ್ರೀ ಮುಖ್ಯಪ್ರಾಣ ದೇವರ ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಸಾನಿಧ್ಯವು ಇದೆ.

ಭಾರತದಿಂದ ಸಾವಿರಾರು ಮೈಲಿಗಳ ದೂರದಲ್ಲಿ ಇದ್ದು, ತಮಗೂ ಹಾಗೂ ತಮ್ಮ ಮಕ್ಕಳಿಗೂ ನಮ್ಮ ಸಂಸ್ಕೃತಿ, ಭಾಷೆ ಹಾಗೂ ಧಾರ್ಮಿಕ ಆಚರಣೆಗಳು ಸಿಗಲಿ ಎಂದು ಸದಾ ಬಯಸುವ ಸಾವಿರಾರು ಭಕ್ತರಿಗೆ ಧರ್ಮದ ಮಾರ್ಗದರ್ಶನ ಮಾಡುತ್ತಿರುವ ದೇವಸ್ಥಾನ.

ಸಾಮಾನ್ಯವಾಗಿ ಭಾರತದಲ್ಲಿ ದೇವಸ್ಥಾನಗಳು ದೇವರ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗಿರುವಂತದ್ದು. ಆದರೆ ಶ್ರೀ ಕೃಷ್ಣ ವೃಂದಾವನ, ದೇವರ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ ಸ್ಥಳವಾಗಿಯೂ, ಸಾಂಸ್ಕೃತಿಕ ರಾಯಭಾರಿಯಾಗಿಯೂ ಕನ್ನಡದ ಜನತೆಗೆ ಒಂದು ಕೊಂಡಿಯಾಗಿದೆ. ಹಲವಾರು ನವನವೀನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇಲ್ಲಿನ ಜನತೆಗೆ ಭಕ್ತಿ, ಸಂಗೀತ, ನಾಟ್ಯ, ನಾಟಕ ಹಾಗು ಸಾತ್ವಿಕ ಜೀವನದ ಮಾರ್ಗದರ್ಶನ ಮಾಡುತ್ತಿದ್ದಾರೆ.

ಅಮೇರಿಕಾದಲ್ಲಿ ಈಗಾಗಲೇ ಫೀನಿಕ್ಸ್, ಲಾಸ್ ಎಂಜಿಲಿಸ್, ಹ್ಯೂಸ್ಟನ್ ಹಾಗು ಸ್ಯಾನ್ ಹೊಸೆ ನಗರಗಳಲ್ಲಿ ಉಡುಪಿ ಪುತ್ತಿಗೆ ಮಠದ ವಿವಿಧ ಶಾಖೆಗಳಿದ್ದು, ದೇಶದ ವಿವಿಧ ಭಾಗಗಳಲ್ಲಿ ಭಕ್ತಾದಿಗಳಿಗೆ ಧಾರ್ಮಿಕ ದಾರಿ ತೋರುತ್ತಿದ್ದಾರೆ.

ಎಡಿಸಿನ್ ನಗರದ ಶ್ರೀ ಕೃಷ್ಣ ವೃಂದಾವನದ ಮುಖ್ಯ ಅರ್ಚಕರು ಹಾಗೂ ಆಡಳಿತದ ಮುಖ್ಯಸ್ತರೂ ಆಗಿರುವ ಶ್ರೀ ಯೋಗೀಂದ್ರ ಭಟ್ ಅವರ ಮುಂದಾಳತ್ವದಲ್ಲಿ ಅದ್ದೂರಿಯಾಗಿ ಶ್ರೀ ಶ್ರೀನಿವಾಸ ಕಲ್ಯಾಣ, ಶ್ರೀ ಸೀತಾ–ರಾಮ ಕಲ್ಯಾಣ, ಶ್ರೀ ಕೃಷ್ಣ ಜನ್ಮಾಷ್ಟಮಿ, ಶ್ರೀಮಧ್ವನವಮಿ ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯನ್ನು ಸಾವಿರಾರು ಭಕ್ತರೊಡನೆ ವಿಜೃಂಭಣೆಯಿಂದ ಪ್ರತೀ ವರ್ಷವು ಆಚರಿಸಲಾಗುತ್ತದೆ.

ಪ್ರತಿ ಭಾನುವಾರ ಮಕ್ಕಳಿಗೆ ಶ್ರೀಭಗವದ್ಗೀತಾ, ಹಿರಿಯರಿಗೆ ವೇದ ಪಾಠ, ಸಂಸ್ಕೃತ ಭಾಷೆ ಹೇಳಿಕೊಡಲಾಗುತ್ತದೆ ಹಾಗೂ ಜೀವನ ಧರ್ಮ, ನಾದೋಪಾಸನ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ ಏರ್ಪಡಿಸಿರುತ್ತಾರೆ.

ಪ್ರತೀ ವರ್ಷವೂ ಶ್ರೀ ಪುರಂದರದಾಸರ ಆಚರಣೆಯ ಸಲುವಾಗಿ ಬೆಳಗ್ಗೆಯಿಂದ ರಾತ್ರಿಯವರೆಗೆ ವಿವಿಧ ಬಗೆಯ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳು, ಶಿವರಾತ್ರಿಯ ಪ್ರಯುಕ್ತ ನಡೆಯುವ ವಿವಿಧ ಶೈಲಿಯ ವಿಶಿಷ್ಟ ನೃತ್ಯ ಕಾರ್ಯಕ್ರಮಗಳು ಬಹಳ ಮನೋಹರವಾದಂತಹ ಅನುಭವಗಳನ್ನು ಕೊಡುತ್ತದೆ.

ನ್ಯೂಜರ್ಸಿ ಹಾಗು ಸುತ್ತಮುತ್ತಲಿನ ರಾಜ್ಯಗಳಿಂದ ಬಂದಂತ ಹಲವಾರು ಸಂಗೀತ ಶಾಲೆಗಳು, ನೃತ್ಯ ಶಾಲೆಗಳು ಭಾಗವಹಿಸಿ ಶ್ರೀ ಕೃಷ್ಣನ ಕೃಪೆಗೆ ಒಳಗಾಗುತ್ತಾರೆ.



ಸಾಂಸ್ಕೃತಿಕ ಕಾರ್ಯಕ್ರಮವಲ್ಲದೆ ಉಚಿತವಾಗಿ ಆರೋಗ್ಯ ತಪಾಸಣೆ, ಫ್ಲೂ ಶಾಟ್ ಶಿಬಿರವನ್ನು ಏರ್ಪಡಿಸಿ ತಮ್ಮ ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸಿರುತ್ತಾರೆ.

ಶ್ರೀ ಕೃಷ್ಣನ ಮಂಟಪದಲ್ಲಿ ಏಕಶಿಲಾ ಸಾಲಿಗ್ರಾಮದ ಕೃಷ್ಣನ ಮೂರ್ತಿಯ ಪ್ರತಿಷ್ಠಾಪನೆಯನ್ನು ನೆರವೇರಿಸಲು ಭರದಿಂದ ಕಾರ್ಯಗಳು ನಡೆಯುತ್ತಿದೆ. ಭಾರತದಲ್ಲಿ ನೂರಾರು ನುರಿತ ಕಲಾಕುಶಲಿಗಳಿಂದ ಗರ್ಭಗುಡಿಯ ಮರದ ಕೆತ್ತನೆ ಕಾರ್ಯಗಳು ನಡೆಯುತ್ತಿದೆ. ಇದಕ್ಕೆ ಹಲವಾರು ಜನರ ಸಹಕಾರ–ಸಹಾಯದ ಅಗತ್ಯವಿದೆ. ಮುಂಬರುವ ಪೀಳಿಗೆಗೆ ಹಾಗೂ ನಮ್ಮೆಲ್ಲರಿಗೂ ಈ ವಿಶಿಷ್ಟ ಕೃಷ್ಣನ ಸೇವೆಯಲ್ಲಿ ಭಾಗಿಯಾಗಲು ಅವಕಾಶವಿದೆ. ಧನ ಸಹಾಯ ಅಥವಾ ಇನ್ಯಾವುದೇ ಸಹಾಯ ಹಸ್ತ ಚಾಚುವವರು ಈ ವಿಳಾಸದಲ್ಲಿ ಸಂಪರ್ಕಿಸಬಹುದು. •

**ಶ್ರೀ ಯೋಗೀಂದ್ರ ಭಟ್,**
215, May street, Edison, Nj, 08837
Ph: 732-283-8982, 732-549-6959
www.krishnavrunda.org



ಯುನೈಟೆಡ್ ನೇಷನ್ಸ್ (UN) ಸರ್ವಧರ್ಮ ಸಮ್ಮೇಳನದಲ್ಲಿ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿಗಳು

# ಅಯ್ಯೋ ಪಾಪ ದೇವ್ರು

ಡಾ. ಶರಣ ಅಂಗಡಿ



‘ಏನೋ ಚಿಂತೆಯಲ್ಲಿರುವಂತಿದೆ ವಿನಾಯಕಜೀ?’ ಹಬ್ಬದ ಸಂಭ್ರಮದಲ್ಲಿ ಸಪ್ಪೆ ಮೋರೆ ಹಾಕಿದ್ದ ಸುಮುಖನನ್ನು ಕೇಳಿದೆ. ಕೇಳಬಾರದಿತ್ತು. ತನ್ನ ಕಷ್ಟ ಕಾರ್ಪಣ್ಯಗಳ ಕಡತವನ್ನೇ ಬಿಚ್ಚಿದ ಗಜಮುಖ.



“ಚಿಂತಿಸದೆ ಇನ್ನೇನು ಮಾಡಲಿ? ಮಣ ಭಾರದ ಸೊಂಡಿಲ ಮೂತಿ ಹೊರಿಸಿದ್ದೀರಿ. ಇದನ್ನು ಹೊತ್ತು ತಿರುಗಿ ಸುಸ್ತಾಗಿದೆ. ಮೇಲಿಂದ ಈ ಡೊಳ್ಳು ಹೊಟ್ಟೆ. ನಿಮಗೆಲ್ಲ ಸಿಕ್ಸ್ ಪ್ಯಾಕ್ಸ್ ಗುರಿಯಾದರೆ, ನನಗೇಕೆ ಈ ಸಿಕ್ ಪ್ಯಾಕ್ ಹೊರೆ. ಝೀರೋ ಟ್ರಾನ್ಸ್‌ಫ್ಯಾಟ್ ಫುಡ್ ಪ್ರಿಯರಾದ ನಿಮಗೆ ನನ್ನ ಆರೋಗ್ಯದ ಕಾಳಜಿಯೇ ಇಲ್ಲ. ನಿಮ್ಮ ಭಕ್ಷ್ಯ ಭೋಜ್ಯಗಳಿಂದ ಈ ಬೊಜ್ಜು ಮೈ ಬರಿಸಿ ಪಾಪದ ಇಲಿಯ ಮೇಲೆ ಹೊರಿಸಿದ್ದೀರಿ. ಅದು ನನ್ನ ತೂಕ ತಡೆಯಲಾಗದೇ ಪ್ರಾಣಿದಯಾ ಸಂಘಕ್ಕೆ ದೂರಿತ್ತಿದೆ. ಕಾನೂನು ರೀತ್ಯಾ ಕ್ರಮಕ್ಕೊಳಗಾಗುವ ಚಿಂತೆ. ಅದು ನನ್ನನ್ನು ಕೆಳಕ್ಕೆ ಬೀಳಿಸಿದಾಗಲೂ ಬಿರಿದ ಹೊಟ್ಟೆಗೆ ಹಾವು ಸುತ್ತಿಕೊಂಡು ಅದನ್ನು ಮನ್ನಿಸಿದ್ದೇ ತಪ್ಪಾಯ್ತೇನೋ? ಹೆಚ್ಚುತ್ತಲೇ ಹೊರಟಿರುವ ಹೊಟ್ಟೆಯ ಸುತ್ತಳತೆಯಿಂದ ಸುಸ್ತಾದ ಸರ್ಪದ್ದೂ ಸಮಸ್ಯೆಯಾಗಿದೆ. ಮುರಿದ ದಂತದ ಕುಳಿ (ಓ ಕ್ಯಾವಿಟಿ)ಯದೊಂದು ಕಾಟ, ಏಕದಂತನ ಚಿಂತೆಯ ಕಾರಣಗಳ ಪಟ್ಟಿ ಮುಂದುವರಿದಿತ್ತು. ಅದಕ್ಕೆ ತಡೆಯಾಗಿ ತೇಲಿ ಬಂತು ಶಿವವಾಣಿ.

‘ನಿನ್ನ ಪರಿಸ್ಥಿತಿ ನನಗೆ ಅರ್ಥವಾಗುತ್ತದೆ ಪುತ್ರಶ್ರೀ, ನೋಡು ನನ್ನ ಪಾಡು. ಸೊಂಟಕ್ಕೆ ಆನೆಯ ಚರ್ಮ ಸುತ್ತಿ ಅರಣ್ಯ ಇಲಾಖೆಯವರ ಕೆಂಗಣ್ಣಿಗೆ ಗುರಿ ಮಾಡಿದ್ದು ಸಾಲದೇ, ಭುಜಕ್ಕೆ ನಾಗರ ಹಾವನ್ನು ಹತ್ತಿಸಿ, ಹಣೆಯ ಮಧ್ಯ ಕಣ್ಣು ತೂರಿಸಿ, ಚಂದ್ರನನ್ನು ತಲೆಗೇರಿಸಿ, ಶಿಖೆಯ ನಡುವೆ ಗಂಗೆಯನ್ನು ಕೂರಿಸಿದ್ದಾರೆ.’

‘ಅಯ್ಯೋ ಶಿವನೇ’ ಅನ್ನಿಸಿತು

‘ನನ್ನ ಹೊರೆಯ ಮುಂದೆ ನಿನ್ನದೇನು ಮಹಾ ಮಿಸ್ಟರ್ ಶಿವ್’

ಓಹೋ ಬ್ರಹ್ಮದೇವ.

‘ನನ್ನ ಪಾಡು ಯಾರಿಗೂ ಬರಬಾರದು. ಒಂದು ತಲೆಯಿಂದಲೇ ಏನೆಲ್ಲ ಪ್ರಾಬ್ಲಮ್ಸ್, ಅನಾಹುತ! ನನಗೆ ನಾಲ್ಕು ತಲೆ ಹೊರಿಸಿ ನಗೆಪಾಟಲಿಗೀಡು ಮಾಡಿದ್ದಾರಲ್ಲಾ. ಇವರನ್ನು ಸೃಷ್ಟಿಸಿ ನನ್ನ ಕತ್ತಿಗೇ ಕುತ್ತು ತಂದುಕೊಂಡೆ. ನೆಗಡಿಯದಾಗ ನಾಲ್ಕೂ ಮೂಗುಗಳಿಗೆ ವ್ಯಾಪೋರಬ್ ಅನ್ನು ರಬ್ ಮಾಡಲು ಪಾಪ ನನ್ನ ಸರಸು (ಓಹೋ ಸರಸ್ವತಿ) ಪಡುವ ಕಷ್ಟ ಇವರಿಗೆ ಹೇಗೆ ಗೊತ್ತಾದೀತು?’

‘ತಲೆನೋವು ಕಣೇ’ ಅಂದ್ರೆ ‘ಯಾವ ತಲೇಲಿರೀ’ ಅಂತ ತುಂಟತನದ ಪ್ರಶ್ನೆ ಕೇಳಿ ಕೆಣಕುತ್ತಾಳೆ ಸರಸಿ. ಅದೊಂದು ಅವಮಾನ.

ಪಾಪ ಅನ್ನಿಸ್ತು.

ನಿಧಾನಕ್ಕೆ ಕೃಷ್ಣನ ಕ್ಯಾಲೆಂಡರಿನೆಡೆಗೆ ಕಣ್ಣು ಹಾಯಿಸಿದೆ. ‘ಏನಯ್ಯಾ ನೋಡ್ತಿದ್ದೀ ಬೆಣ್ಣೆ ಕಳ್ಳ ಅಂತ ಪ್ರಚಾರ ಮಾಡಿದ್ರಿ. ಹೋಗ್ಲಿ ಬಿಡು ಅಂತ ಸುಮ್ಮನಾದೆ. ಪಿಳ್ಳಂಗೋವಿ ಹಿಡಿಸಿ ದನ ಕಾಯುವ ಕೆಲಸ ಮಾಡಿಸಿದ್ರಿ. ಅಲ್ಲಿ ಗೋವರ್ಧನ ಗಿರಿ ಎತ್ತಿ ಹಿಡಕೊಂಡು ನನ್ನ ಕಿರುಬೆರಳು ಮುರಿದಿದ್ದು ಗೊತ್ತಾ ನಿಮಗೆ.

‘ಊಹೂಂ ಇಲ್ಲ’ ತಲೆ ಅಲ್ಲಾಡಿಸಿದೆ.

‘ಒಬ್ಬಳ್ನ ಕಟ್ಕೊಂಡೇ ಏಲ ಏಲ ಒದ್ದಾಡ್ತೀರಿ.’ ಮುಂದುವರಿಯಿತು ಕೃಷ್ಣವಾಣಿ ‘ನನಗೆ ಹದಿನಾರು ಸಾವಿರ ಹೆಂಡ್ತೀರನ್ನ ಗಂಟು ಹಾಕೋಕೆ ಹೇಗ್ರಯ್ಯಾ ಮನಸ್ಸು ಬಂತು ನಿಮಗೆ?. ಪರಮಾತ್ಮ, ಪರಮಾಪ್ತ ಅಂತ ಏನೇನೋ ಹೊಗಳಿದ್ರಲ್ಲ ಅಂತ ಸಂಭವಾಮಿ ಯುಗೇ ಯುಗೇ ಅಂದೆ. ತಪ್ಪು ಮಾಡಿದೆ. ಈ ಯುಗದಲ್ಲಿ ಬರೋಕೆ ಭಯವಾಗುತ್ತೆ. ಎಲ್ಲಿ ಬೆಣ್ಣೆ ಕದ್ದ ತಪ್ಪಿಗೋ ಇಲ್ಲಾ ಬಹುಪತ್ನಿತ್ವದ ಅಪರಾಧಕ್ಕೋ ನನ್ನ ಜನ್ಮ ಸ್ಥಾನಕ್ಕೇ ಅಟ್ಟಿ ಬಿಡ್ತೀರೊ ಅಂತ ಹೆದರಿಕೆ.’

ಕೃಷ್ಣನ ಅಂಜಿಕೆ ಸಹಜವಾದದ್ದೇ ಅನ್ನಿಸಿತು.

‘ಕರೆಕ್ಟಾಗಿ ಚಪ್ಪಿನಾವು ಕೃಷ್ಣ.’ ಎದುರು ಗೋಡೆಯ ಪಟದಲ್ಲಿ ರಾರಾಜಿಸುತ್ತಿದ್ದ ಏಡುಕೊಂಡಲವಾಡು ಉವಾಚ. ‘ಶ್ರೀ ವೆಂಕಟರಮಣ ನಿನಗೇತಕೆ ಬಾರದು ಕರುಣ ಎಂಬ ಇವರ ಆರ್ತನಾದಕ್ಕೆ ಮನಕರಗಿತು. ಧರೆಗಿಳಿದೆ. ಕೆಟ್ಟೆ. ಕಣ್ಣು ಕಾಣದಂತೆ ನಾಮ ಬಳಿದು, ಬೆಟ್ಟ ಹತ್ತಿಸಿ ಬಿಟ್ಟರು. ಮಣಗಟ್ಟಲೆ ಬಂಗಾರ, ವಜ್ರ ವೈಢೂರ್ಯ ಮೈ ಮೇಲೆ ಹೇರಿದರು. ಇದನ್ನು ಸದಾಕಾಲ ಹೊತ್ತು ನಿಲ್ಲುವ ಶಿಕ್ಷೆ ನನಗೆ. ನನ್ನ ಹುಂಡಿಗೆ ಬಂದು ಬೀಳುವ ಅನ್ ಅಕೌಂಟೆಡ್ ಫಾರೆನ್ ಕರೆನ್ಸಿ ಚಿಂತೆ ಬೇರೆ. ನನ್ನ ಹೆಸರಲ್ಲಿ ಯವ್ಯಾವ್ದೋ ಫೈನಾನ್ಸ್ ಕಂಪನಿಗಳು ಹಲವಾರು ಧಂದೆಗಳೂ ಇವೆಯಂತೆ. ಎಲ್ಲಿ ಅವನ್ನೆಲ್ಲ ಕೆದಕಿ ನನ್ನ ಹಿಂದೆ ಸಿಬಿಐ ಛೂ ಬಿಡ್ತಾರೋ ಅನ್ನುವ ಕಳವಳ’ ಮನದ ದುಗುಡವನ್ನು ಸರಸರನೇ ಹೊರಗೆಡಹಿದ ಸಂಕಟರಮಣ.



‘ಈ ಏಳು ಹೆಡೆಯ ಸರ್ಪದ ಮೇಲೆ ಮಲಗಿಸಿ ಸಮುದ್ರಕ್ಕೆಸೆಯುವಂಥ ತಪ್ಪು ನಾನೇನ್ರಯ್ಯ ಮಾಡಿದ್ದೆ? ತುಸು ಆಚೀಚೆ ಹೊರಳಾಡಿದರೂ ಈ ಆದಿ ಶೇಷನ ಬುಸ್ ಬುಸ್ ಬಿಸಿಯುಸಿರು. ಇದು ಸಾಲದು ಅಂತ ಹೊಕ್ಕುಳ ಮಧ್ಯೆ ಕಮಲದ ಹೂ ಸಿಕ್ಕಿಸಿ ಅದರ ಮೇಲೆ ಆ ಬ್ರಹ್ಮನ್ನ ಹೇರಿದ್ದೀರಿ. ಯಾವ ಪಾಪಕ್ಕಾಗಿ ಈ ಶಿಕ್ಷೆ?’ ವಿಲಪಿಸಿದ ವಿಷ್ಣುದೇವ.

‘ಬರೀ ನಿಮ್ದೆ ಪುರಾಣವಾಯಿತಲ್ಲ. ನನ್ನದೂ ಒಂದಷ್ಟು ಕೇಳಿ’. ಮಧುರ ವಾಣಿ ಬಂದಕಡೆಗೆ ದೃಷ್ಟಿ ಹಾಯಿಸಿದೆ. ಧನವರ್ಷಿಣಿ. ‘ಸದಾ ಚಿನ್ನದ ನಾಣ್ಯಗಳ ಮಳೆ ಸುರಿಸುವುದೇ ನನ್ನ ಕೆಲಸ. ಎರಡು ಸಾಲದೆಂದು ನಾಲ್ಕು ಕೈ. ಸದಾ ನಿಂತೇ ಇರಬೇಕು ಕಾಸು ಉದುರಿಸುತ್ತಲೇ ಇರಬೇಕು.’ ಧನ ಲಕ್ಷ್ಮಿಯ ದೂರು.

‘ಮಾತು ಮಾನವೀಕ, ಮೌನ ದೈವೀಕ ಅಂತಾರಲ್ಲ. ಇದೇನಾಶ್ಚರ್ಯ ದೇವರುಗಳೆಲ್ಲ ಮಾತಿಗಿಳಿದು ತಂತಮ್ಮ ಕಷ್ಟ ತೋಡಿಕೊಳ್ಳುತ್ತಲಿದ್ದಾರೆ!. ನಮ್ಮ ಪರಿಕಲ್ಪನೆಗಳ ಭರದಲ್ಲಿ ಅವರ ಬೇಕು ಬೇಡಗಳನ್ನು ಕಡೆಗಣಿಸಿದ್ದು ತಪ್ಪು’ ಎನ್ನುವ ಆಲೋಚನೆಯಲ್ಲಿ ಮುಳುಗಿದ್ದೆ. ಥಟ್ಟನೇ ತೇಲಿಬಂತು ಮತ್ತೊಂದು ಧ್ವನಿ

‘ಇದು ನಿಜವಾಗಿಯೂ ಅನ್ಯಾಯ. ಬೈಪಾಸ್ ಸರ್ಜರಿ ಪೇಶಂಟ್ಗೆ ಮಾಡಿದಂತೆ ನನ್ನ ಎದೆಗೂಡು ಸೀಳಿ ಒಳಗೆ ಸೀತಾರಾಮರನ್ನು ಕೂರಿಸಿದ್ದು ಸರಿಯಲ್ಲ. ಅಲವತ್ತುಕೊಂಡ ಆಂಜನೇಯಸ್ವಾಮಿ.

ಕ್ಯಾಲೆಂಡರಿನಲ್ಲಿನ ಫೋಟೋಜೆನಿಕ್ ಫೇಸ್ ಪೇಲವವಾಗಿತ್ತು.

‘ಅರೆರೆ ಪ್ರಾಣದೇವರಲ್ಲಿ ಪ್ರಾಣ ಸಂಚಾರವಾದಂತಿದೆಯಲ್ಲ’ ಅಂದೆ.

‘ಆಗದೇ ಮತ್ತಿನ್ನೇನು? ದೇವರು ಅಂತ ಏನೇನೋ ಕತೆ ಕಟ್ಟಿ ಹ್ಯಾಗ್ಯಾಗೋ ಚಿತ್ರ ಬರೆದ್ರೆ ಸುಮ್ಮನೆ ಇರಬೇಕಾ? ಹಾಗೆ ಸುಮ್ಮನಿದ್ದದ್ದಕ್ಕೇ ನನ್ನನ್ನು ಹಳ್ಳಿಯ ಅಗಸೆ ಬಾಗಿಲಿನಾಚೆ ನಿಲ್ಲಿಸಿ ಊರಹೊರಗಿನ ಹನುಮಪ್ಪ ನನ್ನಾಗಿಸಿದಿರಿ.ಮೂತಿಯನ್ನು ಸೊಟ್ಟಗೆ ತಿರುವಿ, ಅದಕ್ಕೆ ಕೆಂಪು ಬಣ್ಣ ಬಳಿದು ಮೇಲೆ ಎಣ್ಣೆ ಸವರಿದಿರಿ.’

‘ಏನ್ರಯ್ಯಾ ಬಾಲಕನಾಗಿದ್ದಾಗ ಉದಿಸುವ ಸೂರ್ಯನನ್ನು ಕೆಂಪಾದ ಹಣ್ಣೆಂದು ಭ್ರಮಿಸಿ ತಿನ್ನಲು ಹೋಗುವಷ್ಟು ಬೆಪ್ಪನಾ ನಾನು? ರವಿಯಿಂದ ತಿವಿಸಿಕೊಂಡು ನನ್ನ ಮುಖ ಸೊಟ್ಟಗಾಯ್ತಾ?’ ಕೋಪದಿಂದ ಹನುಮಂತನ ಮುಖ ಮತ್ತಷ್ಟು ಕೆಂಪಗಾಗಿತ್ತು. ವಾಯುಪುತ್ರ ತನ್ನ ವಾಗ್ಝರಿಯನ್ನು ಮುಂದುವರಿಸಿದ. ‘ಒಂದು ಸಾಲದೆಂದು ಐದು ಮುಖ ಹೊಂದಿಸಿ ಪಂಚಮುಖಿಯನ್ನಾಗಿಸಿದಿರಿ. ಆ ಐದು ತಲೆಗಳನ್ನು ಹೊತ್ತು ತಿರುಗುವ ನನ್ನ ಪಾಡೇನು? ಇನ್ನು ನಾನು ಸುಮ್ಮನಿರಲಾರೆ. ಹೀಗೆಲ್ಲ ನಿಮ್ಮ ಇಮ್ಯಾಜಿನೇಶನ್ ಹರಿಯಬಿಟ್ಟು ನನ್ನ ಇಮೇಜ್ಗೇ ಧಕ್ಕೆ ತಂದರೆ ದೇವ ದಯಾ ಸಂಘಕ್ಕೆ ದೂರಿತ್ತು ನಿಮ್ಮ ಮೇಲೆ ಮಾನ ನಷ್ಟ ಮೊಕದ್ದಮೆ ಹೂಡಬೇಕಾದೀತು ಹುಷಾರ್’ ಬಜರಂಗಬಲಿಯ ಬೆದರಿಕೆಗೆ ಬೆವರಿದೆ.

‘ಸಾರಿ ಮಾರುತೀಜೀ’ ಅಂದೆ.

‘ಸುಮ್ನಿರಯ್ಯಾ ಸಾಕು ಮಾರುತೀಜೀ ಅಂತೆ ಮಾರುತೀಜೀ. ನನ್ನಂಥ ಆಜಾನುಬಾಹುವಿನ, ವಜ್ರಕಾಯನ ಹೆಸರನ್ನು ಯಕಶ್ಚಿತ್ ಒಂದು ಮ್ಯಾಚ್ ಬಾಕ್ಸ್ ಸೈಜಿನ, ಹಿಸುಕಿದರೆ ಪುಡಿಯಾಗುವ ಕಾರಿಗೆ ಇಟ್ಟು ನನಗೆ ಅವಮಾನ ಮಾಡಿದ್ದೀರಿ. ನನ್ನ ಹೆಸರಿನ ಜೊತೆ ಸೂಸೂಕಿ ಎಂಬ ಅಪಾರ್ಥಕ್ಕೆಡೆ ಮಾಡುವ ಹೆಸರನ್ನು ಸೇರಿಸಿ ಗೇಲಿ ಮಾಡಿದ್ದೀರಿ. ಮೊನ್ನೆ ರಾಮ್‌ಶ್ರೀ ಅದೇ ಶ್ರೀರಾಮ ದೇವರು ಏನು ಮಾರುತೀ ಸೂಸೂಕೀ? ಅಂತ ಕೇಳಿ ಹಂಗಿಸ್ತಿದ್ರು.’

‘ನನಗೆ ಅಗಿರುವ ಅವಮಾನಕ್ಕೆ ಅಪಾರ ಮೊತ್ತದ ದಂಡ ತೆರುವಂತೆ ನಿಮ್ಮೆಲ್ರ ಮೇಲೂ ಕೇಸ್ ಹಾಕ್ತೀನಿ. ಅಲ್ಲದೇ ನಾನು ಪೇಟೆಂಟ್ ಪಡೆದಿರುವ ನನ್ನ ಹಾರುವ ತಂತ್ರವನ್ನ ನನ್ನ ಅನುಮತಿಯಿಲ್ಲದೇ ಬಳಸಿಕೊಂಡು ಹಾರಾಡ್ತಿದ್ದಾನಂತಲ್ಲ ಅವ್ಯಾವನೋ ಸೂಪರ್ ಮ್ಯಾನ್. ಅವನಿಂದ ಪೇಟೆಂಟ್ ಮೊತ್ತ ಕಕ್ಕಿಸದೇ ಬಿಡೋದಿಲ್ಲ.’

ಕಪೀಶನ ಮಾತುಗಳಿಂದ ಕಳವಳವಾಯ್ತು. ಇತರ ಗಾಡ್‌ಗಳ ಗೊಡವೆಗೆ ಹೋಗುವ ಧೈರ್ಯವಾಗಲಿಲ್ಲ. ‘ಥ್ಯಾಂಕ್ಯು ಮಾರುತೀಶ್ರೀ’ ಅಂತ ಮಾತು ಮುಗಿಸಿದೆ. ‘ನಿದ್ದೇಲಿ ಅದ್ಯಾರಿಗ್ರೀ ಥ್ಯಾಂಕ್ಸು?’ ಪಕ್ಕೆಗೆ ತಿವಿದೆಬ್ಬಿಸಿ ಪ್ರಶ್ನಿಸಿದಳು ಭಾಮಾಶ್ರೀ. ●

ಕವಿತೆ

ರಾಘವೇಂದ್ರ ಕುಂದಲಗುರ್ಕಿ



# ಅಂತರಂಗದ ಚೀತ್ಕಾರ...



ದೇಶದೆಲ್ಲೆಡೆ ಯುದ್ಧ ಛಾಯೆಯ ಕಾರ್ಮೋಡ
ಭೀಭತ್ಸ ದೃಶ್ಯದ ಕರಾಳ ಪ್ರದರ್ಶನ
ತುಂಬಿದೆ ಮನ ಮನೆಗಳಲ್ಲಿ ಬಿಸಿಯುಸಿರಿನ ಹೊಗೆ
ನನಗ್ಯಾಕೆ ಹುಟ್ಟು? ನನಗೇಕೀ ಜೀವನ?

ರವಿಕಿರಣದೊಂದಿಗೆ ಬೆಂಕಿಯುಂಡೆಯ ಮಿಲನ
ಕೋಗಿಲೆಯ ಚಿಲಿಪಿಲಿಯೊಡನೆ ತುಪಾಕಿ ಗುಂಡಿನ ಮಿಲನ
ಬಾನಂಗಳದ ನೇಸರ ತನಕ ನೆತ್ತರ ಛಾಯೆ
ನನಗ್ಯಾಕೆ ಹುಟ್ಟು? ನನಗೇಕೀ ಜೀವನ?



ಚಿಂತೆಯಿಲ್ಲದೆ ರಾಜ, ಚಿತೆಯಿಲ್ಲದ ದೇಹ
ಮತಾಂಧ ಧಾರ್ಮಿಕತೆಯ ಅಟ್ಟಹಾಸ
ನೆಲಯಿಲ್ಲದ ಸಂತೆ, ಜಗಕಿಲ್ಲ ಚಿಂತೆ
ನನಗ್ಯಾಕೆ ಹುಟ್ಟು? ನನಗೇಕಿ ಜೀವನ?

ಬೆಳಕನನುಸರಿಸಿ ಬಡುಗು ದಿಕ್ಕಿಗೊರಟೆ ನಾನು
ಮನ್ನೀರಿನ ಅಲೆಗಳ ಸೆಳತ ಧಿಕ್ಕರಿಸಿ
ವಿಧಿಯ ಬರಹದಲಿ ನಾನೊಂದು ಲೆಕ್ಕ
ಕೊನಗೂ ತಿಳಿಯಲಿಲ್ಲ ಜೀವನದ ಅರ್ಥ.

(ಸಿರಿಯಾ ಯುದ್ಧದಲ್ಲಿ ಮಡಿದ ಅಲೆನ್ ಕುರ್ದಿ
ಹಾಗು ಅಲೆಪ್ಪೋದ ಒಮ್ರಾನ್ ಮಕ್ಕಳ ಕುರಿತ ಕವಿತೆ)





# ಕಟ್ಟೆ ಬಾಯ್ಸ್

ಸಂತೋಷ್ ಕುಮಾರ್
ಕಡ್ಲೇಬೇಳೆ



ಕಟ್ಟೆ ಬಾಯ್ಸ್ ನ್ಯೂ ಜೆರ್ಸಿ ಡೇಟನ್ ನ ಸಮ್ಮರ್ ಫೀಲ್ಡ್ ನಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ ಸೇರಿ ಕ್ರಿಕೆಟ್ ಅಥವಾ ವಾಲಿಬಾಲ್ ಆಡುವ ಕನ್ನಡ ಹುಡುಗರು. ಆದರೆ ತಮ್ಮ ಕಾರ್ಯವ್ಯಾಪ್ತಿಯನ್ನು ಕೇವಲ ಆಟಕ್ಕಷ್ಟೇ ಸೀಮಿತಗೊಳಿಸದೆ, ಆಟದ ನಂತರ ಕೂತು ಕರ್ನಾಟಕದ ವಾರದ ಆಗು ಹೋಗುಗಳನ್ನು ಚರ್ಚಿಸಿ, ಎಲೆಮರೆಯ ಕಾಯಿಯ ಹಾಗೆ ಯಾರೋ ಬಡ ವಿದ್ಯಾರ್ಥಿಗೆ, ವೀರ ಮರಣ ಹೊಂದಿದ ಕನ್ನಡ ಯೋಧನ ಕುಟುಂಬಕ್ಕೆ ಸಹಾಯ ಹಸ್ತ ಚಾಚುವ, ಆತ್ಮ ಹತ್ಯೆ ಮಾಡಿ ಕೊಂಡ ರೈತನ ಮನೆ ಸದ್ದಿಲ್ಲದೇ ದೀಪ ಹಚ್ಚುವ, ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಆರ್ಥಿಕ ಸಹಾಯ, ಅಮೇರಿಕಾದಲ್ಲಿ ನೆಲೆ ಇಲ್ಲದೆ ನೊಂದವರಿಗೆ ಆತ್ಮ ಸ್ಥೈರ್ಯ ತುಂಬುವ ಕೆಲಸ ಮಾಡುವ, ಸಮಾನ ಮನಸ್ಕರ ಅಪ್ಪಟ ಕನ್ನಡ ಹುಡುಗರ ತಂಡ.

ಕಟ್ಟೆ ಬಾಯ್ಸ್ ಮೊದಲಿನಿಂದಲೂ ಎಲೆ ಮರೆಯ ಕಾಯಿಯಂತೆ ತನ್ನ ಕೈಲಾದಷ್ಟು ಸಮಾಜ ಸೇವೆ ಮಾಡುತ್ತಾ ಬಂದಿದೆ. ಸೂರು ಇಲ್ಲದವರಿಗೆ (Homeless), ಆರ್ಥಿಕವಾಗಿ, ಮಾನಸಿಕವಾಗಿ ನೊಂದವರಿಗೆ, ನೇಪಾಳ ಭೂಕಂಪ ಸಂತ್ರಸ್ತರಿಗೆ, ಇದಕ್ಕೆ ಸೇರ್ಪಡೆಯಾಗಿ ಇತ್ತೀಚಿಗೆ ನಮ್ಮನ್ನಗಲಿದ ಯೋಧರ ಕುಟುಂಬಕ್ಕೆ ತನ್ನ ಸಹಾಯ ಹಸ್ತ ಚಾಚಿದೆ.

ಕೋಟಿ ಕೋಟಿ ಜನರ ಹಿತಕ್ಕಾಗಿ ತಮ್ಮ ಜೀವವನ್ನೇ ಪಣಕ್ಕಿಟ್ಟು, ರುದ್ರ ಬೀಕರ ಹಿಮ ಪ್ರದೇಶದ ಗಡಿಯಲ್ಲಿ ಹಗಲಿರುಳು ಎನ್ನದೆ ತಾಯ್ನಾಡನ್ನು ಕಾಯುತ್ತಿದ್ದ ಕನ್ನಡ ನಾಡಿನ ಹೆಮ್ಮೆಯ ವೀರ ಪುತ್ರ, ಯೋಧ, ಸಮರ ಸಿಂಹಗಳಾದ ಧಾರವಾಡ ಜಿಲ್ಲೆಯ ಹನುಮಂತಪ್ಪ ಕೊಪ್ಪದ, ಹಾಸನ ಜಿಲ್ಲೆಯ ನಾಗೇಶ್ ಮತ್ತು ಹೆಚ್ ಡಿ ಕೋಟೆಯ ಮಹೇಶ್ ಹಿಮ ಪಾತ ದಲ್ಲಿ ವೀರ ಮರಣ ವನ್ನಪ್ಪಿ ನಮ್ಮನ್ನಗಲಿರುವುದು ಅಕ್ಷರಗಳಲ್ಲಿ ಹೇಳಲಾಗದ ನೋವು ಮತ್ತು ನಮ್ಮ ದುರ್ದೈವ, ನಿಜಕ್ಕೂ ಭರಿಸಲಾರದ ನಷ್ಟ.

ಸ್ವಾರ್ಥವೇ ತುಂಬಿರುವ ಸಮಾಜದಲ್ಲಿ, ನಿಸ್ವಾರ್ಥ ಸೇವೆಯಿಂದ ತಮ್ಮ ಮಡದಿ, ಪುಟ್ಟ ಪುಟ್ಟ ಮಕ್ಕಳನ್ನು ಬಿಟ್ಟು ದೂರದ ಗಡಿಯಲ್ಲಿ ಪ್ರತಿದಿನ ಶತ್ರುಗಳೊಂದಿಗೆ ಹೋರಾಡುತ್ತ, ಸಾವಿನೊಂದಿಗೆ ಸೆಣಸುತ್ತ ನಮ್ಮನ್ನು ಕಾಯುವ ಅವರ ದೇಶ ಭಕ್ತಿಗೆ ಮತ್ತೇನೂ ಸರಿಸಮವಿಲ್ಲ. ನಮಗೋಸ್ಕರ ತಮ್ಮ ಜೀವ ತೆತ್ತ ಈ ಯೋದರರಿಗೆ ನಮ್ಮ ಜನ್ಮದಲ್ಲಿಯೇ ಋಣ ತೀರುಸುವುದು ಅಸಾಧ್ಯದ ಮಾತೆಂದು ತಿಳಿಸಿದ ಕಟ್ಟೆ ಹುಡುಗರು, ಕೇವಲ ಅಳಿಲು ಸೇವೆ ಯಾಗಿ ಅವರ ಕಿರುಕಾಣಿಕೆಯಾಗಿ ರು 1 ಲಕ್ಷವನ್ನು ವಿನಮ್ರತೆಯಿಂದ ಯೋಧರ ಕುಟುಂಬಕ್ಕೆ ತಲುಪಿಸಿದ್ದಾರೆ.

ಅಕ್ಟೋಬರ್ 28, ಶುಕ್ರವಾರ ಸಂಜೆ ನ್ಯೂ ಜೆರ್ಸಿ ಎಡಿಸನ್ ನ ಬಿಗ್ ಸಿನಿಮಾಸ್ ಚಿತ್ರಮಂದಿರದಲ್ಲಿ ನಿಖಿಲ್ ಅಭಿನಯದ 'ಜಾಗ್ವಾರ್' ಚಿತ್ರವನ್ನು 'ಕಟ್ಟೆ ಬಾಯ್ಸ್' ತಂಡದವರು ಪ್ರೀಮಿಯರ್ ಶೋ ಆಯೋಜಿಸಿದ್ದರು. ನಿರೀಕ್ಷೆಗೂ ಮೀರಿ ಜನಪ್ರವಾಹ ಹರಿದು ಬಂದು ಅತ್ಯಂತ ಯಶಸ್ವಿ ಪ್ರದರ್ಶ ನ ಕಂಡಿತು.ತ

ಇದರ ಮುಂದುವರಿದ ಬಾಗವಾಗಿ ಅಮೇರಿಕಾದಲ್ಲಿ ಕನ್ನಡ ಸಿನಿಮಾಗಳನ್ನು ಪ್ರದರ್ಶಿಸಿ ಬರುವ ಹಣವನ್ನು ಈ ಮೇಲ್ಕಂಡ ಧರ್ಮ ಕಾರ್ಯಗಳಿಗೆ ಉಪಯೋಗಿಸಲು ಕಟ್ಟೆ







ನಮ್ಮನ್ನಗಲಿದ ಯೋಧರಾದ ಧಾರವಾಡ ಜಿಲ್ಲೆಯ ಹನುಮಂತಪ್ಪ ಕೊಪ್ಪದ, ಹಾಸನ ಜಿಲ್ಲೆಯ ನಾಗೇಶ್ ಮತ್ತು ಹೆಚ್ ಡಿ ಕೋಟೆಯ ಮಹೇಶ್.



ಹುಡುಗರು ತೀರ್ಮಾನಿಸಿರುತ್ತಾರೆ. ಅಮೆರಿಕನ್ನಡಿಗರು ತುಂಬು ಹೃದಯದಿಂದ ಈ ಸತ್ಕಾರ್ಯದಲ್ಲಿ ಪಾಲ್ಗೊಳ್ಳಲು ವಿನಮ್ರ ವಿನಂತಿ. ನೀವು ಕೊಡುವ ಪ್ರತಿ ಡಾಲರ್ ಒಂದು ಮನೆ ದೀಪ ಹಚ್ಚುವ ಕಾರ್ಯಕ್ಕೆ ಸದ್ವಿನಿಯೋಗವಾಗುತ್ತದೆ.

ಎಡಿಸನ್ನಲ್ಲಿರುವ ' Ozanam Family Shelter', ನೆಲೆಯಿಲ್ಲದವರಿಗೆ ಆಶ್ರಯ ನೀಡುವ ಒಂದು ಸಂಸ್ಥೆ. ವೈಯಕ್ತಿಕ ಅಥವಾ ವ್ಯವಹಾರಿಕವಾಗಿ ತೊಂದರೆಗೆ ಸಿಲುಕಿ ಜೀವನ ಸಾಗಿಸಲು ಸರಿಯಾದ ದಾರಿ ಕಾಣದೆ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ನೊಂದವರು ಇಂಥಹ ಸಂಸ್ಥೆಯ ಆಶ್ರಯ ಪಡೆಯುತ್ತಾರೆ. ಅಮರಿಕಾ ದಂತಹ ಶ್ರೀಮಂತ ರಾಷ್ಟ್ರದಲ್ಲಿಯೂ ಇಂತಹ ನಿದರ್ಶನಗಳು ಆಶ್ಚರ್ಯ ಮತ್ತು ಅಚ್ಚರಿ ಎನಿಸುತ್ತದೆ.

ಕಟ್ಟೆ ಹುಡುಗರು ಮೊನ್ನೆ ನವಂಬರ್‌ನ ಕೊನೆ ವಾರ ತಮ್ಮ ಮಕ್ಕಳು ಮತ್ತು ಕುಟುಂಬ ದವರೊಂದಿಗೆ ಅಲ್ಲಿಗೆ ತೆರಳಿ, ವಿಧ ವಿಧದ ಸ್ಯಾಂಡ್ ವಿಚ್, ಪಾಸ್ತಾ, ಸಲಾಡ್, ಕೇಕ್ ತಯಾರಿಸಿ, ನೆರೆದ ನೊಂದವರಿಗೆ ವಿತರಿಸಿ, ಉಪಚರಿಸಿ, ಮಾನಸಿಕವಾಗಿ ಧೈರ್ಯ ತುಂಬಿದ್ದು ಗಮನಾರ್ಹ. ತಮ್ಮ ಚಿಕ್ಕ ಮಕ್ಕಳನ್ನು ಇಂತಹ ಒಂದು ಮಹತ್ವದ ಕಾರ್ಯಕ್ರಮದಲ್ಲಿ ತೊಡಗಿಸಿ ಅವರಿಗೆ ಶಿಕ್ಷಣ, ಕ್ರೀಡೆ, ಸಂಸ್ಕೃತಿಯ ಜೊತೆಗೆ ದಾನ–ದರ್ಮ, ಜೀವನ ದ ಮಹತ್ವ, ಎಲ್ಲಕಿಂತ ಹೆಚ್ಚಾಗಿ ಸಹಾಯ ಹಸ್ತ, ಸರಿ ತಪ್ಪುಗಳ ಮಾರ್ಗದರ್ಶನದ ತೋರಿಸಿ ಮಾದರಿಯಾಗಿರುವುದು ಒಂದು ಹೆಮ್ಮೆಯ ವಿಷಯ.

ಕಟ್ಟೆ ಹುಡುಗರು ತಮ್ಮ ಕೈಲಾದಷ್ಟು ಸಮಾಜ ಸೇವೆ ಮಾಡಿ, ಮಾನವೀಯತೆ ಮೆರೆದು ಯಾವುದೇ ಸಂಘ–ಸಂಸ್ಥೆ ಅಥವಾ ಯಾವುದೇ ಜಾತಿ–ಮತ–ರಾಜಕೀಯಕ್ಕೆ ಅವಲಂಬಿಸದೆ 'ಮನಸ್ಸಿದ್ದರೆ ಮಾರ್ಗ' ಎಂದು ಇತರರಿಗೆ ಮಾದರಿಯಾಗಿರುವುದು ಪ್ರಶಂಶನೀಯ. ಮುಂದಿನ ವರ್ಷ 'ಮಾರ್ಚ್–ಎಪ್ರಿಲ್' ನಲ್ಲಿ ಕರ್ನಾಟಕದಿಂದ ಕೆಲವು ನುರಿತ ಕಲಾವಿದರನ್ನು ಕರೆಸಿ ಸಾಂಸ್ಕೃತಿಕ, ಮನರಂಜನೆ ಜೊತೆಗೆ ರಸಮಂಜರಿ ಕಾರ್ಯ ಕ್ರಮ ಮುಖಾಂತರ fund raise ಮಾಡಿ ಕರ್ನಾಟಕದಲ್ಲಿರುವ ಬಡ ಮಕ್ಕಳಿಗೆ ಶಿಕ್ಷಣ, ವಸತಿ ಮತ್ತು ಊಟದ ವ್ಯವಸ್ತೆ ಮಾಡಲು ಯೋಜನೆಗೆ ರೂಪು ರೇಷೆಗಳನ್ನು ಹಾಕಿ ಕೊಳ್ಳುತ್ತಿರುವ ನಮ್ಮ ಕನ್ನಡದ ನ್ಯೂ ಜೆರ್ಸಿ ಕಟ್ಟೆ ಹುಡುಗರ ಬಳಗಕ್ಕೆ ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ಮತ್ತು ಅಶೀರ್ವಾದವೇ ಶ್ರೀ ರಕ್ಷೆ.●







# ಡಾ. ವಿವೇಕ್ ಶಾನಭಾಗ್ ಜೊತೆಗೆ ಪ್ರಸ್ತಾಪ



ರುದ್ರಕುಮಾರ್

ನವೆಂಬರ್ 6, 2016 ಭಾನುವಾರ ಮೀರ ಭಾರ್ಗವ್ ಮನೆಯಲ್ಲಿ ನಡೆದ ಪ್ರಸ್ತಾಪ–71 ರ ಕಾರ್ಯಕ್ರಮದಲ್ಲಿ ಡಾ. ವಿವೇಕ್ ಶಾನಭಾಗ್ ರೊಂದಿಗೆ ಪ್ರಸ್ತಾಪ ಬಳಗ ನಡೆಸಿದ ಪ್ರೀತಿಯ ಸಂವಾದವನ್ನು ನನ್ನ ಅರಿವಿಗೆ ಬಂದಷ್ಟು ಇಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಸಂವಾದದ ಅನೇಕ ವಿಷಯ ವಿಚಾರಗಳು ನನ್ನ ಮನಸ್ಸಿನಲ್ಲಿ ಹಾಯ್ದು ಈ ಪದಗಳ ರೂಪದಲ್ಲಿ ಹೊರಬರುವಾಗ ಲೋಪದೋಷಗಳನ್ನು ಒಳಗೊಂಡಿದ್ದರೆ ಅದರ ಪೂರ್ಣ ಜವಾಬ್ದಾರಿ ನನ್ನದು.

ಅಂದು ಬೆಳಗ್ಗೆ ಅನುಪಮ ಮತ್ತು ನಾನು ಮೀರ ಮನೆ ತಲುಪಿದಾಗ ಡಾ.ಶಾನಭಾಗರು ಆಗಲೇ ಬಂದಿದ್ದರು. ತುರ್ತು ಕಾರಣದಿಂದಾಗಿ ಮೀರ ತಾಯ್ನಾಡಿಗೆ ಹೋಗಬೇಕಾದ್ದರಿಂದ ಭಾರ್ಗವ ಒಬ್ಬರೇ ಅಡುಗೆ ಮನೆ ವ್ಯವಸ್ಥೆ ಮಾಡುತ್ತ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದ ಸ್ನೇಹಿತರನ್ನು ಉಪಚರಿಸುತ್ತಿದ್ದರು. ಡಾ. ವಿವೇಕ್ ಅವರು ಬಂದಂತಹ ಪ್ರಸ್ತಾಪ ಸದಸ್ಯ ಮಿತ್ರರು ಇದ್ದಲ್ಲಿಯೇ ಹತ್ತಿರಕ್ಕೆ ಬಂದು ಪರಿಚಯ ಮಾಡಿಕೊಳ್ಳುವ ರೀತಿ ಆಕರ್ಷಕವಾಗಿತ್ತು. ಮೊದಲ ನೋಟಕ್ಕೇ ಅವರು ನಮಗೆ ಮೆಚ್ಚುಗೆಯಾದರು. ಲಘು ತಿಂಡಿ ಕಾಫೀ ಆದ ನಂತರ ಪ್ರಸ್ತಾಪ ಪ್ರಾರಂಭಗೊಂಡು ಮೊದಲಿಗೆ ಬಾಬು ಅವರು ಡಾ.ಶಾನಭಾಗರನ್ನು ಸಭೆಗೆ ಪರಿಚಯಿಸಿದರು. ಪ್ರಸ್ತಾಪದ ಮೊದಲ ಕಾರ್ಯಕ್ರಮವನ್ನು 2000ದಲ್ಲಿ ಪ್ರೊ.ಯೂ.ಆರ್. ಅನಂತಮೂರ್ತಿಯವರು ಉದ್ಘಾಟಿಸಿದ್ದನ್ನು ನೆನಪಿಸಿಕೊಳ್ಳುತ್ತ ಇಂದು ಅವರ ಅಳಿಯ ಡಾ. ವಿವೇಕ್ ಶಾನಭಾಗ್ ಅವರು ನಡೆಸಿಕೊಡುತ್ತಿರುವುದು ವಿಶೇಷವೆಂದರು.

ವೃತ್ತಿಯಲ್ಲಿ ಇಂಜಿನಿಯರ್ ಆಗಿ ಸುಮಾರು 25 ವರ್ಷಗಳ ಕಾಲ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ನಿರ್ವಹಿಸಿ ಸಧ್ಯದಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಡಾ. ವಿವೇಕ್ ಅವರು ತಮ್ಮ ಪ್ರೀತಿಯ ವಸ್ತುವಾದ ಕನ್ನಡ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಕಳೆದ 30 ವರ್ಷಗಳಿಂದ ಸಾಹಿತ್ಯ ಕೃಷಿ ಮಾಡುತ್ತಿರುವ ಇವರ ಇತ್ತೀಚಿನ ಕಥಾಸಂಕಲನ' ಘಾಚರ್ ಘೋಚರ್' ಆಂಗ್ಲ ಭಾಷೆಗೆ ಭಾಷಾಂತರಗೊಂಡು ಪೆಂಗ್ವಿನ್ ಸಂಸ್ಥೆಯ ಮೂಲಕ ಮುದ್ರಣವಾಗಿರುವ ಸಂಭ್ರಮದಲ್ಲಿದ್ದರು. ಪ್ರಸ್ತಾಪ ಬಳಗವನ್ನು ಶ್ಲಾಘಿಸುತ್ತ ತಮ್ಮ ಮಾತನ್ನು ಪ್ರಾರಂಭಿಸಿದ ವಿವೇಕ್, ಇದು ಬಹಳ ಮಹತ್ವವಾದದ್ದು, ಇಂತಹ ಕಾರ್ಯಕ್ರಮ ಬೆಂಗಳೂರಿನಲ್ಲೂ ಅಪರೂಪವೆಂದರು. ತಾವು ಕೂಡ ಸಾಕಷ್ಟು ಕಾಲ ಹೊರದೇಶಗಳಲ್ಲಿ ವಾಸ ಮಾಡಿ ಹೊರಗಿನಿಂದ ಕನ್ನಡ ಸಾಹಿತ್ಯ ಸಂಸ್ಕೃತಿ ಇನ್ನೂ ಹೆಚ್ಚು ವಿಶಿಷ್ಟವಾಗಿ ಕಾಣುತ್ತದೆ ಎಂದರು. ಮೊದಲಿಗೆ ತಾವು ಸಾಹಿತ್ಯದೆಡೆಗೆ ಬಂದ ದಾರಿಯ ಬಗ್ಗೆ ಸ್ವಲ್ಪ ಮಾತನಾಡಿ ನಂತರ ಪ್ರಶ್ನೋತ್ತರ ರೂಪದಲ್ಲಿ ಪ್ರಸ್ತಾಪ ನಡೆಸಬಹುದೆಂದು ಸೂಚಿಸಿದರು.



ಚಿಕ್ಕಂದಿನಲ್ಲಿ ಓದು ಬರಹಗಳನ್ನು ಕಲಿಯುವಲ್ಲಿ ಅವರ ಅಜ್ಜನವರ ಪಾತ್ರ ಮುಖ್ಯವಾಗಿತ್ತು. ಅಜ್ಜನ ತಂಗಿ ಅಜ್ಜಿಯೊಬ್ಬರ ಕಥೆ ಹೇಳುವಿಕೆಯು ಸೋಜಿಗವಾಗಿತ್ತು. ಯಾವಾಗಲೂ ಅಜ್ಜಿಯವರು 'ನೆರಳಿನ ಕಳ್ಳ' ಎಂಬ ಒಂದೇ ಕಥೆಯನ್ನು ಹೇಳುತ್ತಿದ್ದರಂತೆ! ಪ್ರತೀ ಸಲ ಅದೇ ಕಥೆಯನ್ನು ಬೇರೆ ಬೇರೆ ತರಹ ಹೇಳ್ತಾ ಇದ್ದರಂತೆ. ಅದರಿಂದ ಪ್ರತೀ ಸಲ ಕೇಳಿದಾಗಲೂ ಬೇರೆ ಬೇರೆ ಅನುಭವಗಳು ಆಗುತ್ತಿತ್ತು. ಆಗ ಅನ್ನಿಸದಿದ್ದರೂ, ಆಮೇಲೆ ಅದರ (ಮತ್ತು ಅಜ್ಜಿಯವರ) ಪ್ರಭಾವ ತಮ್ಮ ಮೇಲೆ ಬೀರಿರಬಹುದು ಎಂದು ಅಭಿಪ್ರಾಯಪಟ್ಟರು. ಕಥೆ ಮುಖ್ಯವೋ ಅಥವಾ ಅದರಿಂದ ಆಗುವ ಅನುಭವಗಳು ಮುಖ್ಯವೋ ಎಂಬ ಪ್ರಶ್ನೆ ಅವರಲ್ಲಿ ಬಂದಿತ್ತು. ಅಕ್ಕಿಯಲ್ಲಿ ಅನೇಕ ವಿಧವಾದ ತಿಂಡಿಗಳನ್ನು ಅಜ್ಜಿ ಮಾಡುತ್ತಿದ್ದರು. ಟೈಲರ್ ಆಗಿದ್ದ ಅಜ್ಜಿಯ ಗಂಡ 2 ರೂ ಅಷ್ಟು ಮಾತ್ರ ಸಂಪಾದಿಸಿ ಜಿಲೇಬಿ ತಂದು ತಿನ್ನುವ ನಿತ್ಯದ ಪರಿಪಾಠ ಸೋಜಿಗವೆನಿಸಿತ್ತು.

ಬಾಲ್ಯದಲ್ಲಿ ವಿವೇಕರ ತಂದೆಯವರು ತಮ್ಮ ಬಾಲ್ಯದ, ಬಡತನದ ವಿಷಯಗಳನ್ನು ವಿವರವಾಗಿ ಮತ್ತು ರಸವತ್ತಾಗಿ ಹೇಳುತ್ತಿದ್ದರಂತೆ. ವಿವೇಕ್ ಚಿಕ್ಕಂದಿನಲ್ಲಿ ಬಹಳವಾಗಿ ಓದುತ್ತಿದ್ದರು (ಕೆಲವೊಮ್ಮೆ ದಿನಕ್ಕೆರಡು ಪುಸ್ತಕಗಳು!). ಒಮ್ಮೆ ಮನೆಗೆ ಬಂದಿದ್ದ ಸಂಬಂಧಿಕರು ಹಿಂತಿರುಗುವಾಗ ಕೊಟ್ಟ ದುಡ್ಡನ್ನು ಕೈಯಲ್ಲಿಡಿದು ಅಂಗಡಿಯೊಂದರ ಮುಂದೆ ನಿಂತಾಗ

ಪುಸ್ತಕವೊಂದರ ಶೀರ್ಷಿಕೆಗೆ ಆಕರ್ಷಿತರಾಗಿ ಎಲ್ಲವನ್ನು ಬಿಟ್ಟು ಆ ಪುಸ್ತಕವನ್ನು ಕೊಂಡು ಓದಿದ ವಿವೇಕರಂತಹ ಮಕ್ಕಳು ಬಹು ವಿರಳ. ಹೆಸರಾಂತ ಕಥೆಗಾರ ಯಶವಂತ ಚಿತ್ತಾಲರ ಪುಸ್ತಕಗಳು ವಿವೇಕ್ ಅವರಿಗೆ ಹೆಚ್ಚಿನ ಆಸಕ್ತಿ ಮತ್ತು ಸ್ಫೂರ್ತಿಯನ್ನು ಕೊಟ್ಟವು. ತಾನೂ ಒಬ್ಬ ಲೇಖಕನಾಗಬೇಕೆಂಬ ಬಯಕೆ ಬರಲಾರಂಭಿಸಿತ್ತು. ಮುಂಬೈನಲ್ಲಿದ್ದ ಶ್ರೀ ಚಿತ್ತಾಲರೊಡನೆ ಪತ್ರ ವ್ಯವಹಾರ ಮಾಡುತ್ತ ಮುಂದೆ ಅವರೊಂದಿಗೆ ಚಿತ್ತಾಲರ ಊರು ಹನೇಹಳ್ಳಿಗೆ ಹೋಗುವ ಅವಕಾಶ ಸಿಕ್ಕಿದಾಗ ಯುವ ವಿವೇಕ್‌ರಿಗೆ ಮಹದಾನಂದ! ಅವರೊಂದಿಗೆ ವಿಹರಿಸುತ್ತ ಚಿತ್ತಾಲರ 'ಅಬೋಲಿನ' ಕಥೆಯನ್ನು ಓದಿ ಮನದಲ್ಲಿ ಬೇರೂರಿದ್ದ ಚರ್ಚ್ ನೋಡಲು ಹೋಗಿ ಅದರ ಮುಂದೆ ನಿಂತಾಗ ದಿಗ್ಭ್ರಮೆಯಾಯ್ತು! ಕಥೆಯಲ್ಲಿ ಅಬೋಲಿನಳ ತಂದೆ ಭಾರವಾದ ಮನಸ್ಸಿನಲ್ಲಿ ನಿಧಾನವಾಗ ಮೆಟ್ಟಿಲಿಳಿದು ಬರುವ ದೃಶ್ಯ (ಮೆಟ್ಟಿಲುಗಳು ಮುಗಿಯುವುದೇ ಇಲ್ಲವೋ ಎಂಬ ಭಾವನೆ) ವಿವೇಕರ ಮನದಲ್ಲಿ ದೀರ್ಘವಾದ ಮೆಟ್ಟಿಲುಗಳ ಚಿತ್ರಣ ಅಚ್ಚೊತ್ತಿದ್ದವು. ಆದರೆ ಇಲ್ಲಿ ನೋಡಿದರೆ ಮೂರೇ ಮೂರು ಮೆಟ್ಟಿಲುಗಳು! ನಮ್ಮ ಬದುಕಿನ ಚಿತ್ರಣ ಸಾಹಿತ್ಯದಲ್ಲಿ ಹೇಗೆ ಪರಿಣಾಮಿಕಾರಿಯಾಗಿ ಬಿಂಬಿಸಲ್ಪಡುತ್ತದೆ ಎಂದುದಕ್ಕೆ ಒಂದು ಸುಂದರ ಉದಾಹರಣೆ. ಅನುಭವ ಮುಖ್ಯವಾಗುತ್ತದೆ. ಅದು ನಿಜವಾಗಿರಬೇಕು ಅನ್ನುವ ಹಾಗಿಲ್ಲ.

ಬೆಂಗಳೂರು ಅಥವಾ ಇನ್ನಾವುದೋ ನಗರವಾಗಲಿ, 'ಸಿಟಿ' ಯನ್ನು ಚಿತ್ರಿಸುವ ಪ್ರಯತ್ನ ನಮ್ಮ ಸಾಹಿತ್ಯದಲ್ಲಿ ಇಲ್ಲದಿರುವ ಬಗ್ಗೆ ಮಾತನಾಡುತ್ತ, ಕನ್ನಡಸಾಹಿತ್ಯದಲ್ಲಿ ' ಷಹರ್' (ಸಿಟಿ) ಎಂಬುವ ಅನುಭವವಿಲ್ಲವೆಂದರು. ಹಿಂದೆ ಬಾಂಬೆ ಮತ್ತು ಮದ್ರಾಸು ದೊಡ್ಡ ನಗರಗಳಾಗಿದ್ದವು. ಅವುಗಳ ಬಗ್ಗೆ ಸಾಹಿತ್ಯದಲ್ಲಿ ಸಾಕಷ್ಟು ವಿವರಗಳಿವೆ. ಬೆಂಗಳೂರು ಅನೇಕ ಹಳ್ಳಿಗಳಿಂದಾದ ನಗರ. ಕನ್ನಡದ ಮೊದಲ ಕಾದಂಬರಿ 'ಇಂದಿರಾಬಾಯಿ' (1899) ಯಲ್ಲಿ ಆಗಿನ ಬೆಂಗಳೂರಿನ (ಮಲ್ಲೇಶ್ವರ, ಗಾಂಧಿ ಬಜಾರ್) ವಿವರವಿದೆ.

ವಿವೇಕ್ ಅವರು ಮೂಲತ: ಸಾಹಿತ್ಯದ ವಿದ್ಯಾರ್ಥಿ ಯಾಗಿರಲಿಲ್ಲ. ಇಂಜಿನಿಯರ್ ಪದವಿ ಗಳಿಸಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಲೇ ಸಾಹಿತ್ಯದಲ್ಲಿನ ಆಸಕ್ತಿಯನ್ನು ಉಳಿಸಿಕೊಂಡು ಬೆಳಸಿಕೊಂಡವರು. ಪ್ರತಿದಿನ ನಸುಕಿನಲ್ಲೇ ಎದ್ದು ಸುಮಾರು ಮೂರು ಗಂಟೆಗಳ ಕಾಲ ಸಾಹಿತ್ಯದ ಕೃಷಿ ಮಾಡುವ ಶಿಸ್ತನ್ನು ಮೊದಲಿಂದಲೇ ರೂಢಿಸಿಕೊಂಡರು. ಇದರಿಂದಾಗಿ ರಾತ್ರಿ ಬೇಗ ಮಲಗುವ ಅಭ್ಯಾಸ ಮಾಡಿಕೊಳ್ಳಬೇಕಾಯಿತು. ಹಾಗೆಯೇ ರಾತ್ರಿಯ ಭೋಜನಕೂಟಗಳ (dinner parties) ತ್ಯಾಗ ಅನಿವಾರ್ಯವಾಯ್ತು. ಇಂತಹ ಶಿಸ್ತು ಕನ್ನಡ ಸಾಹಿತ್ಯದಲ್ಲಿ ಸಾಧನೆಗೈಯುವ ಬಯಕೆ ಇರುವ ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ.

ಯು.ಆರ್. ಅನಂತಮೂರ್ತಿಯವರ ಜೊತೆಗಿನ ಸಾಹಿತ್ಯಕ ಒಡನಾಟದ ಬಗ್ಗೆ ಮಾತನಾಡುತ್ತ "ಮೊದಲ ಭೇಟಿ ಹಳ್ಳಿಯಲ್ಲಿ, ನಂತರ ಮೈಸೂರು ಮಾನಸಗಂಗೋತ್ರಿಯಲ್ಲಿ ಮಾತುಕತೆಗಳು, ಅವರ ಮಗಳ ಜೊತೆ (ಅನುರಾಧ) ವಿವಾಹವಾದ ನಂತರ ದೂರದಲ್ಲಿದ್ದು ನಮ್ಮ ನಮ್ಮ ಸಾಹಿತ್ಯ ಕೃಷಿ ಮಾಡಿಕೊಂಡೆವು, ಅವರ ಬರವಣಿಗೆ ನನ್ನ ಮೇಲೆ ಅಷ್ಟಾಗಿ ಪರಿಣಾಮ ಬೀರಲಿಲ್ಲ, ಅವರ ಬಗ್ಗೆ ನಾನು ಬರೆಯಲಿಲ್ಲ, ನನ್ನ ಬಗ್ಗೆ ಅವರು ಬರೆದಿಲ್ಲ. ಅವರ ಮರಣದ ನಂತರವೇ ನಾನು ಅವರ ಬಗ್ಗೆ ಬರೆದದ್ದು. ಪ್ರತಿ ಭೇಟಿಯಲ್ಲೂ ಏನಾದರೂ ಇಂಟರೆಸ್ಟಿಂಗ್ ವಿಷಯ ಹೇಳುತ್ತಿದ್ದರು. "He was not kind on my writings it should be like that" ಎಂದು ಹೇಳಿದರು.

ಬರವಣಿಗೆಯ ಬಗ್ಗೆ ಮಾತನಾಡುತ್ತ 'ನಾನು ಬರೆದಿದ್ದಕ್ಕೆ ನಾನೇ ಮೊದಲ ಓದುಗ, ಕಥೆ ನನ್ನಿಂದ ಬರೆಸಿಕೊಂಡಿದೆ ಎಂಬ ಭಾವನೆ, ಬರೆಯುವುದು ನನಗೆ ಸಂತೋಷ ಕೊಡುತ್ತೆ, ಅದಕ್ಕಾಗಿ ಬರೆಯುತ್ತೇನೆ.ಅದು ಒಂದು ರೀತಿ ಅಂತರಂಗದ ಸುಧಾರಣೆ ಯೂ ಹೌದು. ಬರೆಯುವುದು ಒಂದು ಕಲೆ. ಅನ್ನಿಸಿದ್ದೆಲ್ಲ ಬರೆದರೆ ಅದು ಕಥೆಯಾಗುವುದಿಲ್ಲ. We have to identify false start, otherwise it becomes a bad story. ಬರೆಯುವುದಕ್ಕೆ ತುಂಬಾ ಓದಬೇಕು. ಕುವೆಂಪು, ಕಾರಂತ ಮುಂತಾದ ದಿಗ್ಗಜರ ಅಗಾಧ ಸಾಹಿತ್ಯವನ್ನು ನೋಡಿ. ಒಂದು ಕೃತಿಯನ್ನು ಓದಿದ ಬಳಿಕ ಚಿಂತನೆ ಮಾಡಬೇಕು. ಇದು ನಿರಂತರವಾಗಿ ನಡೆಯಬೇಕು. ಅದು ನಮ್ಮೊಳಗೆ ಸಂಗ್ರಹವಾಗುತ್ತಾ ಹೋಗುತ್ತೆ. ಈಗಿನ ಬರಹಗಾರರು ಬೇಗನೆ ಬರೆದು ಪಬ್ಲಿಷ್ ಮಾಡಬೇಕು ಅನ್ನುವ ಒತ್ತಡಕ್ಕೆ ಸಿಲುಕಿದಂತೆ ಕಾಣುತ್ತದೆ. ಈಗ ವಿಮರ್ಶೆಗಳು ಕೂಡ ಮೊದಲಿನಂತೆ ಪರಿಣಾಮಕಾರಿಯಾಗಿರುವುದಿಲ್ಲ. All want to be politically correct. ವಿಮರ್ಶೆಗಳನ್ನು ಓದಬೇಕು. ಆದರೆ ಅದರಿಂದಾಗಿ ತಲೆಕೆಡಸಿಕೊಳ್ಳುವ ಅಗತ್ಯವಿಲ್ಲ. ನನ್ನ ಮೇಲೆ ಪ್ರೀತಿ ಇರುವ ಮತ್ತು ನನ್ನ ಬರಹಗಳನ್ನು ರಚನಾತ್ಮಕವಾಗಿ ವಿಮರ್ಶಿಸುವವರನ್ನು ನಾನು ಪೂರ್ಣವಾಗಿ ನಂಬುತ್ತೇನೆ'.

ಕಥೆ ಬರೆಯುವಲ್ಲಿ ಒಂದು ನಿರ್ದಿಷ್ಟವಾದ ರೂಪುರೇಷೆಗಳ ಮತ್ತು ತಂತ್ರಗಳ (forms and technique) ಬಗ್ಗೆ ಅಷ್ಟಾಗಿ ಚಿಂತಿಸುವುದಿಲ್ಲವೆಂದು ಹೇಳಿ 'ಮಹಾಭಾರತ'ದ ಶೈಲಿ ತಮಗಿಷ್ಟವೆಂದರು. ಉದಾಹರಣೆಗೆ 'ಯಕ್ಷಪ್ರಶ್ನೆ'ಯನ್ನು ಸಾವಿರಾರು ಬಗೆಗಳಲ್ಲಿ ನಿರೂಪಣೆ ಮಾಡಬಹುದು. Techniques should be like a nail in the chair. It is important but not to be visible. ಇನ್ನೂ ಅನೇಕ ಆಸಕ್ತಿಯುತವಾದ ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರ ಕೊಡುತ್ತಾ, ತಮ್ಮ ಕನ್ನಡ ಸಾಹಿತ್ಯ ಅನುಭಾವದ ಸವಿಯನ್ನು ಡಾ. ವಿವೇಕ್ ಶಾನಭಾಗರು ನಮ್ಮೆಲ್ಲರೊಡನೆ ಹಂಚಿಕೊಳ್ಳುವ ಹಾದಿಯಲ್ಲಿ ನಮಗೆಲ್ಲ ವೇಳೆ ಕಳೆದದ್ದೇ ಗೊತ್ತಾಗಲಿಲ್ಲ. ಪ್ರಸ್ತಾಪ ಬಳಗದವರೆಲ್ಲರೂ ತಂದಿದ್ದ ವಿವಿಧ ರುಚಿಕರ ಭೋಜನವನ್ನು ಹರುಷದಿಂದ ಎಲ್ಲರೂ ಸವಿದೆವು. ಊಟದ ಸಮಯದಲ್ಲೂ ಡಾ.ಶಾನಭಾಗರು ಅನೇಕ ವಿಷಯಗಳನ್ನು ಹಂಚಿಕೊಂಡರು. ಒಟ್ಟಿನಲ್ಲಿ ಈ ಪ್ರಸ್ತಾಪ ಕಾರ್ಯಕ್ರಮ ನಮ್ಮ ಮನದಾಳದಲ್ಲಿ ಅನೇಕ ದಿನಗಳು ಮೆಲಕುಹಾಕುವಂತೆ ಮುದ್ರೆಯನ್ನು ಒತ್ತಿತ್ತು! ●





# ಅಮೇರಿಕದ ನ್ಯೂ ಜೆರ್ಸಿಯಲ್ಲಿ ಕನ್ನಡದ ಡಿಂಡಿಮ

ಡಾ. ಅಶೋಕ್ ಕಟ್ಟಿಮನಿ



ಶುಕ್ರವಾರದ ಸಂಜೆ 6 ಗಂಟೆಗೆ, ಗಾರ್ಡನ್ ಸ್ಟೇಟ್ ಪಾರ್ಕ್ ರಸ್ತೆಯಲ್ಲಿ 70 ಮೈಲು ವೇಗದಲ್ಲಿ ಕಾರು ಓಡಿಸುತ್ತಿದ್ದೆ. ಕಾರಿನ ಸ್ಟೀರಿಯೋದಲ್ಲಿ, 1995ರಲ್ಲಿ ಬಿಡುಗಡೆಯಾದ, ಅಮೇರಿಕ ಅಮೇರಿಕ ಚಿತ್ರದ ಹಾಡು "ಹೇಗಿದೆ ನಮ್ ದೇಶ... ಹೇಗಿದೆ ನಮ್ ಭಾಷೆ...." ಕೇಳಿ ಬರುತ್ತಿತ್ತು. ಮನೋ ಮೂರ್ತಿಯವರ ಸಂಗೀತ ಮತ್ತೆ ಮತ್ತೆ ಕೇಳುವಂತೆ ಮಾಡುತ್ತಿತ್ತು. ಹತ್ತು ಸಾವಿರ ಮೈಲು ದೂರ ಬಂದಿದ್ದರೂ ಎಲ್ಲರನ್ನೂ ಒಂದುಗೂಡಿಸುತ್ತಿರುವ ಕನ್ನಡ ಭಾಷೆ, ಅಭಿಮಾನದ ಬಗ್ಗೆ ಒಂದು ಕ್ಷಣ ಹೆಮ್ಮೆಯೆನಿಸಿತು. ಮನಸ್ಸು, ಈ ವಾರದ ಕೊನೆಯಲ್ಲಿ ಭಾಗವಹಿಸಬೇಕಾದ ವಿವಿಧ ಕಾರ್ಯಕ್ರಮಗಳ ಬಗ್ಗೆ ಚಿಂತಿಸುತ್ತಿತ್ತು. ಮುಂದೇನೋ ಆಕ್ಸಿಡೆಂಟ್ ಇರಬಹುದು... ಟ್ರಾಫಿಕ್ ಕೂಡಿಕೊಳ್ಳುತ್ತ ಕಾರಿನ ವೇಗ ಕಡಿಮೆಯಾಯಿತು. ನ್ಯೂ ಜೆರ್ಸಿ ರಾಜ್ಯದಲ್ಲಿ ಸಾವಿರ ಕನ್ನಡ ಕುಟುಂಬಗಳು, ತಮ್ಮದೇ ಆದ ವಿವಿಧ ಸಂಘಟನೆಗಳ ಮೂಲಕ ಒಂದುಗೂಡುವ ಕನ್ನಡ ಅಭಿಮಾನವನ್ನು, ಮನಸ್ಸು ಮೆಚ್ಚುಗೆಯಿಂದ ಮೆಲುಕು ಹಾಕತೊಡಗಿತು...

ತ್ರಿವೇಣಿ ಕನ್ನಡ ಸಂಘ – ಇತ್ತೀಚಿಗೆ ತನ್ನ ನಲವತ್ತನೆಯ ವಾರ್ಷಿಕೋತ್ಸವವನ್ನು ಆಚರಿಸಿಕೊಂಡ ತ್ರಿವೇಣಿ ಕನ್ನಡ ಸಂಘ, 3 ರಾಜ್ಯಗಳಾದ ನ್ಯೂ ಜೆರ್ಸಿ, ಪೆನ್ಸಿಲ್ವೇನಿಯಾ ಮತ್ತು ಡೆಲಾವೇರ್ ಕನ್ನಡಿಗರಿಗಾಗಿ ಪ್ರಾರಂಭವಾಯಿತು. ಕ್ರಮೇಣ ಎಲ್ಲ ರಾಜ್ಯಗಳಲ್ಲಿ ಕನ್ನಡ ಸಂಘಗಳು ಸ್ಥಾಪಿತಗೊಂಡರೂ, ತ್ರಿವೇಣಿ, ತನ್ನದೇ ಆದ ಐಡೆಂಟಿಟಿ ಉಳಿಸಿಕೊಂಡು ಬಂದಿದೆ. ಅತ್ಯುತ್ತಮ ಕಾರ್ಯಕ್ರಮಗಳ ಜೊತೆ, ಆತ್ಮೀಯ ಕನ್ನಡ ಊಟ ತ್ರಿವೇಣಿಯ ಹೆಗ್ಗಳಿಕೆ. ತ್ರಿವೇಣಿಯ ಅನೇಕ ಸದಸ್ಯರು, ಬೃಂದಾವನದ ಸದಸ್ಯರು ಕೂಡ. ತ್ರಿವೇಣಿ ಮತ್ತು ಬೃಂದಾವನದ ಸದಸ್ಯರು ಜೊತೆ ಸೇರಿ ಮಾಡಿದ "ಹಣ ಹದ್ದು" ನಾಟಕ, 2016ರ ಅಕ್ಕ ಸಮ್ಮೇಳನದಲ್ಲಿ ಸಭಿಕರನ್ನ ರಂಜಿಸಿತು.

ನ್ಯೂ ಜೆರ್ಸಿ ಕೊಂಕಣಿ ಸಭಾ – ನ್ಯೂ ಜೆರ್ಸಿಯ ಕೊಂಕಣಿ ಸಭಾ ಸಂಘವು, ಕರ್ನಾಟಕವು ಸೇರಿದಂತೆ ಭಾರತದ ಕರಾವಳಿಯ ಕೊಂಕಣಿ ಜನಾಂಗವನ್ನು ಪ್ರತಿನಿಧಿಸುವ ಒಂದು ಸಂಘಟನೆ. ಈ ಸಂಘಟನೆಯು ತನ್ನ ಪ್ರದೇಶವಾಸಿ ಕೊಂಕಣಿ ಸದಸ್ಯರನ್ನು ಒಂದುಗೂಡಿಸುವ ಪ್ರಯುಕ್ತ ವರ್ಷಕ್ಕೆ ಎರಡು ಕಾರ್ಯಕ್ರಮಗಳನ್ನು (ಪಿಕ್ನಿಕ್ ಮತ್ತು ದೀಪಾವಳಿ) ಪ್ರಾಯೋಜಿಸುತ್ತಿದೆ. ಇತ್ತೀಚಿಗೆ ನನಗೆ ಪರಿಚಯವಾದ ಈ ಸಂಘದಲ್ಲಿ ನಮ್ಮ ಅನೇಕ ಕನ್ನಡ ಸ್ನೇಹಿತರಿದ್ದಾರೆ.

ಒಕ್ಕಲಿಗರ ಪರಿಷತ್ ಆಫ್ ಅಮೇರಿಕ (ಈಸ್ಟ್) ನ್ಯೂ ಜೆರ್ಸಿಯಲ್ಲಿರುವ ಮತ್ತೊಂದು ದೊಡ್ಡ ಕನ್ನಡಿಗರ ಸಂಘಟನೆ ಒಕ್ಕಲಿಗರ ಪರಿಷತ್. ವರ್ಷದಲ್ಲಿ ಮೂರು ಕಾರ್ಯಕ್ರಮಗಳನ್ನು ಸಂಘಟಿಸುವ ಈ ಸಂಘ, ಕರ್ನಾಟಕದ ಒಕ್ಕಲಿಗ ಸಮುದಾಯದ ಆಶೋತ್ತರಗಳನ್ನು ಕಾಪಾಡುವ ಎಲ್ಲ ಪ್ರಯತ್ನ ಮಾಡುತ್ತಿದೆ. ಕುಟುಂಬಗಳೆಲ್ಲ ವಿಶೇಷವಾಗಿ ಭಾಗವಹಿಸುವ ವಿ.ಪಿ.ಎ ಕಾರ್ಯಕ್ರಮಗಳಲ್ಲಿ ಚಾರಿಟಿಗೆ ಸಾಕಷ್ಟು ಪ್ರಾಧಾನ್ಯತೆ ಕೊಡಲಾಗುತ್ತಿದೆ.

ವೀರಶೈವ ಸಮಾಜ, ನ್ಯೂ ಜೆರ್ಸಿ ಮತ್ತು ನ್ಯೂಯಾರ್ಕ್ – ವೀರಶೈವ ಸಮಾಜ, 150ಕ್ಕೂ ಹೆಚ್ಚು ಕುಟುಂಬದ ಸದಸ್ಯರನ್ನೊಳಗೊಂಡು ವರ್ಷವಿಡೀ ಹಲವಾರು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತದೆ. ಮಕ್ಕಳು, ವಯಸ್ಕರು ಪಾಲ್ಗೊಂಡು, ಕನ್ನಡ ನಾಡಿನ ಭವ್ಯ ಇತಿಹಾಸ, ಕಲೆ, ಸಾಹಿತ್ಯ, ಸಂಗೀತಗಳನ್ನು ಪ್ರಸ್ತುತಪಡಿಸುತ್ತ ಎಲ್ಲರನ್ನೂ ರಂಜಿಸುತ್ತಾರೆ. ವಿಶೇಷವಾಗಿ ಬಸವಾದಿ ಶರಣರ ತತ್ವಗಳನ್ನು ಕುರಿತಾದ ಚಿಂತನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕನ್ನಡದಲ್ಲಿ ಪ್ರದರ್ಶಿಸುವುದು ಹೆಮ್ಮೆಯ ವಿಷಯವಾಗಿದೆ. ಕಳೆದ ವರ್ಷ ನ್ಯೂ ಜೆರ್ಸಿಯಲ್ಲಿ ವಿ ಎಸ ಏನ್ ಎ, ತನ್ನ ವಿಶ್ವ ಸಮ್ಮೇಳನವನ್ನ ಅದ್ದೂರಿಯಾಗಿ ಏರ್ಪಡಿಸಲಾಗಿತ್ತು.

ಮಂಗಳೂರು ಕ್ಯಾಥೊಲಿಕ್ ಅಸೋಸಿಯೇಷನ್– ಮಂಗಳೂರಿನ ಕ್ಯಾಥೊಲಿಕ್ ಸದಸ್ಯರನ್ನು ಒಳಗೊಂಡ ಈ ಸಂಸ್ಥೆ 2009ರಿಂದ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ತನ್ನದೇ ಆದ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಂಡಿದೆ. ಹಿಂದೆ ಬೃಂದಾವನದಲ್ಲಿ. ನಿರ್ದೇಶಕರಾಗಿದ್ದ ಮರ್ಲಿನ್‌ರವರು ಈ ಸಂಘದಲ್ಲಿ ಮುಖ್ಯ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ನಾರ್ತ್ ಅಮೆರಿಕನ್ ಸಂಕೇತಿ ಅಸೋಸಿಯೇಷನ್ – ನ್ಯೂ ಜೆರ್ಸಿ ಸಂಕೇತಿಗಳ ಸಂಘ, ವರ್ಷವಿಡೀ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕನ್ನಡದ ಲಿಪಿಯನ್ನು ಬಳಸುವ ಸಂಕೇತಿ ಭಾಷೆಗಿರುವ ಸಂಬಂಧದಂತೆ, ಹಲವಾರು ಬೃಂದಾವನದ ಸದಸ್ಯರು ಇಲ್ಲಿ ಕೂಡ ಸದಸ್ಯರು. ತಮ್ಮ ವಾರ್ಷಿಕ ಸಮ್ಮೇಳನವನ್ನ ಹಲವಾರು ಬಾರಿ ನ್ಯೂ ಜೆರ್ಸಿಯಲ್ಲಿ ಏರ್ಪಡಿಸಿದ್ದಾರೆ.

ಪ್ರಸ್ತಾಪ – ನ್ಯೂ ಜೆರ್ಸಿಯಲ್ಲಿರುವ ಕನ್ನಡ ಸಾಹಿತ್ಯಾಸಕ್ತರ ಗುಂಪು ಪ್ರಸ್ತಾಪ. ಸಾಹಿತ್ಯದ ಬಗ್ಗೆ ಚರ್ಚೆ, ವಿಷಯ ಹಂಚಿಕೆ, ಕನ್ನಡ ಸಾಹಿತಿಗಳು ಬಂದಾಗ ಅವರೊಡಗಿನ ಮನದಾಳದ ಮಾತು, ಇವು ಪ್ರಸ್ತಾಪದ ಕಾರ್ಯ ಚಟುವಟಿಕೆಗಳು. ಶ್ರೀಕಾಂತ್ ಬಾಬು, ಮೀರಾ ಭಾರ್ಗವ, ಪ್ರಸ್ತಾಪದ ಕಾರ್ಯಕರ್ತರಾದರೂ ಬೃಂದಾವನದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಕಳೆದ ವರ್ಷ ಬೃಂದಾವನ, ಪ್ರಸ್ತಾಪ ಒಟ್ಟಾಗಿ ಸೇರಿ ನಮ್ಮೆಲ್ಲರ ಮೆಚ್ಚಿನ ಕನ್ನಡದ ಕವಿ ಕೆ. ಎಸ. ನಿಸಾರ್ ಅಹ್ಮದ್ ಅವರಿಗಾಗಿ ನೆಡಿಸಿಕೊಟ್ಟ ಕಾರ್ಯಕ್ರಮ "ಬೃಂದಾವನದಲ್ಲಿ ಪ್ರಸ್ತಾಪ" ಜೀವನದಲ್ಲಿ ಒಂದು ಮರೆಯಲಾಗದ ಅನುಭವ. ಈ ಸಂಚಿಕೆಯಲ್ಲಿ ಶ್ರೀ ವಿವೇಕ್ ಶಾನಭಾಗ್‌ರವರಿಗಾಗಿ ಪ್ರಸ್ತಾಪ ನೆಡಿಸಿಕೊಟ್ಟ ಕಾರ್ಯಕ್ರಮವನ್ನ ರುದ್ರಕುಮಾರ್ ಹಿಡಿದಿಟ್ಟಿದ್ದಾರೆ, ದಯವಿಟ್ಟು ಓದಿ.

ಕಟ್ಟೇ ಬಾಯ್ಸ್ – ಆಟಗಳಿಗೆ ಮತ್ತು ಚಾರಿಟಿ ಕಾರ್ಯಗಳಿಗೆ ಒತ್ತು ನೀಡುವ ಈ ಸಂಘ, ಸ್ಪೋರ್ಟ್ಸ್ ಪ್ರೇಮಿಗಳನ್ನು ಹಿಡಿದಿಟ್ಟುಕೊಂಡಿದೆ. ಇವರು ಮಾಡುತ್ತಿರುವ ಚಾರಿಟಿ ಕಾರ್ಯಗಳು ನಿಜಕ್ಕೂ ಶ್ಲಾಘನೀಯ. ಈ ಸಂಚಿಕೆಯಲ್ಲಿ ಕಟ್ಟೇ ಬಾಯ್ಸ್ ಬಗ್ಗೆ ವಿಶೇಷ ಲೇಖನವಿದೆ. ದಯವಿಟ್ಟು ಓದಿ.

ಕನ್ನಡ ಪ್ರೇಮಿಗಳ ರಾಜ್ಯೋತ್ಸವ – ನಮ್ಮ ಅನೇಕ ಸ್ನೇಹಿತರು ಸೇರಿ ಎರಡು ವಾರಗಳ ಹಿಂದೆ ರಾಬರ್ಟ್ ಆಲ್ಬರ್ಟ್ ಪ್ಯಾಲೇಸ್‌ನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೆ. ಸುಮಾರು 100ಕ್ಕೂ ಹೆಚ್ಚು ಜನ ಭಾಗವಸಿದ್ದ ಈ ಕಾರ್ಯಕ್ರಮದಲ್ಲಿ 3 ಗಂಟೆ ಕಳೆದಿದ್ದೇ ತಿಳಿಯಲಿಲ್ಲ. ಮಕ್ಕಳ ಕಾರ್ಯಕ್ರಮ ಸೇರಿ, ಎಲ್ಲ ಕಾರ್ಯಕ್ರಮಗಳನ್ನು ಅಚ್ಚ ಕನ್ನಡದಲ್ಲಿ ನಡೆಸಿಕೊಟ್ಟರು. ವಿಶೇಷವೆಂದರೆ ಈ ಕಾರ್ಯಕ್ರಮದಲ್ಲಿ ಕನ್ನಡದ ಮೇಲೆ ಪ್ರೀತಿಯಿರುವ ಅನೇಕ ಕನ್ನಡೇತರರು ಕೂಡ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಸಂಘಟಿಸಿದ್ದ ಹರೀಶ್ ಮರಿಯಪ್ಪ ಮತ್ತು ಅವರ ಸ್ನೇಹಿತರ ಪ್ರಯತ್ನ ಅಭಿನಂದನಾರ್ಹ.

ಬಹುಶಃ ನ್ಯೂ ಜೆರ್ಸಿಯಲ್ಲಿರುವಷ್ಟು ಚಿತ್ರ ಸಂಗೀತವನ್ನ ಹಾಡುವವರು ಬೇರಾವ ರಾಜ್ಯದಲ್ಲಿ ಇರಲಾರರು ಎಂದರೆ ಆಶ್ಚರ್ಯವಿಲ್ಲ. ತಮ್ಮದೇ ಆದ ಆರ್ಕೆಸ್ಟ್ರಾ ತಂಡವಿರುವ ಹಿರಿಯರ ಜೊತೆ ಉದಯೋನ್ಮುಖ ಹಾಡುಗಾರರು ಕೂಡ ಶ್ರಮದಿಂದ ಮುಂದೆ ಬರಲು ಪ್ರಯತ್ನಿಸುತ್ತಿದ್ದಾರೆ. ನ್ಯೂ ಜೆರ್ಸಿಯಲ್ಲಿ ಸಿಂಹಾದ್ರಿ ಸಂತೇಬೆನ್ನೂರ್‌ರವರ ಹಾಡಿನ ಮಾಧುರ್ಯ ಸವಿಯದವರೇ ಇಲ್ಲ. ಅವರು ಎಸ.ಪಿ.ಬಿ ಹಾಡುಗಳನ್ನ ಹಾಡುತ್ತಿದ್ದರೆ, ಈ ಹಿಂದೆ ನೋಡಿದ ಚಿತ್ರ ದೃಶ್ಯಗಳು ಕಣ್ಣ ಮುಂದೆ ಬಂದು ನಿಲ್ಲುತ್ತವೆ. ಅಂತಹ ಗಾಢ ಅನುಭವ. ಅವರು ತಮ್ಮ ಆರ್ಕೆಸ್ಟ್ರಾ ಟೀಮ್‌ನ ಶ್ರೇಯಸ್, ಕೃತ್ತಿಕಾ, ಪವನ್‌ರೊಂದಿಗೆ ಬೃಂದಾವನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಶ್ರೇಯಸ್ ಸಂಗೀತ ಸಾಧನೆ, ಉದಯೋನ್ಮುಖ ಗಾಯಕರಿಗೆಲ್ಲ ಸ್ಫೂರ್ತಿ. ವೇವ್ಸ್ ಮ್ಯೂಸಿಕ್ ಗ್ರೂಪನ್ನು ವಸಂತ ಶಶಿಯವರು ಹತ್ತಾರು ವರ್ಷಗಳಿಂದ ನೆಡೆಸಿಕೊಂಡು ಬಂದಿದ್ದಾರೆ. ಇಲ್ಲಿ ಸಂಗೀತ ಕಾರ್ಯಕ್ರಮಗಳ ಜೊತೆ ಚಾರಿಟಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಒಂದು ವಿಶೇಷತೆ. ನ್ಯೂ ಜೆರ್ಸಿಯಲ್ಲಿರುವ ಜಯಂತಿ ನಾಡಿಗ್, ನಮಗಾಗಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೆಡೆಸಿ ಕೊಟ್ಟಿದ್ದಾರೆ. ಹಳೆಯ ಚಿತ್ರಗೀತೆಗಳ ಭಂಡಾರವೇ ಆಗಿರುವ ಜಯಂತಿಯವರ ಗೀತೆಗಳನ್ನು ಯು ಟ್ಯೂಬಿನಲ್ಲಿ ಕೇಳುತ್ತಿದ್ದರೆ ಹಳೆಯ ಚಲನಚಿತ್ರ ಗೀತೆಗಳ ಸುಂದರ ಲೋಕ ಕಣ್ಣ ಮುಂದೆ ಕಟ್ಟಿದಂತೆ ಬಂದು ನಿಲ್ಲುತ್ತದೆ. ಇತ್ತೀಚೆಗೆ ಶಿವರಂಜನಿ, ಶ್ರೀಧರ್‌ರವರು ವಿ.ಎಸ. ಎನ್.ಎ ಕಾರ್ಯಕ್ರಮದಲ್ಲಿ ನೆಡಿಸಿಕೊಟ್ಟ ಸಂಗೀತ ಸಂಜೆ ಇನ್ನೂ ಕಿವಿಯಲ್ಲಿ ಇಂಪಾಗಿದೆ.

ಕ್ರೇಜಿ ಕರಿಯೋಕೆ ಗ್ರೂಪ್ – ನ್ಯೂ ಜೆರ್ಸಿಯಲ್ಲಿ ನೆಲೆಸಿ ಹಾಡಲು ಉತ್ಸುಕರಾಗಿರುವ ಕರ್ನಾಟಕದ ಸ್ನೇಹಿತರು ಹಾಗು ಅವರ ಮಕ್ಕಳನ್ನು, ಹಾಡಲು, ಹುರಿದುಂಬಿಸಲು ಕ್ರೇಜಿ ಕೆರೆಯೋಕೆ ಗ್ರೂಪ್ (KKG) ಅನ್ನು ವಿ. ಪ್ರಸನ್ನ ಕುಮಾರ ಹಾಗು ಮೀನಾ ವಸಿಷ್ಟ ಪ್ರಾರಂಭಿಸಿದ್ದಾರೆ. 100ಕ್ಕಿಂತಲೂ ಹೆಚ್ಚು ಸದಸ್ಯರಿರುವ ಈ ಕೆ.ಕೆ.ಜಿ. ತಂಡ, ವರ್ಷಕ್ಕೆ 3–4 ಬಾರಿ ಸೇರುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಅಬಾಲವೃದ್ಧರಾಗಿ ಎಲ್ಲ ಹೊಸ ಗಾಯಕರಿಗೆ "ಟ್ರಾಕ್ಸ್" ಉಪಯೋಗಿಸಿಕೊಂಡು ಹಾಡಲು ಅವಕಾಶ ಮಾಡಿಕೊಡುವ ಕೆ.ಕೆ.ಜಿ ಯಲ್ಲಿ, ನುರಿತ ಗಾಯಕ, ಗಾಯಕಿಯರಿಂದ ಹೊಸಬರಿಗೆ ಕಲಿಯಲು ಸಾಕಷ್ಟು ಅವಕಾಶ. ಸ್ನೇಹಿತರಿಂದ, ಸ್ನೇಹಿತರಿಗಾಗಿ, ಹಾಡಲು, ಹಾಡಿ ನಲಿದಾಡಲು ಹುಟ್ಟಿಕೊಂಡಿರುವ ಒಂದು ಚಿಕ್ಕದಾದ ಚೊಕ್ಕವಾದ, ಸ್ನೇಹಪರವಾದ ತಂಡ...ಕೆ.ಕೆ.ಜಿ !!!

ಹರಿಕಥೆ – ಕನ್ನಡದ ಹರಿಕಥೆ ನಶಿಸಿ ಹೋಗುತ್ತಿರುವ ಸಂದರ್ಭದಲ್ಲಿ, ಅಮೇರಿಕಾದಂತಹ ದೇಶದಲ್ಲಿ, ಈ ಕಲೆಯನ್ನ ಮತ್ತೆ ಪುನರುತ್ಥಾನ ಮಾಡಿದ ಕೀರ್ತಿ ವೀಣಾ ಮೋಹನ್ ಮತ್ತು ಸಂಗಡಿಗರಿಗೆ ಸಲ್ಲಬೇಕು. ಅವರ ಹರಿಕಥೆಯನ್ನ ಕೇಳುತ್ತ ಸಭಿಕರೆಲ್ಲ ಆ ಕಥೆಯ ಪಾತ್ರಗಳಲ್ಲಿ ಒಂದಾಗಿ ಹೋಗುವ ದೃಶ್ಯ ಕಣ್ಣ ಮುಂದೆ ಕಟ್ಟಿದಂತಿದೆ. ತಮ್ಮ ಜೊತೆ ಈಗಿನ ಯುವ ಜನತೆಯನ್ನು ಕೂಡ ಹರಿಕಥೆಯಲ್ಲಿ ಭಾಗವಹಿಸುವಂತೆ ಉತ್ತೇಜಿಸಿ, ಅವಕಾಶ ಮಾಡಿಕೊಡುವ ವೀಣಾರವರ ಪರಿಶ್ರಮ ನಿಜಕ್ಕೂ ಶ್ಲಾಘನೀಯ.

ಕೃಷ್ಣ ಮಂದಿರ – ನ್ಯೂ ಜೆರ್ಸಿಯ ಕನ್ನಡದ ಈ ಸಾಧನೆಗೆ ಕೃಷ್ಣನ ಅನುಗ್ರಹ ಇದ್ದೇ ಇದೆ ಎಂದರೆ ಅತಿಶಯೋಕ್ತಿಯಾಗಲಾರದು. ಕೃಷ್ಣಮಂದಿರದ ಬಗ್ಗೆ ರಾಘವೇಂದ್ರ ಒಂದು ವಿಶೇಷ ಲೇಖನ ಬರೆದಿದ್ದಾರೆ. ಓದಿ.

ಇತ್ತೀಚೆಗೆ ನನ್ನ ಸ್ನೇಹಿತರೊಬ್ಬರು ಬೆಂಗಳೂರಿಗಿಂತ, ನ್ಯೂ ಜೆರ್ಸಿಯಲ್ಲಿಯೇ ಹೆಚ್ಚು ರಂಗಪ್ರವೇಶಗಳಾಗುತ್ತವೆ ಅನ್ನುತ್ತಿದ್ದರು. ಈ ಸಾಧನೆಯ ಕೀರ್ತಿ, ನಮ್ಮ ಹಲವಾರು ಹೆಸರಾಂತ ನೃತ್ಯ ಗುರುಗಳದು. ಅಮೇರಿಕಾದಲ್ಲಿರುವ ನಮ್ಮ ಮಕ್ಕಳಿಗೆಲ್ಲ ನೃತ್ಯ ಕಲಿಸುವ ಅವರ ಶ್ರದ್ಧೆ, ಶ್ರಮ ಅಪಾರ. ಪ್ರಖ್ಯಾತ ನೃತ್ಯ ಗುರುಗಳಾದ ಅಖಿಲ ರಾವ್, ಚೇತನ್ ಹೆಬ್ಬಾರ್ ಮತ್ತು ಅಖಿಲಾಂಡೇಶ್ವರಿ, ಸುಷ್ಮಾ ಶ್ರೇಯಸ್, ರಶ್ಮಿ ಸುಧೀಂದ್ರ, ನ್ಯೂ ಜೆರ್ಸಿಯಲ್ಲಿ ಭರತ ನಾಟ್ಯದ ಹೆಜ್ಜೆಯ ಗೆಜ್ಜೆ ಧ್ವನಿ ಯಾವಾಗಲೂ ಘಲ್ಲು ಘಲ್ಲು ಎನ್ನುವಂತೆ ನೋಡಿಕೊಳ್ಳುತ್ತಿದ್ದಾರೆ.

ಶಾಸ್ತ್ರೀಯ ಸಂಗೀತ ಮತ್ತು ವಾದ್ಯಗಳ ವಿಶೇಷ ತರಬೇತಿಗಾಗಿ ಹೆಸರಾಂತ ಸಂಗೀತ ಸಾಧಕರಿರುವುದು ನ್ಯೂ ಜೆರ್ಸಿ ಮಕ್ಕಳ ಅದೃಷ್ಟ. ಬೃಂದಾವನದ ಹಲವಾರು ಕಾರ್ಯಕ್ರಮಗಳಲ್ಲಿ ಆಸ್ಥೆಯಿಂದ ಭಾಗವಹಿಸುವ ನಮ್ಮವರೇ ಆದ ಸುಚಿತ್ರ, ಲಕ್ಷ್ಮೀಶ್, ವಿನುತಾ ಶ್ರೀಧರ್, ಶಾರದಾ ಖಂಡಿವೆಲ್ಲಿ, ಮೀರಾ ಭಾರ್ಗವ, ಶಿವರಂಜನಿ ಇವರ ಕೊಡುಗೆ ಅಪಾರ. ಜೊತೆಗೆ ಆಗಾಗ ಇವರ ಸಂಗೀತ ಕೇಳುವ ಭಾಗ್ಯ ನಮ್ಮದು. ಇವರೆಲ್ಲರ ಬಗ್ಗೆ ಬರೆಯುತ್ತ ಹೋದರೆ ಹಲವಾರು ಪುಟಗಳೇ ಆದೀತು, ಸ್ಥಳಾಭಾವದಿಂದ ನಾನದನ್ನು ಪ್ರಯತ್ನಿಸಿಲ್ಲ. ನನ್ನ ತಿಳುವಳಿಕೆಗೆ ಬಾರದೆ ಹಲವಾರು ನೃತ್ಯ ಮತ್ತು ಸಂಗೀತ ಶಿಕ್ಷಕರ ಹೆಸರು ಬಿಟ್ಟು ಹೋಗಿರುವ ಸಾಧ್ಯತೆಯೂ ಉಂಟು.

ಕನ್ನಡ ರೇಡಿಯೋ – ಇತ್ತೀಚೆಗೆ ನೀವು ಪ್ರತಿ ಭಾನುವಾರ ಬಿತ್ತರವಾಗುವ ನ್ಯೂ ಜೆರ್ಸಿಯ ಕನ್ನಡ ರೇಡಿಯೋ ಕಾರ್ಯಕ್ರಮ ಕೇಳಿರಲಿಕ್ಕೂ ಸಾಕು. ಈಗ ಈ ಕಾರ್ಯಕ್ರಮವನ್ನ ಉಷಾ ಚೆಂಗ ನೆಡೆಸಿ ಕೊಡುತ್ತಿದ್ದಾರೆ. ಚೆನ್ನಾಗಿ ಮೂಡಿ ಬರುತ್ತಿರುವ ಈ ಕಾರ್ಯಕ್ರಮದ ಶೋತೃಗಳ ಸಂಖ್ಯೆ ದಿನ ದಿನಕ್ಕೂ ಹೆಚ್ಚುತ್ತಿದೆ.

ಒಟ್ಟಾರೆ ಇಪ್ಪತ್ತಕ್ಕೂ ಹೆಚ್ಚು ವಿವಿಧ ಸಂಘಟನೆಗಳಿರುವ ನಮ್ಮ ನ್ಯೂ ಜೆರ್ಸಿಯಲ್ಲಿ, ಬೃಂದಾವನ ಕನ್ನಡ ಸಂಘ, ತಾಯಿ ಬೇರಿನಂತೆ ಎಲ್ಲೆಡೆ ಹಬ್ಬಿ, ಹಾಸುಹೊಕ್ಕಾಗಿ ಬೆಳೆದು ಇಲ್ಲೊಂದು ಸುಂದರ ಕೊಂಡಿಯಾಗಿ ನಿಂತಿದೆ. ಕನ್ನಡದ ಡಿಂಡಿಮ ಎಲ್ಲೆಡೆ ಮೊಳಗುತ್ತಿದೆ. ನಾವಲ್ಲ ಸೇರಿ ಹೆಚ್ಚು ಹೆಚ್ಚು ಕನ್ನಡದ ಹಬ್ಬ ಆಚರಿಸುತ್ತಿದ್ದೇವೆ. ಇದಕ್ಕಿಂತ ಇನ್ನೇನು ಬೇಕು?...

ಟ್ರಾಫಿಕ್ ನಿಧಾನವಾಗಿ ಕರಗಿ, ಕಾರು ಮುಂದೆ ಸಾಗಲು ಅನುವು ಮಾಡಿಕೊಡುತ್ತಿತ್ತು. ಮನಸ್ಸು ನ್ಯೂ ಜೆರ್ಸಿಯ ಕನ್ನಡ ಸಂಘಟನೆಗಳಿಂದ ಸಾಗಿ, ನಾಳಿನ ದಿನಚರಿ ಲೆಕ್ಕ ಹಾಕತೊಡಗಿತು. ಕಾರಿನಲ್ಲಿದ್ದ 2010ರ ಒಂದು ಅಕ್ಕ ಸಿಡಿ ಯನ್ನು ಹಾಕಿದೆ. ನನ್ನ ನೆಚ್ಚಿನ ಕವಿ ಕುವೆಂಪುರವರ " ..ಎಲ್ಲಾದರೂ ಇರು.. ಎಂತಾದರು ಇರು....ಎಂದೆಂದಿಗೂ ನೀ ಕನ್ನಡವಾಗಿರು.." ಹಾಡು, ಡಾ. ರಾಜಕುಮಾರ್ ರವರ ಕಂಠ ಸಿರಿಯಲ್ಲಿ ಸುಮಧುರವಾಗಿ ಕೇಳಿ ಬರುತ್ತಿತ್ತು.●



ತ್ರಿವೇಣಿ ಕನ್ನಡ ಸಂಘ


ನ್ಯೂ ಜೆರ್ಸಿ ಕೊಂಕಣಿ ಸಭಾ


ಒಕ್ಕಲಿಗರ ಪರಿಷತ್ ಆಫ್ ಅಮೇರಿಕ (ಈಸ್ಟ್)



ವೀರಶೈವ ಸಮಾಜ, ನ್ಯೂ ಜೆರ್ಸಿ ಮತ್ತು ನ್ಯೂಯಾರ್ಕ್



ಮಂಗಳೂರು ಕ್ಯಾಥೋಲಿಕ್ ಅಸೋಸಿಯೇಷನ್



ಪ್ರಸ್ತಾಪ – ಕವಿ ನಿಸ್ಸಾರ್ ಅಹ್ಮದ್ ರವರೊಂದಿಗೆ



ಕನ್ನಡ ಪ್ರೇಮಿಗಳ ರಾಜ್ಯೋತ್ಸವ



ಹರಿಕಥೆ – ವೀಣಾ ಮೋಹನ್ ಮತ್ತು ಸಂಗಡಿಗರು



ಮ್ಯೂಸಿಕ್ ಸ್ಟೀಕ್ಸ್ – ಸಿಂಹಾದ್ರಿ ಸಂತೇಬೆನ್ನೂರ್, ಶ್ರೇಯಸ್, ಪವನ್, ಕೃತ್ತಿಕಾ



ಕ್ರೇಜಿ ಕರಿಯೋಕೆ ಗ್ರೂಪ್



ನೃತ್ಯೋಪಾಸನ








# ಚಿತ್ರ ಬೃಂದಾವನ

## ನಗೆ ಹಬ್ಬ – Nage Habba Feb 15, 2015











## ವಸಂತೋತ್ಸವ ೧೫ – Vasantotsava April 15, 2015

















## ಮುಖ್ಯಮಂತ್ರಿ ನಾಟಕ – Mukhyamantri Drama June 17, 2015





















## ವನವಿಹಾರ ೧೫ – Picnic-15 Aug 01, 2015
















## ಉಪ್ಪಿ ಜೊತೆ ಸಂತೋಷ ಕೂಟ – Uppi Party Sept 15, 2015







## ನಾವಿಕ ಪ್ರವಾಸ – Navika Sept 4-6, 2015












## ಗಣೇಶ ಹಬ್ಬ – Ganesh Habba Sept 19, 2015










## ಯುವ ಬೃಂದಾವನ ಕಾನ್ಫರೆನ್ಸ್ ೧೫೪ YB Conference Nov 25, 2015











# ಕನ್ನಡ ರಾಜ್ಯೋತ್ಸವ ೧೫ Kannada Rajyotsava Dec 6, 2015













# ವಸಂತೋತ್ಸವ ೧೫ – Vasantotsava April 19, 2016

















## ವನವಿಹಾರ ೧೬ – Picnic July 9, 2016





















## ಅಕ್ಕ ಪ್ರವಾಸ ೧೬ – Akka Pravasa Sept 2 - 4 , 2016















## ಅಕ್ಕ ಪ್ರವಾಸ ೧೬ – Akka Pravasa Sept 2 - 4 , 2016















## ಗಣೇಶ ಹಬ್ಬ ೧೬ – Ganesha Habba Sept 17, 2016












## ಗಣೇಶ ಹಬ್ಬ ೧೬ – Ganesha Habba Sept 17, 2016






















## Important Events around Brindavana

















# Important Events around Brindavana































# ಪ್ರಾಯೋಜಕರು

ಎಲ್ಲರಿಗೂ
ಹೊಸ ವರುಷದ ಶುಭಾಶಯಗಳು

ಬೃಂದಾವನ 'ಮಿಲನ'
ತಂಡಕ್ಕೆ ನೀವು ತೋರಿದ ಪ್ರೀತಿ, ಸಹಕಾರ
ಮತ್ತು ಪ್ರೋತ್ಸಾಹಕ್ಕೆ ನಾವು ಅಭಾರಿಗಳು !



Adithi, Mallik, Sandhya & Anagha Prasad



ನಮ್ಮೀ ಬೃಂದಾವನ ನ್ಯೂಜೆರ್ಸಿ
ಕನ್ನಡ ಮಕ್ಕಳಿಗೆ ನಂದ ಗೋಕುಲವಾಗಲಿ!



Best wishes from Bhaskar, Haritha, Neha & Siri

Best wishes






## Best wishes



From
Santosh Kumar, Smitha, Chaitanya, Prerana,
Tharanath & Arunalatha





## ಬೃಂದಾವನ 'ಮಿಲನ' ತಂಡಕ್ಕೆ ಶುಭಾಶಯಗಳು



Shailesh Uppina, Lakshmi Ramachandrappa
and Susmitha Shailesh

ಬೃಂದಾವನದ ಮಿಲನ ತಂಡ ಎರಡು ವರುಷ ಮಿನುಗಿತು.
ಕನ್ನಡ ಕಲಿಸೋಣವೆಂದು ಇಲ್ಲಿ ಮೂರು ಶಾಲೆ ತೆರೆಯಿತು.
ಯುವ ಬೃಂದಾವನದ ಶಕ್ತಿ ಯುಕ್ತಿ ಇನ್ನಷ್ಟು ಬಲಪಡಿಸಿತು.
ನಿಮ್ಮಕಾರ್ಯಕುಶಲತೆಗೆ 'ಸಂತೃಪ್ತಿ' ಕೈಮುಗಿಯಿತು.

**ಸುಮಧುರಸ್ನೇಹಸ**
**'ಸಂತೃಪ್ತಿ' ಕುಟುಂಬದ**
**ಹಾರ್ದಿಕ ಶುಭಾಶಯಗಳು**



ಉಷಾ, ಪ್ರಸನ್ನ, ಸ್ನೇಹ ಹಾಗು ಸುಹಾಸ್

# Best wishes



From
Kallur Family



ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ ತಾಯ್ನಾಡ ಜಯಭೇರಿ ನಾವಾದೆವೆನ್ನಿ.
– ಜಿ.ವಿ. ಅಯ್ಯರ್





ಬೃಂದಾವನದ ಮಿಲನ ತಂಡಕ್ಕೆ, ನ್ಯೂಜೆರ್ಸಿಯ
ಕನ್ನಡ ಸ್ನೇಹಿತರಿಗೆ ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು.

ಡಾ. ಅಶೋಕ್ಕಟ್ಟಿಮನಿ, ವನಮಾಲಾ, ಅಮೂಲ್ಯ, ಅನನ್ಯ, ಆದಿತ್ಯ.

## Best Wishes
## to
## Milana Team

From Gadigi Family
Suresh Gadigi, Hamsa Ambarish,
Aditri Gadigi and Adhya Gadigi

With Best Compliments

from

**B-Hive IT Solutions Pvt Ltd**
**Bangalore, India**


**DISTRIBUTORS OF DROBO AND ORICO DATA STORAGE PRODUCTS IN INDIA.**

Tel: +91 82773 97288
Email : info@b-hive group.com
www.droboindia.com www.oricoindia.com





# With Best Wishes



Dr Sri Sai Gowda,
Archana, Amya, Arnav

## Our Best Wishes to Brindavana Milana team



## Nithyavibhuthi

Sri. Srinivas Bhatter is a certified Pancharatra Agama Pravera priest and offers priest services for all religious functions in and around New Jersey and is fluent in English, Tamil, Kannada, Telugu and Hindi. Please contact Sri. Bhatter on 347-828-5081 / nithyavibhuthi@gmail.com or visit nithyavibhuthi.org for more info

## Best wishes to

# Brindavana "Milana" Team

completing a phenomenal 2 Years serving the NJ Kannada Community and appreciate all the support to make the 9th AKKA WKC Successful !

**Priya, Raj Patil and family**

**President - AKKA**

## Best wishes to

# Brindavana "Milana" Team

on this milestone and also appreciate the whole-hearted support for 9th AKKA WKC!


**From**

**Suchetha, Sharath Bhandary & Family**

**Vice President - AKKA**







# ಬೃಂದಾವನದ ಅತಿಥಿಗಳು

## ಸಾಹಿತ್ಯ ಬೃಂದಾವನ 2015


Dr. BKS Verma


Dr. K Putthuraya


Shri. Mahabalamurthy Kodlakere


Shri. Mysore Natraj


Shri. Srivatsa Joshi

## ಸಾಹಿತ್ಯ ಬೃಂದಾವನ 2016


Shri. Chatnalli Mahesh


Dr.Sharan Angadi


Smt. Kavya Kadame Nagarakatte



**BEST WISHES**
FROM BEN KANTHARAJU



Ben Kantharaju
Web: www.beekayonline.com
Ph: 732-672-9844
E-mail:ben@beekayonline.com

Beekay Financial Servicesis

PRODUCTS & SERVICES WE OFFER

- Auto, Home & Rental Insurance
- Life, Health & Disabilvity Insurance
- Group Medical, Dental & Vision Plans Retirement & Education planning
- Visitors Insurance for International Travelers
- Medicare for Seniors

# MEDICAL CARE ASSOCIATES, L.L.C.

**1740 OAK TREE RD. EDISON, NJ 08820**
**PH: 732-494-5000/1445 FAX: 732-494-6698**

**"Serving community for over two decades"**



**Dr. Ram Bangalore**
Lung Specialist
Sleep Medicine Specialist
Palliative Care Specialist



**Dr. Shivani Sharma**
Primary Care
Internal Medicine

*Best Wishes From*
**MEDICAL CARE ASSOCIATES**

*Serving The Community For Over Two Decades*

• Internal Medicine • Lung Specialist
• Sleep Medicine Specialist • Palliative Care Specialist

Dr. Bangalore • Ph: (732) 494-5000 • 1740 Oak Tree Road, Edison, NJ 08820